ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 10 ಸೋಮವಾರ 2023

ಸಂಪುಟ: 43 | ಸಂಚಿಕೆ: 350 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹುಲಿ ಸಂರಕ್ಷಿತ ಪ್ರದೇಶಗಳ 50ನೇ ವಾರ್ಷಿಕೋತ್ಸವ

ವಿಶ್ವದಲ್ಲೇ ಹುಲಿಗಳ ಸಂಖ್ಯೆಯಲ್ಲಿ ಭಾರತಕ್ಕೆ ಸಿಂಹಪಾಲು

■ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಿದ ಪ್ರಧಾನಿ ಮೋದಿ ■ ವನ್ಯಜೀವಿ ಸಂರಕ್ಷಣೆಗೆ ಅಗತ್ಯ ಕ್ರಮ ■ ಮುಂಬರುವ ವರ್ಷದಲ್ಲಿ ಇನ್ನಷ್ಟು ಸಾಧನೆ ಸಾಧ್ಯ



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಅರಣ್ಯ ಇಲಾಖೆ, ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರಾಧಿಕಾರ(ಎನ್‌ಟಿಸಿಎ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಹುಲಿ ಸಂರಕ್ಷಿತ ಪ್ರದೇಶಗಳ 50ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ 2022ನೇ ಸಾಲಿನ ಹುಲಿ ಸಮೀಕ್ಷಾ ವರದಿಯನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದರು. ಕೇಂದ್ರದ ಪರಿಸರ ಹಾಗೂ ಅರಣ್ಯ ಸಚಿವ ಭೂಪೇಂದ್ರ ಯಾದವ್, ಕೇಂದ್ರದ ಪರಿಸರ ಮತ್ತು ಅರಣ್ಯ ಖಾತೆ ರಾಜ್ಯ ಸಚಿವ ಅಶ್ವಿನಿಕುಮಾರ್ ಚೌಭೆ ಚಿತ್ರದಲ್ಲಿದ್ದಾರೆ.

> “ವನ್ಯಜೀವಿ ಸಂರಕ್ಷಣೆಯಲ್ಲಿ ಭಾರತ ತನ್ನದೇ ಆದ ವಿಶಿಷ್ಟ ಸಾಧನೆ ಮಾಡಿದೆ. ಭಾರತದ ಸಂಸ್ಕೃತಿಯಲ್ಲಿ ಪ್ರಕೃತಿ ಸಂರಕ್ಷಣೆಯೂ ಒಂದು ಭಾಗವಾಗಿದೆ. 2022ರ ಸಮೀಕ್ಷೆ ವರದಿ ಅನುಸಾರ ಭಾರತದ 3,167 ಹುಲಿ ಹೊಂದಿದೆ. 30 ಸಾವಿರ ಆನೆ, 3 ಸಾವಿರ ಒಂಟಿ ಕೊಂಬಿನ ಘೇಂಡಾಮೃಗ, ಏಷ್ಯಾಟಿಕ್ ಸಿಂಹಗಳನ್ನು ಹೊಂದಿರುವ ವಿಶ್ವದ ಏಕೈಕ ದೇಶ ಭಾರತ. ನಮ್ಮಲ್ಲಿ 2015ರಲ್ಲಿ 525 ಸಿಂಹಗಳಿದ್ದವು. 2020ರಲ್ಲಿ ಅವುಗಳ ಸಂಖ್ಯೆ 675ಕ್ಕೆ ಏರಿದೆ. ದೇಶದಲ್ಲಿ ನಾಲ್ಕು ವರ್ಷದಲ್ಲಿ ಚಿರತೆಗಳ ಸಂಖ್ಯೆಯಲ್ಲಿ ಶೇ.60ರಷ್ಟು ಹೆಚ್ಚಾಗಿದೆ. ಅಲ್ಲದೆ, ವನ್ಯಜೀವಿ ಸಂರಕ್ಷಣೆಯ ಮೊದಲ ಹೆಜ್ಜೆಯಾಗಿ ದೇಶದಲ್ಲಿ ನಶಿಸಿ ಹೋಗಿರುವ ಚೀತಾಗಳ ಸಂತತಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ದಕ್ಷಿಣ ಆಫ್ರಿಕಾದಿಂದ ಚೀತಾ ತಂದು ಬಿಡುಗಡೆ ಮಾಡಲಾಯಿತು. 70 ವರ್ಷದ ನಂತರ ಇದೀಗ ದೇಶದಲ್ಲಿ ಚೀತಾ ಸಂತತಿ ಮರುಹುಟ್ಟು ಪಡೆಯುತ್ತಿದೆ. 4 ಮರಿಗಳಿಗೆ ಚೀತಾ ಜನ್ಮ ನೀಡಿದೆ. ಇದು ವನ್ಯಜೀವಿ ಗಳ ಸಂರಕ್ಷಣೆಯ ಯಶಸ್ಸಿನ ಒಂದು ಭಾಗವಾಗಿದೆ. **–ನರೇಂದ್ರ ಮೋದಿ, ಪ್ರಧಾನಿ**

> **ಹುಲಿಗಳ ಸಂಖ್ಯೆ ಹೆಚ್ಚಾಗಿರುವುದಕ್ಕೆ ಕೇವಲ ಭಾರತ ಮಾತ್ರವಲ್ಲದೆ ವಿಶ್ವವೇ ಸಂಭ್ರಮಿಸುವ ಹಾಗೂ ಯಶಸ್ಸಾಗಿದೆ. ಭಾರತದಲ್ಲಿರುವ 53 ಹುಲಿ ಸಂರಕ್ಷಿತ ಪ್ರದೇಶವು 75 ಸಾವಿರ ಚದರ ಕಿ.ಮಿ ವ್ಯಾಪ್ತಿಯಲ್ಲಿ ಆವರಿಸಿದೆ. ಅಲ್ಲದೆ, ಇನ್ನಷ್ಟು ಪ್ರದೇಶದಲ್ಲಿ ಅರಣ್ಯ ವಿಸ್ತರಿಸಲಾಗುತ್ತಿದೆ. ಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಇಲಾಖೆ ಹಾಗೂ ಸಿಬ್ಬಂದಿ ಗಿಡ–ಮರ ಬೆಳೆಸಲು ಶ್ರಮಿಸುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಹುಲಿಗಳ ಸಂಖ್ಯೆಯಲ್ಲಿ ಇನ್ನಷ್ಟು ಹೆಚ್ಚಾಗಲಿದೆ. –ನರೇಂದ್ರ ಮೋದಿ**


ಮೈಸೂರು,ಏ.9(ಎಂಟಿವೈ)–ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ವಿಶ್ವದ ಹುಲಿಗಳ ಸಂಖ್ಯೆಯಲ್ಲಿ ಭಾರತದ ಪಾಲು ಶೇ.75ರಷ್ಟಿರುವುದು ಹೆಮ್ಮೆ ಪಡುವ ಸಂಗತಿ ಎಂದು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಅರಣ್ಯ ಇಲಾಖೆ, ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರಾಧಿಕಾರ(ಎನ್‌ಟಿಸಿಎ) ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಹುಲಿ ಸಂರಕ್ಷಿತ ಪ್ರದೇಶಗಳ 50ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ 2022ನೇ ಸಾಲಿನ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಿ ಮಾತನಾಡಿದ ಅವರು, ವಿಶ್ವದ ಹುಲಿಗಳ ಸಂಖ್ಯೆಯಲ್ಲಿ ಶೇ.75ರಷ್ಟು ಹುಲಿಗಳು ಭಾರತದಲ್ಲಿ ನೆಲೆಸಿರುವುದು ಸಂತೋಷವನ್ನುಂಟು ಮಾಡಿದೆ. ಅಳಿವಿ ನಂಚಿನಲ್ಲಿದ್ದ ಹುಲಿಗಳ ಸಂರಕ್ಷಣೆಗಾಗಿ 1973ರಲ್ಲಿ ಹುಲಿ ಯೋಜನೆ ಜಾರಿ ಗೊಳಿಸಲಾಯಿತು. ಈ ಹುಲಿ ಯೋಜನೆಗೆ 50 ವರ್ಷ ಸಂದಿದ್ದು, ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಕಳೆದಿದೆ. ಈ ಸಂದರ್ಭದಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳ ಸಂಖ್ಯೆಯೂ ಹೆಚ್ಚಾಗಿದೆ. ಹುಲಿಗಳ ಸಂಖ್ಯೆಯೂ ಹೆಚ್ಚಾಗಿದೆ. ಅಲ್ಲದೆ, ಹುಲಿ ಸೇರಿದಂತೆ ವನ್ಯಜೀವಿಗಳ ಸಂರಕ್ಷಣೆಗಾಗಿ ದೇಶದಲ್ಲಿ ಕೈಗೊಂಡಿರುವ ಕ್ರಮದಿಂದಾಗಿ ನಮ್ಮ ದೇಶದಲ್ಲಿ ಹುಲಿಗಳು ಸೇರಿದಂತೆ ವಿವಿಧ ಪ್ರಾಣಿಗಳ ಸಂಖ್ಯೆಯಲ್ಲಿ ಗಮನಾರ್ಹ ಸುಧಾರಣೆ ಕಂಡಿದೆ ಎಂದು ಪ್ರಧಾನಿ ಮೋದಿ ಶ್ಲಾಘಿಸಿದರು.

ವಿಶ್ವದ ಅನೇಕ ರಾಷ್ಟ್ರಗಳ ವನ್ಯಜೀವಿ ಪ್ರೇಮಿಗಳಲ್ಲಿ ಆತಂಕ ಮನೆ ಮಾಡಿದೆ. ಆ ದೇಶದಲ್ಲಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿ ಹಾಗೂ ಹುಲಿಗಳ ಸಂಖ್ಯೆ ಕ್ಷೀಣಿಸುತ್ತಿರುವುದು ಅಲ್ಲಿನ ಜನರ ಚಿಂಗೆಗೀಡು ಮಾಡಿದೆ. ಆದರೆ, ನಮ್ಮಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಅನೇಕ ಕಾರಣವಿದೆ. ● 3ನೇ ಪುಟಕ್ಕೆ

ಬಂಡೀಪುರದ ರಮ್ಯ ಪ್ರಕೃತಿ ಸೌಂದರ್ಯ ಸವಿದ ಮೋದಿ

- ■ ಪ್ರಧಾನಿಗೆ ಆನೆ, ಜಿಂಕೆ, ಕಾಡೆಮ್ಮೆ ದರ್ಶನ; ಕಾಣಿಸಿಕೊಳ್ಳದ ಹುಲಿರಾಯ!
- ■ ತೆಪ್ಪಕಾಡು ಆನೆ ಶಿಬಿರಕ್ಕೆ ಭೇಟಿ; ಆನೆಗಳಿಗೆ ಕಬ್ಬು ನೀಡಿ ಖುಷಿಪಟ್ಟ ನಮೋ
- ■ ಬೈನಾಕುಲರ್ ಹಿಡಿದು ರುದ್ರ ರಮಣೀಯ ಕಾಡು ವೀಕ್ಷಣೆ ಮಾಡಿದ ಪ್ರಧಾನಿ




ಚಾಮರಾಜನಗರ, ಏ.9(ಎಸ್‌ಎಸ್)–ಹುಲಿ ಯೋಜನೆಯ ಸುವರ್ಣ ಮಹೋತ್ಸವದ ಅಂಗವಾಗಿ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಅರಣ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಭೇಟಿ ನೀಡಿ ಎರಡು ಗಂಟೆಗಳ ಕಾಲ ಸಫಾರಿ ನಡೆಸಿದರು.

ಮೈಸೂರಿನಿಂದ ವಾಯುಪಡೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಹೊರಟ ನರೇಂದ್ರ ಮೋದಿ ಬೆಳಗ್ಗೆ 7.20ರ ಸುಮಾರಿಗೆ ಮೇಲುಕಾನಹಳ್ಳಿಯ ಸಫಾರಿ ಕೇಂದ್ರದ ಬಳಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಹೆಲಿಪ್ಯಾಡ್‌ಗೆ ಬಂದಿಳಿದರು. ಇವರನ್ನು ಹಿರಿಯ ಅರಣ್ಯಾಧಿಕಾರಿಗಳಾದ ಡಿ.ಡಿ.ಜಿ. ಸುಬ್ರಮಣ್ಯಂ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣ ಪ್ರಾಧಿಕಾರದ ಐಜಿಪಿ ಮುರುಳಿ ಸ್ವಾಗತಿಸಿದರು. ಹಸಿರು ಜಾಕೆಟ್, ಖಾಕಿ ಪ್ಯಾಂಟ್, ಟೋಪಿ ಹಾಗೂ ಕಪ್ಪು ಬಣ್ಣದ ಶೂ ಧರಿಸಿದ ಪ್ರಧಾನಿ ಸಫಾರಿಗೆ ● 8ನೇ ಪುಟಕ್ಕೆ

ಬಂಡೀಪುರದಿಂದ ಮೈಸೂರಿಗೆ ತಡವಾಗಿ ಬಂದ ಪ್ರಧಾನಿ





ಮೈಸೂರು,ಏ.9(ಎಂಟಿವೈ)–ಮೈಸೂರಿನಿಂದ ಬಂಡೀ ಪುರಕ್ಕೆ ಹೋಗುವಾಗ ನಿಗಧಿತ ಸಮಯಕ್ಕೆ ತೆರಳಿದ ಪ್ರಧಾನಿ ಮೋದಿ ಅವರು, ಸಫಾರಿ ಮುಗಿಸಿ ಮೈಸೂರಿಗೆ ಒಂದೂವರೆ ಗಂಟೆ ತಡವಾಗಿ ಬಂದರು.

ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಿಂದ ಭಾನುವಾರ ಬೆಳಗ್ಗೆ 6.20ಕ್ಕೆ ಹೋಟೆಲ್‌ನಿಂದ ನಂಜನಗೂಡು ರಸ್ತೆಯ ಮಾರ್ಗವಾಗಿ ಮಂಡಕಳ್ಳಿ ವಿಮಾನನಿಲ್ದಾಣ ತಲುಪಿ, ಅಲ್ಲಿಂದ ಬೆಳಗ್ಗೆ 7.25ಕ್ಕೆ ಗುಂಡ್ಲುಪೇಟೆ ತಾಲೂಕಿನ ಮೇಲುಕಾಮನಹಳ್ಳಿಯ ತಾತ್ಕಾಲಿಕ ಹೆಲಿಪ್ಯಾಡ್‌ಗೆ ತಲುಪಿದರು. 7.45ಕ್ಕೆ ಬಂಡೀಪುರ ಹಳೆ ಕ್ಯಾಂಪಸ್‌ಗೆ ಆಗಮಿಸಿ ಸಫಾರಿ ಮುಗಿಸಿಕೊಂಡು ನೆರೆಯ ತಮಿಳುನಾಡಿನ ಮಧುಮಲೆ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಭೇಟಿ ನೀಡಿದ ಪ್ರಧಾನಿ ಅವರು, ಆಸ್ಕರ್ ಪ್ರಶಸ್ತಿ ವಿಜೇತ ‘ದಿ ಎಲಿಫೆಂಟ್ ವಿಸ್ಪರರ್ಸ್’ ಸಾಕ್ಷ್ಯಚಿತ್ರದಲ್ಲಿರುವ ಕಾವಾಡಿ ದಂಪತಿ ಬೊಮ್ಮ–ಬೆಳ್ಳಿ ಅವರನ್ನು ಭೇಟಿ ಮಾಡಿದರು. ಅಲ್ಲಿಯಿಂದ ಬೆಳಗ್ಗೆ 10.20ಕ್ಕೆ ಓವೆಲ್ ಮೈದಾನಕ್ಕೆ ಹೆಲಿಕಾಪ್ಟರ್‌ನಲ್ಲಿ ಬಂದಿಳಿಯಬೇಕಿತ್ತು. ಆದರೆ, 2 ಗಂಟೆ ತಡವಾಗಿ ಆಗಮಿಸಿದರು. ಮಧ್ಯಾಹ್ನ 12.25ಕ್ಕೆ ಬಂದ ಅವರು, ಅಲ್ಲಿಂದ ರಸ್ತೆ ಮಾರ್ಗವಾಗಿ ● 8ನೇ ಪುಟಕ್ಕೆ

ಇಂದು ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ



ನವದೆಹಲಿ,ಏ.9– ಎಲ್ಲವೂ ನಿರೀಕ್ಷೆಯಂತೆ ನಡೆದರೆ ನಾಳೆ ಬಿಜೆಪಿಯ ಮೊದಲ ಹಂತದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 224 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಸಂಬಂಧ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ. ಕೆಲವು ಕ್ಷೇತ್ರಗಳಿಗೆ ಆಕಾಂಕ್ಷಿಗಳ ಪಟ್ಟಿ ಹೆಚ್ಚಾಗಿರುವುದರಿಂದ ಸ್ವಲ್ಪ ವಿಳಂಬವಾಗಿದೆ ಎಂದರು. ಇಂದು ಸಂಜೆ ಪಕ್ಷದ ಸಂಸದೀಯ ಮಂಡಳಿ ಸಭೆ ನಡೆದಿದ್ದು, ಪ್ರತಿಯೊಂದು ಕ್ಷೇತ್ರಗಳ ಬಗ್ಗೆ ವರಿಷ್ಠರು ಚರ್ಚಿಸಿ ಯಾರಿಗೆ ಟಿಕೆಟ್ ನೀಡಬೇಕೆಂದು ಚರ್ಚಿಸಲಿದ್ದಾರೆ. ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ. ಪಕ್ಷದ ಕೋರ್ ಕಮಿಟಿಯು ಸುದೀರ್ಘ ಚರ್ಚೆ ನಡೆಸಿ ಕೇಂದ್ರ ಚುನಾವಣಾ ಸಮಿತಿಗೆ ಪಟ್ಟಿ ಕಳುಹಿಸಿಕೊಡಲಾಗಿದೆ. ● 2ನೇ ಪುಟಕ್ಕೆ

ಕಾಂಗ್ರೆಸ್ ಸಿಇಸಿ ಸಭೆ: ರಾಹುಲ್ ಗಾಂಧಿ ಹಾಜರು

ನವದೆಹಲಿ: ಮೇ 10ರಂದು ನಡೆಯಲಿರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಮುನ್ನ ಕರ್ನಾಟಕದಲ್ಲಿ ಉಳಿದಿರುವ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸಭೆ ನಡೆಸಿದರು. ಈ ಸಭೆಯಲ್ಲಿ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಕೂಡ ಭಾಗವಹಿಸಿದ್ದರು. ಇನ್ನುಳಿದ ಪ್ರತಿ ಕ್ಷೇತ್ರಗಳ ಕುರಿತು ಸೂಕ್ಷ್ಮ ಚರ್ಚೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ. ● 2ನೇ ಪುಟಕ್ಕೆ

‘ದಿ ಎಲಿಫೆಂಟ್ ವಿಸ್ಪರರ್ಸ್’ ಆಸ್ಕರ್ ಪ್ರಶಸ್ತಿ ವಿಜೇತ ಕಿರುಚಿತ್ರ ಪಾತ್ರಧಾರಿ

ಆನೆ ಪಾಲಕರಾದ ಬೊಮ್ಮನ್, ಬೆಳ್ಳಿ ದಂಪತಿ ಭೇಟಿ ಮಾಡಿದ ಮೋದಿ



ಮಧುಮಲೈ,ಏ.9(ಎಂಟಿವೈ, ಎಸ್‌ಎಸ್)–ಪ್ರಧಾನಿ ನರೇಂದ್ರ ಮೋದಿ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಭಾನುವಾರ ಭೇಟಿ ನೀಡಿ, ಆಸ್ಕರ್ ಅವಾರ್ಡ್ ಪಡೆದಿರುವ ‘ದಿ ಎಲಿಫೆಂಟ್ ವಿಸ್ಪರರ್ಸ್’ ಕಿರುಚಿತ್ರದ ಪ್ರಮುಖ ಪಾತ್ರಧಾರಿಗಳಾದ ಹಾಗೂ ಆನೆಗಳ ಪಾಲಕರಾದ ಬೊಮ್ಮನ್ ಹಾಗೂ ಬೆಳ್ಳಿ ದಂಪತಿಗಳ ಕುಶಲೋಪರಿ ವಿಚಾರಿಸಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ಮಾಡಿದ ಬಳಿಕ ಕೆಕ್ಕನಹಳ್ಳ ಬಾರ್ಡರ್‌ನಿಂದ ರಸ್ತೆ ಮಾರ್ಗವಾಗಿ ಮಧುಮಲೈನ ತೆಪ್ಪಕಾಡು ಆನೆ ಶಿಬಿರಕ್ಕೆ ತೆರಳಿದರು. ಈ ವೇಳೆ ತಾಯಿಯಿಂದ ಬೇರ್ಪಟ್ಟಿದ್ದ ಆನೆ ಮರಿಯನ್ನು ಪಾಲನೆ ಮಾಡಿರುವ ಹಾಗೂ ಆಸ್ಕರ್ ಅವಾರ್ಡ್ ಪಡೆದಿರುವ ‘ದಿ ಎಲಿಫೆಂಟ್ ವಿಸ್ಪರರ್ಸ್’ ಕಿರುಚಿತ್ರದ ಪ್ರಮುಖ ಪಾತ್ರಧಾರಿಗಳಾದ ಹಾಗೂ ಆನೆಗಳ ಪಾಲಕರಾದ ಬೊಮ್ಮನ್ ಹಾಗೂ ಬೆಳ್ಳಿ ದಂಪತಿಯೊಂದಿಗೆ ಚರ್ಚಿಸಿದರು. ಬಳಿಕ ಆನೆ ಶಿಬಿರದ ಕೃಷ್ಣ, ಭಾಮ, ರಾಣಿ ಸೇರಿದಂತೆ ಇನ್ನಿತರ ಆನೆಗಳಿಗೆ ಕಬ್ಬು ನೀಡಿ, ಉಪಚರಿಸಿದರು. ● 8ನೇ ಪುಟಕ್ಕೆ

ಚಿಣ್ಣರ ಮೇಳಕ್ಕೆ ವರ್ಣರಂಜಿತ ಚಾಲನೆ



ಮೈಸೂರು ರಂಗಾಯಣದಲ್ಲಿ ಆಯೋಜಿಸಿರುವ ‘ಚಿಣ್ಣರ ಮೇಳ’ ಬೇಸಿಗೆ ಶಿಬಿರವನ್ನು ಸಂಗೀತ ನಿರ್ದೇಶಕ, ಗಾಯಕ ವಾಸುಕಿ ವೈಭವ್, ಮಕ್ಕಳಿಗೆ ಬಣ್ಣ ಹಚ್ಚುವ ಮೂಲಕ ಉದ್ಘಾಟಿಸಿದರು. ಹಿರಿಯ ಕಲಾವಿದ ಶಿವಾಜಿ ರಾವ್ ಜಾದವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಕಿರಿಯ ವುಶು ಚಾಂಪಿಯನ್ ಕುಮಾರಿ ಪ್ರಣತಿ(ಮಠಪತಿ ಬಲದಲ್ಲಿದ್ದಾರೆ), ಶಿಬಿರದ ನಿರ್ದೇಶಕ ಕೃಷ್ಣಕುಮಾರ್ ನಾರ್ಣಕಜೆ ಮತ್ತಿತರರಿದ್ದರು.

ಮೈಸೂರು, ಏ.9(ಎಸ್‌ಬಿಡಿ)– ಮೈಸೂರಿನ ರಂಗಾಯಣದಲ್ಲಿ ‘ನಮ್ಮೀ ತಾಯ್ನೆಲ’ ಶೀರ್ಷಿಕೆಯಡಿ ಆಯೋಜಿಸಿರುವ 25 ದಿನಗಳ ‘ಚಿಣ್ಣರ ಮೇಳ’ಕ್ಕೆ ಭಾನುವಾರ ವರ್ಣರಂಜಿತ ಚಾಲನೆ ದೊರಕಿತು.


ಸಂಗೀತ ನಿರ್ದೇಶಕ, ಗಾಯಕ, ನಟ ವಾಸುಕಿ ವೈಭವ್, ಮಕ್ಕಳಿಗೆ ಬಣ್ಣ ಹಚ್ಚುವ ಮೂಲಕ ಈ ಬಾರಿಯ ‘ಚಿಣ್ಣರ ಮೇಳ’ ಬೇಸಿಗೆ ಶಿಬಿರಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರಲ್ಲದೆ, ಮನೋಜ್ಞ ಗೀತ ಗಾಯನದ ಮೂಲಕ ಮಕ್ಕಳೊಂದಿಗೆ ಮಗುವಾಗಿ ನೆರೆದಿದ್ದವರನ್ನು ರಂಜಿಸಿದರು.

ಇದಕ್ಕೂ ಮುನ್ನ ಚಿಣ್ಣರ ಮೇಳದ ‘ನಮ್ಮೀ ತಾಯ್ನೆಲ’ ಆಶಯಗೀತೆ ಹಾಗೂ ಶ್ರೀನಿವಾಸ ಭಟ್ಟರು ರಚಿಸಿದ ಮಕ್ಕಳ ಹಾಡನ್ನು ರಂಗಾಯಣದ ಕಲಾವಿದರು ಹಾಡಿದರು. ಇದೇ ವೇಳೆ ರಂಗಾಯಣ ಸಂಗೀತ ನಿರ್ದೇಶಕರಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿ, ಇತ್ತೀಚೆಗೆ ನಿಧನರಾದ ಶ್ರೀನಿವಾಸಭಟ್ಟರ(ಚೀನಿ) ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಸಲ್ಲಿಸಿದರು. ಈ ಕಾರ್ಯಕ್ರಮವನ್ನು ಚೀನಿ ಅವರಿಗೆ ಸಮರ್ಪಿಸಲಾಯಿತು. ಶಿಬಿರದ ನಿರ್ದೇಶಕ ಕೃಷ್ಣಕುಮಾರ್ ನಾರ್ಣಕಜೆ, ಶ್ರೀನಿವಾಸಭಟ್ಟರ ಜೀವನ–ಸಾಧನೆಯನ್ನು ತಿಳಿಸಿಕೊಟ್ಟರು.

ನಂತರ ‘ಇಂದಿನ ವಾರ ಶುಭ ವಾರ...’ ದಾಸವಾಣಿ ಪ್ರಸ್ತುತಿಯೊಂದಿಗೆ ಮಾತು ಆರಂಭಿಸಿದ ವಾಸುಕಿ ವೈಭವ್, ನನ್ನ ಜೀವನದಲ್ಲಿ ರಂಗಭೂಮಿ ಮಹತ್ವದ ಪಾತ್ರ ವಹಿಸಿದೆ. ಶಾಲೆಯಲ್ಲಿ ಶಿಕ್ಷಣ ಪಡೆದರೆ, ರಂಗಭೂಮಿಯಿಂದ ಸಂಸ್ಕಾರ ದೊರೆತಿದೆ. ನಾಲ್ಕಾರು ಜನರೊಂದಿಗೆ ಬೆರೆತರೆ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ಪ್ರೀತಿ, ವಿಶ್ವಾಸ ಇನ್ನಿತರ ಮೌಲ್ಯಗಳು ಬೆಳೆಯುತ್ತವೆ. ನನ್ನ ದೃಷ್ಟಿಯಲ್ಲಿ ರಂಗಾಯಣ ಹಾಗೂ ಬಿ.ವಿ.ಕಾರಂತರು ಬೇರೆಯಲ್ಲ. ಅವರು ಕಟ್ಟಿ ಬೆಳೆಸಿದ ರಂಗಾಯಣದಲ್ಲಿ ಆಯೋಜಿಸಿರುವ ಚಿಣ್ಣರ ಮೇಳ, ಮಕ್ಕಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆ. ಅಡಿಪಾಯ ಚೆನ್ನಾಗಿದ್ದಾರೆ ಮುಂದೊಂದು ದಿನ ಈ ಮಕ್ಕಳು ಅತ್ಯುತ್ತಮ ಕಲಾವಿದರಾಗಿ ಹೊರಹೊಮ್ಮಬಹುದು. ಈ ಮೇಳಕ್ಕೆ ತಮ್ಮ ಮಕ್ಕಳನ್ನು ಸೇರಿಸಿ, ಒಳ್ಳೆಯ ● 2ನೇ ಪುಟಕ್ಕೆ

ಇಂದು ಎ.ಹೆಚ್.ವಿಶ್ವನಾಥ್ ಕಾಂಗ್ರೆಸ್ ಸೇರ್ಪಡೆ

ಮೈಸೂರು, ಏ.9– ವಿಧಾನಪರಿಷತ್ ಬಿಜೆಪಿ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ನಾಳೆ(ಏ.10) ಕಾಂಗ್ರೆಸ್ ಸೇರಲಿದ್ದಾರೆ.



ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಮಧ್ಯಾಹ್ನ 3 ಗಂಟೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಎ.ಹೆಚ್.ವಿಶ್ವನಾಥ್, ಮರಳಿ ಕಾಂಗ್ರೆಸ್ ಗೂಡು ಸೇರುತ್ತಿದ್ದು, ಮಾಜಿ ಕಾರ್ಪೊರೇಟರ್ ಆರ್.ಸೋಮಸುಂದರ್ ಸೇರಿದಂತೆ ವಿಶ್ವನಾಥ್ ಅವರ ಕೆಲ ಬೆಂಬಲಿಗರೂ 'ಕೈ' ಹಿಡಿಯಲಿದ್ದಾರೆ.

ನಾಲ್ಕು ದಶಕಗಳ ಕಾಂಗ್ರೆಸ್‌ನಲ್ಲಿದ್ದ ಎ.ಹೆಚ್.ವಿಶ್ವನಾಥ್, 2017ರಲ್ಲಿ ಜೆಡಿಎಸ್ ಪಕ್ಷ ಸೇರಿದ್ದರು. 2018ರ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆದ್ದಿದ್ದರು. ಆದರೆ ವಿಶ್ವನಾಥ್ ಸೇರಿ ಮೈತ್ರಿ ಪಕ್ಷಗಳ 17 ಶಾಸಕರು ಸರ್ಕಾರದ ವಿರುದ್ಧ ಸಿಡಿದೆದ್ದು, ರಾಜೀನಾಮೆ ನೀಡಿ ಬಿಜೆಪಿ ಸೇರಿದರು. ನಂತರ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ 2019ರ ಉಪಚುನಾವಣೆಯಲ್ಲಿ ಹುಣಸೂರಿನಿಂದ ಬಿಜೆಪಿಯಿಂದ ಸ್ಪರ್ಧಿಸಿ ವಿಶ್ವನಾಥ್ ಸೋತರು. ಬಳಿಕ ವಿಶ್ವನಾಥ್ ಅವರನ್ನು ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆ ಮಾಡಲಾಗಿತ್ತು. ಇದೀಗ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಹೊಸ್ತಿಲಲ್ಲಿ ಮತ್ತೆ ಮಾತೃಪಕ್ಷ ಕಾಂಗ್ರೆಸ್ ಸೇರುತ್ತಿದ್ದಾರೆ.

ಒಂದನೇ ಪುಟದಿಂದ

ಚಿಣ್ಣರ ಮೇಳಕ್ಕೆ ವರ್ಣರಂಜಿತ ಚಾಲನೆ

ಕೆಲಸ ಮಾಡಿದಿರಿ ಎಂದು ರಂಗಾಯಣದಲ್ಲಿ ನೆರೆದಿದ್ದ ಪೋಷಕರಿಗೆ ತಿಳಿಸಿದರು.

ಬಾಲ ಸಾಧಕಿ: ಭಾರತೀಯ ಅತೀ ಕಿರಿಯ ವುಶು(ಸಮರಕಲೆ) ಚಾಂಪಿಯನ್ ಎಂದೆನಿಸಿಕೊಂಡಿರುವ ಮೈಸೂರಿನ 9 ವರ್ಷದ ಜಿ.ಪ್ರಣತಿ, ಎಲ್ಲರ ಗಮನ ಸೆಳೆದರು. ಅತೀ ಚಿಕ್ಕ ವಯಸ್ಸಿನಲ್ಲೇ ಸಾಧನೆ ಮಾಡಿದ್ದರೂ ಅದರ ಛಾಯೆ ಆಕೆಯ ಮುಗ್ದ ಮುಖದಲ್ಲಿ ಕಾಣಿಸಲಿಲ್ಲ. ಕಾರ್ಯಕ್ರಮದಲ್ಲಿ ಸಮರ ಕಲೆ ಪ್ರದರ್ಶಿಸಿ, ನೂರಾರು ಚಿಣ್ಣರಿಗೆ ಸ್ಫೂರ್ತಿಯಾದಳು. ಪೋಷಕರು, ಕಲಾಸಕ್ತರು ಚಪ್ಪಾಳೆ ಮೂಲಕ ಪುಟ್ಟ ಸಾಧಕಿಯನ್ನು ಪ್ರಶಂಸಿದರು.

ಶಿಕ್ಷಣದೊಂದಿಗೆ ಸಂಸ್ಕಾರ ಮುಖ್ಯ: ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳಲ್ಲಿ ಯಾವುದೇ ಬೇಧ, ಪರಿಧಿ ಇರುವುದಿಲ್ಲ. ವಿಶ್ವವೇ ನನ್ನದೆಂಬ ಭಾವನೆ ಇರುತ್ತದೆ. ಆದರೆ ಬೆಳೆಯುವ ಪರಿಸರದಿಂದ ಬದಲಾಗುತ್ತಾರೆ. ಹಾಗಾಗಿಯೇ ರಾಷ್ಟ್ರಕವಿ ಕುವೆಂಪು ಅವರು 'ಹುಟ್ಟುವಾಗ ಎಲ್ಲರೂ ವಿಶ್ವಮಾನವರೇ ಆಗಿರುತ್ತಾರೆ. ಆದರೆ ಬೆಳೆಯುತ್ತಾ ಹಲವು ಸಂಕೋಲೆಗಳಲ್ಲಿ ಸಿಲುಕಿ ಅಲ್ಪ ಮಾನವರಾಗುತ್ತಾರೆ' ಎಂದಿದ್ದಾರೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನೂ ನೀಡಬೇಕು. ಇದು ನಾಲ್ಕು ಗೋಡೆಗಳ ನಡುವೆ ಸಿಗುವುದಿಲ್ಲ. ಆಟ, ಪಾಠ, ಕತೆ, ಗುಂಪು ಚಟುವಟಿಕೆಗಳಿಗೆ ಮೂಲಕ ಪರಸ್ಪರ ಬೆರೆತಾಗ ಪ್ರೀತಿ, ವಿಶ್ವಾಸ, ತಾಳ್ಮೆ, ಎಲ್ಲರನ್ನೂ ಗೌರವಿಸುವ ಗುಣ ಇನ್ನಿತರ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ರಂಗಾಯಣ ಉತ್ತಮ ಅವಕಾಶ ಕಲ್ಪಿಸಿದೆ. 1997ರಿಂದಲೂ ಚಿಣ್ಣರ ಮೇಳ ಆಯೋಜಿಸಿಕೊಂಡು ಬರಲಾಗಿದೆ. ಮೊದಲ ಮೇಳದ ಮುಖಾಮುಖಿಯಲ್ಲಿ ಭಾಗವಹಿಸಿದ್ದ ಶಿವರಾಮ ಕಾರಂತರು ಸೇರಿ ಹಲವು ಸಾಧಕರು ಪಾಲ್ಗೊಂಡು ಹರಿಸಿದ್ದಾರೆ. ಕಾರ್ಯಕ್ರಮದ ಯಶಸ್ವಿಗೆ ಈವರೆಗಿನ ಎಲ್ಲಾ ನಿರ್ದೇಶಕರು, ತಂತ್ರಜ್ಞರು, ಕಲಾವಿದರು, ಸಿಬ್ಬಂದಿ ಸಹಕಾರ ನೀಡಿದ್ದಾರೆ. ಈ ಬಾರಿಯೂ ತಿಂಗಳ ಮುಂಚೆಯೇ ನಿರ್ದೇಶಕರು ಎಲ್ಲರೊಡನೆ ಚರ್ಚಿಸಿ ರೂಪುರೇಷೆ ಸಿದ್ಧಪಡಿಸಿದ್ದರು. ಅದರಂತೆಯೇ ಇಂದಿನಿಂದ ಮೇ 5ರವರೆಗೆ ಚಿಣ್ಣರ ಮೇಳ ನಡೆಯಲಿದೆ. ಈ ಕಾರ್ಯಕ್ರಮವನ್ನು ಸಂಗೀತ ನಿರ್ದೇಶಕರಾಗಿ ಸುದೀರ್ಘ ಸೇವೆ ಸಲ್ಲಿಸಿದ ಶ್ರೀನಿವಾಸಭಟ್ಟರಿಗೆ ಸಮರ್ಪಿಸಲಾಗುತ್ತಿದೆ ಎಂದು ತಿಳಿಸಿದರು. ಹಿರಿಯ ಕಲಾವಿದ ಶಿವಾಜಿರಾವ್ ಜಾದವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಭಾಗವಹಿಸಿದ್ದರು. ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರು ಗೈರಾಗಿದ್ದರು. ಮೂರು ವರ್ಷಗಳ ನಂತರ ಚಿಣ್ಣರ ಮೇಳ ಆಯೋಜಿಸಲಾಗಿದ್ದು, 'ನಮ್ಮೀ ತಾಯ್ನೆಲ' ಶೀರ್ಷಿಕೆಯಡಿ ಇಂದಿನಿಂದ ಮೇ 5ರವರೆಗೆ ಶಿಬಿರ ನಡೆಯಲಿದೆ. ಧರೆ, ಇಳೆ, ಭುವಿ, ಪೃಥ್ವಿ, ಧರಣಿ, ಭಾರತಿ, ಅವನಿ ಹಾಗೂ ಜನನಿ ತಂಡಗಳಲ್ಲಿ ಸುಮಾರು 300 ಹೆಚ್ಚು ಮಕ್ಕಳು ಪಾಲ್ಗೊಂಡಿದ್ದಾರೆ.

ಮಕ್ಕಳೊಂದಿಗೆ ವೈಭವ್ ಹಾಡು–ಕುಣಿತ



ಚುಟುಕು ಭಾಷಣದ ಬಳಿಕ ವಾಸುಕಿ ವೈಭವ್, ಮಕ್ಕಳೊಂದಿಗೆ ಹಾಡಿ, ಕುಣಿದು ಸಂಭ್ರಮಿಸಿದರು. ಚಿಕ್ಕ ವಯಸ್ಸಿನಲ್ಲಿ ಕಲಿತ 'ರ್‍ರಾಂ... ರ್‍ರೀಂ... ಭ್ರೂಂ...' ಸಾಲುಗಳನ್ನು ಹಾಡಿ, ಇದು ಯಾವುದೇ ಅರ್ಥವಿಲ್ಲದ ಮಂತ್ರ ಅರ್ಥವಾಗಿದ್ದರೆ ಯಾವುದೋ ಜಾತಿ, ಧರ್ಮದ ಲೇಪನ ಮಾಡಿಬಿಡುತ್ತಿದ್ದರು ಎಂದ ಅವರು, ರಂಗ ಪ್ರಯೋಗಕ್ಕೆ ಮುನ್ನ ಹಾಡುವ 'ಗಜವದನ ಹೇರಂಬಾ...' ಗೀತೆಯನ್ನು ಪ್ರಸ್ತುತ ಪಡಿಸಿದರು. ಬಳಿಕ 'ಜೋ ಕುಮಾರಸ್ವಾಮಿ' ನಾಟಕದ 'ಸದ್ದು ಗದ್ದಲ ಮಾಡಬೇಡಿ ಆಟದೊಳಗ..' ಪ್ರಸಿದ್ಧ ಗೀತೆಯನ್ನು ಹಾಡಿದರಲ್ಲದೆ, ಮಕ್ಕಳಿಂದ ಕೋರಸ್ ಹಾಡಿಸಿದರು. ವೇದಿಕೆಯಿಂದ ಕೆಳಗಿಳಿದು ಹಾಡುತ್ತಲೇ ಮಕ್ಕಳೊಂದಿಗೆ ಕುಣಿದು ಕುಪ್ಪಳಿಸಿದರು. 'ಮೈಸೂರು ರಾಜ್ಯದ ದೊರೆಯೇ...' ಗೀತೆ ಹಾಡಿ ರಂಜಿಸಿದರಲ್ಲದೆ, ಪ್ರೇಕ್ಷಕರ ಒತ್ತಾಯದ ಮೇರೆಗೆ ತಾವೇ ರಚಿಸಿ, ಸಂಗೀತ ನೀಡಿರುವ 'ಮನ್ಸಿಂದ ಯಾರು ಕೆಟ್ಟೋರಲ್ಲ.. ಒಂದ್ ಮಾತು ಬತ್ತದೆ, ಒಂದ್ ಮಾತು ಹೋಯ್ತದೆ ನುಂಕೊಂಡು ನಡೆಯೋನೆ ಮನುಜ ತಾನೇ...' ಗೀತೆಯನ್ನು ಹಾಡಿ ಎಲ್ಲರನ್ನೂ ಮಂತ್ರಮುಗ್ದಗೊಳಿಸಿದರು. ವಾಸುಕಿ ವೈಭವ್ ಗಾಯನಕ್ಕೆ ಹಿರಿಯ ಕಲಾವಿದ ಶಿವಾಜಿರಾವ್ ಜಾದವ್ ಸಾಥ್ ನೀಡಿದರು.

ಸಿಇಸಿ ಸಭೆ: ರಾಹುಲ್ ಗಾಂಧಿ ಹಾಜರು

ಕಾಂಗ್ರೆಸ್ ಈ ಹಿಂದೆ ಚುನಾವಣೆಗೆ ತನ್ನ ಅಭ್ಯರ್ಥಿಗಳ ಎರಡು ಪಟ್ಟಿಗಳನ್ನು ಬಿಡುಗಡೆ ಮಾಡಿತ್ತು. ಮೊದಲ ಪಟ್ಟಿಯಲ್ಲಿ 124 ಅಭ್ಯರ್ಥಿಗಳು ಮತ್ತು ಗುರುವಾರ 42 ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಬಿಡುಗಡೆ ಮಾಡಿತು. ಹೀಗಾಗಿ ಒಟ್ಟು 224 ಅಭ್ಯರ್ಥಿಗಳ ಪೈಕಿ 166 ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ. ಎರಡನೇ ಪಟ್ಟಿಯಲ್ಲಿ ಸ್ಥಾನಕ್ಕಾಗಿ ತೀವ್ರ ಪೈಪೋಟಿ ಏರ್ಪಟ್ಟಿದ್ದರೂ, ಕೇಂದ್ರ ಚುನಾವಣಾ ಸಮಿತಿಯ ಸಮನ್ವಯದಲ್ಲಿ ಅದನ್ನು ಅಂತಿಮಗೊಳಿಸಲು ರಾಜ್ಯ ನಾಯಕರು ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದಾರೆ.

ಮೊದಲ ಪಟ್ಟಿ ಬಿಡುಗಡೆ

ಕಾರ್ಯಕರ್ತರ ಅಭಿಪ್ರಾಯ, ಸಮೀಕ್ಷೆಗಳನ್ನು ಆಧರಿಸಿ ಟಿಕೆಟ್ ಅಂತಿಮಗೊಳಿಸಲಾಗುತ್ತದೆ. ಟಿಕೆಟ್ ಕೈ ತಪ್ಪಿದವರು ಅಸಮಾಧಾನಗೊಳ್ಳುವುದು ಸರ್ವೆಸಾಮಾನ್ಯ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಇನ್ನು ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಚರ್ಚೆ ನಡೆಯುತ್ತಿದೆ. ಯಾವುದೇ ಕ್ಷೇತ್ರಕ್ಕೂ ಈ ಕ್ಷಣದವರೆಗೂ ಹೆಸರು ಅಂತಿಮಗೊಂಡಿಲ್ಲ. ಏಕಕಾಲದಲ್ಲಿ ಎಲ್ಲ ಕ್ಷೇತ್ರಗಳಿಗೂ ಬಿಡುಗಡೆಯಾಗುತ್ತದೆಯೋ ಅಥವಾ ಎರಡರಿಂದ ಮೂರು ಹಂತವಾಗುತ್ತದೆಯೋ ಗೊತ್ತಿಲ್ಲ ಎಂದು ಬೊಮ್ಮಾಯಿ ಸ್ಪಷ್ಟಪಡಿಸಿದರು.

ನಿಧನ



ಶಿವಮ್ಮ

ಮೈಸೂರು, ಏ.9–ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಮದ ಶ್ರೀಮತಿ ಶಿವಮ್ಮ (56) ಭಾನುವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತಿ ಶ್ರೀ ಸ್ವಾಮಿಗೌಡ (ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದ ಗುಡ್ಡಪ್ಪ), ಪುತ್ರರಾದ ಸುರೇಶ್, ಚಂದ್ರು, ಪುತ್ರಿ ರೇಖಾ, ಸೊಸೆಯಂದಿರಾದ ಕಲ್ಪನಾ, ಜ್ಯೋತಿ, ಅಳಿಯ ರಾಜು, ಆರು ಮಂದಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ್ಯಾಷನಲ್ ಕಾರ್ಪೋರೇಟ್ ಲಾ ಆಫ್ ಮೂಟ್ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು, ಏ.9(ಎಸ್‌ಪಿಎನ್)– ರಾಷ್ಟ್ರ ಮಟ್ಟದ ನ್ಯಾಷನಲ್ ಕಾರ್ಪೋರೇಟ್ ಲಾ ಮೂಟ್ ಸ್ಪರ್ಧೆ–2022 ಮತ್ತು ನ್ಯಾಷನಲ್ ಕಾರ್ಪೋರೇಟ್ ಲಾ ಜಡ್ಜ್‌ಮೆಂಟ್ ರೈಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 'ನಿರ್ಮ ಯೂನಿವರ್ಸಿಟಿಯ 'ಇನ್‌ಸ್ಟಿ ಟ್ಯೂಟ್ ಆಫ್ ಲಾ' ತಂಡ(ಸಿಎಲ್13)ಕ್ಕೆ ಪ್ರಥಮ ಬಹುಮಾನ ಹಾಗೂ ಗ್ರೇಟರ್ ನೋಯ್ಡಾ 'ಲಾಯ್ಡ್ ಸ್ಕೂಲ್ ಆಫ್ ಲಾ' ತಂಡಕ್ಕೆ 'ರನ್ನರ್ ಅಪ್' ಪ್ರಶಸ್ತಿ(ಸಿಎಲ್7)ಯನ್ನು ಹೈಕೋರ್ಟ್ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ವಿತರಿಸಿದರು.



ರಾಷ್ಟ್ರಮಟ್ಟದ ನ್ಯಾಷನಲ್ ಕಾರ್ಪೋರೇಟ್ ಲಾ ಮೂಟ್ ಸ್ಪರ್ಧೆ–2022 ಮತ್ತು ನ್ಯಾಷನಲ್ ಕಾರ್ಪೋರೇಟ್ ಲಾ ಜಡ್ಜ್‌ಮೆಂಟ್ ರೈಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ಹೈಕೋರ್ಟ್ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್, ಕರ್ನಾಟಕದ ಮಾಜಿ ಅಡ್ವೋಕೇಟ್ ಜನರಲ್ ಉದಯ್ ಹೊಳ್ಳ ಉಪಸ್ಥಿತರಿದ್ದರು.

ಮೈಸೂರಿನ ಜೆಎಸ್‌ಎಸ್ ಲಾ ಕಾಲೇಜು ಆವರಣದ ಸಿಲ್ವರ್ ಜೂಬಿಲಿ ಹಾಲ್‌ನಲ್ಲಿ ಜೆಎಸ್‌ಎಸ್ ಲಾ ಕಾಲೇಜು ಮತ್ತು ಚೆನ್ನೈನ ಸುರಾನಾ ಅಂಡ್ ಸುರಾನಾ ಅಂತರ ರಾಷ್ಟ್ರೀಯ ಅಟಾರ್ನಿಸ್‌ರವರ ಸಹಯೋಗದೊಂದಿಗೆ ನಡೆದ ರಾಷ್ಟ್ರ ಮಟ್ಟದ ಅಂತರ ಕಾನೂನು ಕಾಲೇಜು ಸ್ಪರ್ಧೆಯಲ್ಲಿ ಭಾಗವಹಿಸಿ, ವಿಜೇತರಾದವರಿಗೆ ಹೈಕೋರ್ಟ್ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್‌ಪ್ರಸಾದ್ ವಿತರಿಸಿದರು. ರಾಜೀವ್ ಗಾಂಧಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಲಾ ತಂಡ ಮೂರನೇ(ಸಿಎಲ್10) ಸ್ಥಾನ ಪಡೆದ ವಿದ್ಯಾರ್ಥಿಗಳು ಪ್ರಶಸ್ತಿ ಪಡೆದರು.

ನಂತರ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕಾನೂನು ಅಧ್ಯಯನ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳು ದೊರಕುತ್ತಿವೆ. ಅಲ್ಲದೆ, ಕಾನೂನು ಅಧ್ಯಯನ ಮಾಡುವ ಸಂದರ್ಭದಲ್ಲಿ ವಕೀಲ ವೃತ್ತಿಯ ಕಲಿಕೆಗಳನ್ನು ಹಿರಿಯ ಮಾರ್ಗದರ್ಶನದ ಮೂಲಕ ಕಲಿತುಕೊಳ್ಳಲು ಪ್ರಯತ್ನಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವಿದ್ಯಾರ್ಥಿ ದಿಸೆಯಲ್ಲಿ ಸಮಯ ಪ್ರಜ್ಞೆ, ಶಿಸ್ತು, ಅಧ್ಯಯನ ಶೀಲತೆ ಅಳವಡಿಸಿಕೊಳ್ಳುವುದರಿಂದ ವಕೀಲ ವೃತ್ತಿಯನ್ನು ಗಂಭೀರ ಪರಿಗಣಿಸಲು ಸಾಧ್ಯವಿದೆ. ಅಂತೆಯೇ ಕಕ್ಷಿದಾರರಿಗೆ ನ್ಯಾಯ ಒದಗಿಸ ಬೇಕಾದರೆ, ಪ್ರಕರಣ ಸಂಬಂಧ ಹೆಚ್ಚಿನ ಅಧ್ಯಯನ ನಡೆಸಿಕೊಂಡು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಯುವ ವಕೀಲರು ಪ್ರಯತ್ನಿಸಬೇಕು. ಇದರಿಂದ ನೊಂದ ಜನರಿಗೆ ನ್ಯಾಯ ಕೊಡಿಸಲು ಸಾಧ್ಯವಿದೆ. ಈ ಗುಣಗಳನ್ನು ಯುವ ವಕೀಲರು ವಿದ್ಯಾರ್ಥಿ ದಿಸೆಯಿಂದಲೇ ಕಲಿತುಕೊಂಡರೆ ಉತ್ತಮ ಎಂದು ಕಿವಿಮಾತು ಹೇಳಿದರು.

ಕರ್ನಾಟಕದ ಮಾಜಿ ಅಡ್ವೋಕೇಟ್ ಜನರಲ್ ಉದಯ ಹೊಳ್ಳ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ದೇಶಾಭಿಮಾನ ಮೂಡಿಸಲು ಶಿಕ್ಷಕರ ಪಾತ್ರ ಅತೀ ಮುಖ್ಯ. ಇಂಜಿನಿಯರ್, ಡಾಕ್ಟರ್, ವಕೀಲ ವೃತ್ತಿಯಲ್ಲೂ ಉತ್ತಮ ಹಣ ಗಳಿಕೆಯಿದೆ. ಇಂದು ನಾವು ಗಳಿಸಿದ ಹಣಕ್ಕೆ ಮೌಲ್ಯವಿಲ್ಲ. ಹಿಂದಿನ ಕಾಲದಲ್ಲಿ ಸಣ್ಣ ಮೊತ್ತದ ಹಣ ಗಳಿಸಿದರೂ ಅದರಲ್ಲಿ ತೃಪ್ತಿ ಇರುತ್ತಿತ್ತು ಎಂದರು.

ಈ ವೇಳೆ ಜೋಧ್‌ಪುರ ನ್ಯಾಷನಲ್ ಲಾ ವಿವಿ ವಿದ್ಯಾರ್ಥಿ ಅನಿಲ್ ಪಟೇಲ್ (ಸಿಎಲ್15) 'ಬೆಸ್ಟ್ ಸ್ಟೂಡೆಂಟ್ ಅಡ್ವೋಕೇಟ್–1' ಪ್ರಶಸ್ತಿ 10 ಸಾವಿರ ರೂ. ನಗದು ಬಹುಮಾನ, ಛತೀಸ್‌ಘಡ್ ಅಮೆಟಿ ವಿವಿಯ ವಿದ್ಯಾರ್ಥಿ(ಸಿಎಲ್6) ಹಿಮಾನಿ ಬೈದ್ 'ಬೆಸ್ಟ್ ಸ್ಟೂಡೆಂಟ್ ಅಡ್ವೋಕೇಟ್–2' ಪ್ರಶಸ್ತಿ, 5 ಸಾವಿರ ರೂ. ನಗದು, ಗ್ರೇಟರ್ ನೋಯ್ಡಾ ಲಾಯ್ಡ್ ಸ್ಕೂಲ್ ಆಫ್ ಲಾ ವಿದ್ಯಾರ್ಥಿ(ಸಿಎಲ್7) ಅದ್ವೈತ್ ಉಪದ್ಯಾಯ 'ಬೆಸ್ಟ್ ಸ್ಟೂಡೆಂಟ್ ಅಡ್ವಕೇಟ್–3', ಛತೀಸ್‌ಘಡ್ ಅಮೆಟಿ ವಿವಿಯ ವಿದ್ಯಾರ್ಥಿ(ಸಿಎಲ್6) ಡಿಂಪಲ್ 'ಬೆಸ್ಟ್ ಸ್ಟೂಡೆಂಟ್ ಅಡ್ವೋಕೇಟ್–4' ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಮೊಹಾಲಿ ಆರ್ಮಿ ಇನ್‌ಸ್ಟಿಟ್ಯೂಟ್ ಲಾ ಕಾಲೇಜು ತಂಡಕ್ಕೆ 'ಬೆಸ್ಟ್ ಮೆಮೊರಿಯಲ್–1' ಪ್ರಶಸ್ತಿ, ಮದುರೈ ಸರ್ಕಾರಿ ಲಾ ಕಾಲೇಜು ತಂಡಕ್ಕೆ 'ಬೆಸ್ಟ್ ಮೆಮೊರಿಯಲ್–2', ಮುಂಬೈ ಸರ್ಕಾರಿ ಲಾ ಕಾಲೇಜು ತಂಡಕ್ಕೆ 'ಬೆಸ್ಟ್ ಮೆಮೊರಿಯಲ್–3', ಕ್ರೈಸ್ಟ್ ಲಾ ಯೂನಿವರ್ಸಿಟಿ ತಂಡಕ್ಕೆ 'ಬೆಸ್ಟ್ ಮೆಮೊರಿಯಲ್–4' ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಜೆಎಸ್‌ಎಸ್ ಲಾ ಕಾಲೇಜು ಪ್ರೊ.ಕೆ.ಎಸ್.ಸುರೇಶ್, ಚೆನ್ನೈ ಎಸ್‌ಎಸ್ ಐಎ ಅಡ್ವೋಕೇಟ್ ಪ್ರೀತಂ ಸುರಾನಾ, ಜೆಎಸ್‌ಎಸ್ ಲಾ ಕಾಲೇಜು ಪ್ರಾಂಶುಪಾಲ ಡಾ.ಎಸ್.ನಟರಾಜ್, ಜಿಎಸ್‌ಟಿ ಮೈಸೂರು ವಿಭಾಗದ ಕಮಿಷ್ನರ್ ವೈಸಿಎಸ್ ಸ್ವಾಮಿ ಉಪಸ್ಥಿತರಿದ್ದರು.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ ನಂ.3 ಮಹದೇಶ್ವರ ಬಡಾವಣೆಯ ಅನೇಕ ಯುವ ಮುಖಂಡರು ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು.

ವಿವಿಧ ಘಟಕಗಳ ಪದಾಧಿಕಾರಿಗಳಿಂದ ಜೆಡಿಎಸ್‌ಗೆ ರಾಜೀನಾಮೆ

ಮೈಸೂರು, ಏ.9(ಜಿಎ)– ಮೈಸೂರಿನ ನರಸಿಂಹರಾಜ ಕ್ಷೇತ್ರದ ಜೆಡಿಎಸ್ ವಿವಿಧ ಘಟಕಗಳ ಅಧ್ಯಕ್ಷರು ಮತ್ತು ಪದಾಧಿ ಕಾರಿಗಳು ಸೇರಿದಂತೆ 60ಕ್ಕೂ ಅಧಿಕ ಮಂದಿ ಸಾಮೂಹಿಕ ರಾಜೀನಾಮೆ ನೀಡಿದ್ದಾರೆ.



ಕ್ಷೇತ್ರ ಜೆಡಿಎಸ್ ಮುಖಂಡ ಅಬ್ದುಲಾ ಅಜೀಜ್ ಇತ್ತೀಚೆಗೆ ಪಕ್ಷದ ಪ್ರಾಥಮಿಕ ಸದಸ್ಯತ್ವ ಹಾಗೂ ರಾಜ್ಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲೆ ಅವರನ್ನು ಬೆಂಬಲಿಸಿ ಕ್ಷೇತ್ರದ ವಿವಿಧ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಜೆಡಿಎಸ್ ನಗರಾಧ್ಯಕ್ಷರಿಗೆ ರಾಜೀನಾಮೆ ಸಲ್ಲಿಸಿದರು.

ಈ ವೇಳೆ ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಕ್ಷೇತ್ರದ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಇಲಿಯಾಸ್ ಬಾಬು ಮಾತನಾಡಿದರು. ಹಲವಾರು ವರ್ಷಗಳಿಂದ ನಿಷ್ಠೆಯಿಂದ ಪಕ್ಷಕ್ಕಾಗಿ ದುಡಿಯುತ್ತಿರುವವರನ್ನು ಬಿಟ್ಟು ಇತರರಿಗೆ ವಿವಿಧ ಸ್ಥಾನಮಾನಗಳನ್ನು ನೀಡುವ ಮೂಲಕ ನಮನ್ನು ಕಡೆಗಣಿಸಿರುವುದರಿಂದ ಬೇಸರವಾಗಿರುವ ಕಾರಣ ಈಗಾಗಲೇ ಅಬ್ದುಲಾ ಅವರು ರಾಜೀನಾಮೆ ನೀಡಿದ್ದು, ಅವರಂತೆ ನಮಗೂ ಪಕ್ಷದ ರಾಜ್ಯಾಧ್ಯಕ್ಷರು ತೆಗೆದುಕೊಂಡಿರುವ ನಿರ್ಧಾರಗಳು ಬೇಸರವುನ್ನುಂಟು ಮಾಡಿರುವ ಹಿನ್ನೆಲೆಯಲ್ಲಿ ರಾಜೀನಾಮೆ ಸಲ್ಲಿಸುತ್ತಿದ್ದೇವೆ ಎಂದರು.

ಕಾಂಗ್ರೆಸ್ ಸೇರ್ಪಡೆ: ಅಬ್ದುಲಾ ಅವರ ನೇತೃತ್ವದಲ್ಲಿ ಸದ್ಯದಲ್ಲಿಯೇ ಕಾಂಗ್ರೆಸ್ ಸೇರ್ಪಡೆಯಾಗುತ್ತೇವೆ. ಅವರು ನಮ್ಮ ಕಷ್ಟದ ಸಮಯದಲ್ಲಿ ಸ್ಪಂದಿಸಿದ್ದಾರೆ. ಪಕ್ಷ ಮತ್ತು ವ್ಯಕ್ತಿ ನೋಡಿ ಹೋಗುತ್ತಿದ್ದೇವೆ. ಜೆಡಿಎಸ್ ಪಕ್ಷ ತೊರೆಯುತ್ತಿರುವು ಬೇಸರದ ವಿಷಯವಾಗಿದ್ದು, ನಾಲ್ಕು ವರ್ಷಗಳ ಕಾಲ ಕ್ಷೇತ್ರದ ಮನೆ ಮನೆಗೆ ತೆರಳಿ ಪಕ್ಷ ಸಂಘಟನೆ ಮಾಡಿದ್ದೇವೆ. ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ರಾಜ್ಯ ಅಲ್ಪಸಂಖ್ಯಾತರ ನಾಯಕರಿಂದ ನಮಗೆ ಅನ್ಯಾಯವಾಗುತ್ತಿದೆ. ಪಕ್ಷಕ್ಕಾಗಿ ಹಗಲು ರಾತ್ರಿ ದುಡಿದವರನ್ನು ಅವರನ್ನು ಕಡೆಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಸಾಮೂಹಿಕವಾಗಿ ರಾಜೀನಾಮೆ ನೀಡುತ್ತಿದ್ದೇವೆ ಎಂದರು.



ಮೈಸೂರಿನ ಬೋಗಾದಿ ಎರಡನೇ ಹಂತದ ದುರ್ಗಾ ಗ್ರೂಪ್ ಸ್ನೇಹಿತರ ವತಿಯಿಂದ ವಕೀಲ ಎಂ.ಜಿ.ಸಿದ್ದರಾಜು ಅವರ ಹುಟ್ಟುಹಬ್ಬ ಆಚರಿಸಲಾಯಿತು. ಚಂದ್ರಶೇಖರ್, ಸುರೇಶ್, ಈರೇಗೌಡರು, ಆನಂದ್, ರವಿ, ಸಂಬೆಗೌಡ, ಯಲಚಳ್ಳಿ ರವಿ, ಲೋಕೇಶ್, ಶಿವು, ಮಾದೇವ, ಸ್ವಾಮಿ, ಮಂಜು, ಟೆಂಟ್ ರವಿ, ಮಹೇಶ್, ವೆಂಕಟೇಶ್, ಗುರು ಮತ್ತಿತರರು ಚಿತ್ರದಲ್ಲಿದ್ದಾರೆ.

ಇಂದು 'ಬೇಸಿಗೆ ಬಂಡಿ'ಗೆ ನಟ ಪ್ರಥಮ್ ಚಾಲನೆ



ಮೈಸೂರು,ಏ.9–ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಆಯೋಜಿಸಿರುವ 'ಬೇಸಿಗೆ ಬಂಡಿ' ಬೇಸಿಗೆ ಶಿಬಿರಕ್ಕೆ ನಾಳೆ(ಏ.10) ಚಾಲನೆ ದೊರಕಲಿದೆ. ಬಿಗ್ ಬಾಸ್ ಖ್ಯಾತಿಯ ನಟ, ನಿರ್ದೇಶಕ ಪ್ರಥಮ್, ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿನ ಸುಮಸೋಪಾನ ಉದ್ಯಾನದ ಬಳಿ ಬೆಳಗ್ಗೆ 8.15ಕ್ಕೆ ಜಾನಪದ ಮೆರವಣಿಗೆಗೆ ಚಾಲನೆ ನೀಡುವ ಮೂಲಕ 'ಬೇಸಿಗೆ ಬಂಡಿ'ಯನ್ನು ವಿದ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ. ದೇಸಿ ಸೊಗಡಿನ ಈ ಬೇಸಿಗೆ ಶಿಬಿರ ಆರ್.ಟಿ.ನಗರದ ನೈಪುಣ್ಯ ಶಾಲೆ ಆವರಣದಲ್ಲಿ 21 ದಿನಗಳ ಕಾಲ ನಡೆಯಲ್ಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಚುನಾವಣೆ: ನೀತಿ ಸಂಹಿತೆ ಉಲ್ಲಂಘನೆ 730 FIR ದಾಖಲಿಸಿದ ಆಯೋಗ!

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೆ ದಿನಗಣನೆ ಆರಂಭವಾಗಿರುವಂತೆಯೇ ರಾಜಕೀಯ ಮುಖಂಡರು, ಕಾರ್ಯಕರ್ತರ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗಿದ್ದು, ಚುನಾವಣಾ ಆಯೋಗ ಈವರೆಗೂ 730 ಎಫ್‌ಐಆರ್‌ಗಳನ್ನು ದಾಖಲಿಸಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಾದ ಮಾರ್ಚ್ 29ರಿಂದ ಇಲ್ಲಿಯವರೆಗೆ ನೀತಿ ಸಂಹಿತೆ ಉಲ್ಲಂಘನೆ ಕುರಿತಂತೆ 730 ಎಫ್‌ಐಆರ್ ದಾಖಲಿಸಲಾಗಿದೆ. ಇದರ ಜತೆಗೆ ನಗದು ಸೇರಿದಂತೆ ಸುಮಾರು 39 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ.

ನಿನ್ನೆ ಒಂದೇ ದಿನ 14 ಎಫ್‌ಐಆರ್ ದಾಖಲು ಮಾಡಿ ಐದು ಲಕ್ಷ ನಗದು, 9,319 ಲೀಟರ್ ಮದ್ಯ, 2.32 ಕೆ.ಜಿ ಮಾದಕ ದ್ರವ್ಯ, 2771 ಉಡುಗೊರೆ ವಸ್ತುಗಳು ಹಾಗೂ 4 ವಾಹನಗಳನ್ನು ಸೀಜ್ ಮಾಡಲಾಗಿದೆ. ಒಟ್ಟಾರೆ ನಿನ್ನೆ ರಾತ್ರಿವರೆಗೆ 23 ಪ್ರಕರಣಗಳಲ್ಲಿ 7 ಕೋಟಿ ನಗದು, 18 ಕೋಟಿ ಮೌಲ್ಯದ ಮದ್ಯ, 91 ಲಕ್ಷ ರೂ.ಮೌಲ್ಯದ 92 ಕೆ.ಜಿಗೂ ಹೆಚ್ಚು ಮಾದಕ ದ್ರವ್ಯ, 4.66 ಕೋಟಿ ಮೌಲ್ಯದ 153 ಕೆ.ಜಿ ತೂಕದ ಲೋಹ, 710 ಪ್ರಕರಣಗಳಲ್ಲಿ 2.47 ಕೋಟಿ ಮೌಲದ್ಯ ಉಡುಗೊರೆ ವಸ್ತುಗಳು ಹಾಗೂ 71 ಪ್ರಕರಣಗಳಲ್ಲಿ 3.34 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಲಾಗಿದೆ. ನಿನ್ನೆ ಪ್ರಕರಣಗಳು ಸೇರಿದಂತೆ ಇದುವರೆಗೂ 39 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳುವುದರ ಜತೆಗೆ 730 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಬೆಂಗಳೂರಿನ ನಗರ ಜಿಲ್ಲಾ ಚುನಾವಣಾಧಿಕಾರಿಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ದಿನದ 24 ಗಂಟೆಗಳ ಕಾಲ ದೂರು ಸ್ವೀಕರಿಸಲು ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸ ಲಾಗಿದ್ದು, ಇದರ ಜತೆಗೆ 28 ಕ್ಷೇತ್ರಗಳ ಆರೋ ಮತ್ತು ಎಡಿಇಒ ಕಚೇರಿಗಳಲ್ಲೂ ನಿಯಂತ್ರಣ ಕೊಠಡಿ ಹಾಗೂ ದೂರು ನಿರ್ವಹಣಾ ಸಮಿತಿಗಳನ್ನು ರಚನೆ ಮಾಡಲಾಗಿದ್ದು, ಸಾರ್ವ ಜನಿಕರು ಮುಕ್ತವಾಗಿ ದೂರು ನೀಡಬಹುದಾಗಿದ್ದು, ನಿಯಂತ್ರಣ ಕೊಠಡಿ ಜತೆಗೆ ಸಿವಿಜಿಲ್ ಆಪ್ ಮೂಲಕವೂ ಸಾರ್ವಜನಿಕರು ಚುನಾವಣಾ ಕುಂದು ಕೊರತೆ ಕುರಿತಂತೆ ದೂರು ನೀಡಬಹುದಾಗಿದೆ.


ಹಾಸನದಲ್ಲಿ ಕಾರ್ಯಕರ್ತರಿಗೆ ಟಿಕೆಟ್

ಚಳ್ಳಕೆರೆ: ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಸಮರ್ಥ ಕಾರ್ಯಕರ್ತರಿದ್ದಾರೆ. ಕುಟುಂಬ ದ ಬದಲು ಕಾರ್ಯ ಕರ್ತರಿಗೆ ಟಿಕೆಟ್ ನೀಡಲು ನಿರ್ಧ ರಿಸಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪುನರುಚ್ಚರಿಸಿದರು.



ಹಾಸನದಲ್ಲಿ ಭವಾನಿ ರೇವಣ್ಣ ಟಿಕೆಟ್ ಆಕಾಂಕ್ಷಿಯಾಗಿವುದಕ್ಕೆ ಸಂಬಂಧಿಸಿದಂತೆ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿ ಸಿದ ಅವರು, ನಿಷ್ಠಾವಂತ ಕಾರ್ಯಕರ್ತರು ಕ್ಷೇತ್ರದಲ್ಲಿದ್ದಾರೆ. ಅವರನ್ನು ಹೊರತುಪಡಿಸಿ ಕುಟುಂಬದ ಯಾವೊಬ್ಬರೂ ಸ್ಪರ್ಧೆ ಮಾಡುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತಿದ್ದೇನೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.4.2023 ಸೋಮವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘ:** 12ನೇ ದ್ವೈವಾರ್ಷಿಕ ಸಮ್ಮೇಳನ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಎಐಬಿಪಿಎಸ್‌ಆರ್‌ಸಿ ಅಧ್ಯಕ್ಷರು ಮತ್ತು ಸಿಬಿಪಿಆರ್‌ಒ ಸಂಚಾಲಕ ಕೆ.ವಿ. ಆಚಾರ್ಯ, ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ರವಿಕುಮಾರ್, ಎಐಬಿಪಿಆರ್‌ಸಿ ಪ್ರಧಾನ ಕಾರ್ಯದರ್ಶಿ ಸುಪ್ರಿತ್ ಸರ್ಕಾರ್ ಸ್ಥಳ: ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಉದಯರವಿ ರಸ್ತೆ, ಕುವೆಂಪುನಗರ ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ:** ಚಿತ್ರಕಲಾ ಶಿಬಿರ ಉದ್ಘಾಟನೆ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಉದ್ಘಾಟನೆ: ಕಾವಾ ಕಾಲೇಜು ರೀಡರ್, ಅಪ್ಲೈಡ್ ಆರ್ಟ್ ಮುಖ್ಯಸ್ಥರಾದ ಬಿಂದುರಾಮ ಆರ್. ಬಿರಾದಾರ್, ಉಪಸ್ಥಿತಿ: ಹಿರಿಯ ಕಲಾವಿದ ಎಸ್.ಎಂ. ಜಂಬುಕೇಶ್ವರ್, ಸ್ಥಳ: ಜೆಎಸ್‌ಎಸ್ ಬಾಲ ಜಗತ್ ಶಾಲೆಯ ಆವರಣ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಸಾಹಿತ್ಯ ಪರಿಷತ್ತು** : ಕೆಎಂಎಫ್–ನಂದಿನಿ ಉಳಿಸಿ ಧರಣಿ, ಲಾಯಲ್ ವರ್ಲ್ಡ್ ಪಕ್ಕದಲ್ಲಿರುವ ಅಮುಲ್ ಮಳಿಗೆ ಮುಂದೆ, ವಿವಿ ಪುರಂ, ಬೆಳಗ್ಗೆ 11 ಗಂಟೆಗೆ.



■ **ಕರ್ನಾಟಕ ಸೇನಾ ಪಡೆ** : 'ನಂದಿನಿ ಉಳಿಸಿ' ಪ್ರತಿಭಟನೆ, ಡಿಸಿ ಕಚೇರಿ ಮುಂಭಾಗ, ಬೆಳಗ್ಗೆ 11.30ಕ್ಕೆ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್** : ಶ್ರೀ ರಾಮೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ ಶಾಸ್ತ್ರೀಯ ಸಂಗೀತ, ಸ॥ ವಿ॥ ಅಂಜನ ಪಿ. ರಾವ್ ಅವರಿಂದ, ಸ್ಥಳ: ಶ್ರೀರಾಮ ಮಂದಿರ, ಶ್ರೀರಾಮ ಪೇಟೆ, ಸಂಜೆ 6 ಗಂಟೆಗೆ.

■ **ಶ್ರೀರಾಮ ಮಂದಿರ** : ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ರುದ್ರ ಹೋಮ, ಸಂಜೆ 6.30ಕ್ಕೆ ವಿದುಷಿ ಮಹತಿ ರಘುರಾಂ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಶ್ರೀರಾಮ ಸಭಾ ಚಾರಿಟಬಲ್ ಟ್ರಸ್ಟ್‌ನ ಅಂಗ ಸಂಸ್ಥೆ, ಶ್ರೀರಾಮ ಸೇವಾ ಮಂಡಲಿ** : 70ನೇ ವರ್ಷದ ಶ್ರೀ ರಾಮೋತ್ಸವ, ಸಂಜೆ 7 ಗಂಟೆಗೆ ದುರ್ಗಾ ನೃತ್ಯ ಅಕಾಡೆಮಿ ವತಿಯಿಂದ ಶ್ರೀರಾಮ ಮಾರ್ಗಂ, ವಾಗ್ಗೇಯಕಾರರು ಹಾಗೂ ದಾಸ ಸಾಹಿತ್ಯವನ್ನೊಳಗೊಂಡ ಕೃತಿಗಳ ಆಧಾರಿತ ರಾಮ ಚರಿತ್ರೆ ನೃತ್ಯೋತ್ಸವ, ಶ್ರೀ ಅವನಿ ಶಂಕರಮಠ, 4ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ.

ಪ್ರಧಾನಿ ಮೋದಿ ಪಕ್ಕ ಕುಳಿತಾಗ ಜೀವ ಹೋಗಿ ಬಂದಂಗಾಯ್ತು

● ಅನುಭವ ಬಿಚ್ಚಿಟ್ಟ ಸಫಾರಿ ಜೀಪ್ ಚಾಲಕ ಡಿ.ಪಿ.ಮಧುಸೂದನ್
● ಜೀವನದಲ್ಲಿ ಪ್ರಧಾನಿಯವರನ್ನು ಸಫಾರಿಗೆ ಕರೆದೊಯ್ಯುವ ಕಲ್ಪನೆಯೂ ಮಾಡಿರಲಿಲ್ಲ

ಬಂಡೀಪುರಕೆ. ಬೇಟಿ ನೀಡಿದ ಮೊದಲ ಪ್ರಧಾನಿ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಭೇಟಿ ನೀಡಿದ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪ್ರಧಾನಿ ಮೋದಿ ಪಾತ್ರರಾದರು. ಇದು ಎರಡು ಗಂಟೆಗಳ ಕಾಲ ಸಫಾರಿಗೆ ತೆರಳಿ ವನಸಿರಿ ಸೊಬಗನ್ನು ಸವಿದರು.





ಎಂ.ಟಿ.ಯೋಗೇಶ್ ಕುಮಾರ್

ಬಂಡೀಪುರ,ಏ.9 – ದೇಶದ ಅತ್ಯುನ್ನತ ಸ್ಥಾನ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸಫಾರಿ ಜೀಪ್‌ನಲ್ಲಿ ನನ್ನ ಪಕ್ಕ ಬಂದು ಕುಳಿತಾಗ ಜೀವವೇ ಹೋದಂತಹ ಅನುಭವವಾಯಿತು. ಆದರೂ, ಜೀವನದ ಅವಿಸ್ಮರಣೀಯ ಸನ್ನಿವೇಶ ನನಗೆ ಬಹಳ ಸಂತೋಷವನ್ನುಂಟು ಮಾಡಿದೆ.

ಹುಲಿ ಸಂರಕ್ಷಿತ ಪ್ರದೇಶದ 50ನೇ ವಾರ್ಷಿಕೋತ್ಸವ ಹಾಗೂ 2022ನೇ ಸಾಲಿನ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಲು ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ರಾಜ್ಯದ ಮೊಟ್ಟ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎಂಬ ಖ್ಯಾತಿಗೆ ಒಳಗಾಗಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಸಫಾರಿಗೆ ತೆರಳಿದ್ದರು. ಈ ವೇಳೆ ಪ್ರಧಾನಿ ಮೋದಿ ಅವರನ್ನು ಸಫಾರಿಗೆ ಕರೆದೊ ಯ್ದಿದ್ದ ತೆರೆದ ಜೀಪ್ ಚಾಲಕ ಡಿ.ಪಿ.ಮಧು ಸೂಧನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ ತಮಗಾದ ಅನುಭವವನ್ನು ಹಂಚಿಕೊಂಡಿದ್ದಾರೆ.

ಕಳೆದ ಎರಡು ದಿನದ ಹಿಂದೆಯೇ ಬಂಡೀಪುರಕ್ಕೆ ಆಗಮಿಸಿ ಭದ್ರತಾ ಸಿಬ್ಬಂದಿಗಳ ತಂಡ(ಎಸ್‌ಪಿಜಿ) ಸಫಾರಿ ವಾಹನಗಳ ಭದ್ರತಾ ತಪಾಸಣೆ ನಡೆಸಿದ್ದರು. ಒಟ್ಟು 9 ಜೀಪ್‌ಗಳನ್ನು ಆಯ್ಕೆ ಮಾಡಲಾಗಿತ್ತು ಮೈಸೂರಿನಿಂದ ಇಂದು ಬೆಳಗ್ಗೆ ಮೇಲುಕಾಮನಹಳ್ಳಿ ಹೆಲಿಪ್ಯಾಡ್‌ಗೆ ವಾಯುಸೇನೆಯ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಪ್ರಧಾನಿ ಮೋದಿ, ರಸ್ತೆ ಮಾರ್ಗವಾಗಿ ಬಂಡೀಪುರ ಹಳೆ ಕ್ಯಾಂಪಸ್‌ಗೆ ಬೆಳಗ್ಗೆ 7.45ಕ್ಕೆ ಆಗಮಿಸಿದರು. ಈ ವೇಳೆ ಎಸ್‌ಪಿಜಿ ತಂಡ ಕೆಎ–10, ಜಿ.0710 ಸಂಖ್ಯೆಯ ಜೀಪನ್ನು ಪ್ರಧಾನಿ ಮೋದಿ ಅವರ ಸಫಾರಿಗೆ ಆಯ್ಕೆ ಮಾಡಿದ್ದರು. ಬಳಿಕ ಎರಡು ಗಂಟೆಗಳ ಕಾಲ 22 ಕಿ.ಮಿ ದೂರ ಸಫಾರಿ ಮಾಡಿ ಆನಂದಿಸಿದರು.

ಭಯವಾಯ್ತು: ಈ ಕುರಿತು ಚಾಲಕ ಹಂಗಳ ಹೋಬಳಿ, ದೇವರಹಳ್ಳಿ ನಿವಾಸಿ ಮಧುಸೂಧನ್ ಮಾತನಾಡಿ, ನನ್ನ ಜೀಪ್‌ನಲ್ಲಿ ಪ್ರಧಾನಿ ಮೋದಿ ಅವರು ಬಂದು ಕುಳಿತರು. ಆ ಕ್ಷಣ ನನಗೆ ಅತೀವ ಭಯವಾಯಿತು. ಕೈ ಕಾಲು ಅದುರುತ್ತಿದ್ದವು. ಈ ವೇಳೆ ಬಂಡೀಪುರದ ಸಿಎಫ್ ಸಾಹೇಬ್ರು ಹಾಗೂ ಹಿರಿಯ ಅಧಿಕಾರಿಗಳು ನನಗೆ ಧೈರ್ಯ ತುಂಬಿದರು. ಅಲ್ಲದೆ, ಎಸ್‌ಪಿಜಿ ಅಧಿಕಾರಿಗಳು ನನ್ನ ಬಳಿ ಬಂದು ಸಾಮಾನ್ಯ ದಿನಗಳಲ್ಲಿ ವಾಹನ ಚಾಲನೆ ಮಾಡುವಂತೆಯೇ ಇಂದು ಚಾಲನೆ ಮಾಡುವಂತೆ ಸಲಹೆ ನೀಡಿದರು. ಆರಂಭ'ದಲ್ಲಿ ಸ್ವಲ್ಪ ದೂರದವರೆಗೆ ಭಯವಾಗುತ್ತಿತ್ತು. ಆ ನಂತರ ಭಯ ಹೋಯಿತು ಎಂದು ಮೆಲಕು ಅನುಭವ ಹಂಚಿಕೊಂಡರು.

ಕನಸಲ್ಲೂ ಊಹಿಸಿರಲಿಲ್ಲ: ನಾನು ಪ್ರಧಾನಿ ಮಂತ್ರಿಗಳನ್ನು ಸಫಾರಿ ಕರೆದುಕೊಂಡು ಹೋಗುತ್ತೇನೆ ಎಂದು ಊಹಿಸಿರಲೇ ಇಲ್ಲ. ಕಳೆದ ಕೆಲ ತಿಂಗಳ ಹಿಂದೆ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರು ಬಂಡೀಪುರಕ್ಕೆ ಬಂದಿದ್ದಾಗ ಅವರ ಸಫಾರಿ ವಾಹನದ ಚಾಲಕನಾಗಿ ಕೆಲಸ ನಿಭಾಯಿಸಿದ್ದೆ. ಇಂದು ಪ್ರಧಾನಿಗಳು ಬಂದದ್ದು ನನ್ನ ಜೀವನದ ಅವಿಸ್ಮರಣೀಯ ಎಂದರು.


ಮೋದಿ ಸಾಗಿದ ಹಾದಿ

ಹಳೆ ಕ್ಯಾಂಪಸ್‌ನಿಂದ ಸಫಾರಿ ಹೊರಟ ಪ್ರಧಾನಿ ಮೋದಿ, ರಿಸೆಪ್ಷನ್ ರೋಡ್, ಟೈಗರ್ ರೋಡ್ ಮೂಲಕ ಬಂಡೀಪುರದಲ್ಲೇ ಅತೀ ಎತ್ತರದ ಪ್ರದೇಶವಾಗಿರುವ ಬೋಳುಗಡ್ಡೆ ಕಳ್ಳಬೇಟೆ ತಡೆ ಶಿಬಿರಕ್ಕೆ ತೆರಳಿದರು. ಅಲ್ಲಿ ಬೈನಾಕ್ಯುಲರ್ ಮೂಲಕ ಪ್ರಕೃತಿ ಸೊಬಗನ್ನು ವೀಕ್ಷಿಸಿದರು. ಕೆಲಕಾಲ ಫೋಟೋಗ್ರಫಿಯನ್ನು ಮಾಡಿದರು. ನಂತರ ಬೋಳುಗುಡ್ಡದಿಂದ ಕೆಳಗಿಳಿಯುತ್ತಿದ್ದಂತೆ ಇಂಡಿಯನ್ ಗಾರ್(ಕಾಡೆಮ್ಮೆ) ಹಿಂಡು ಪ್ರತ್ಯಕ್ಷವಾದವು. ಹುಲಿಕಟ್ಟೆ ಬಳಿ ನವಿಲು ಹಾಗೂ ಸಾಂಬರ್, ತಾವರೆಕಟ್ಟೆ ಬಳಿ ಪೇಂಟೆಡ್ ಸ್ಟೋರ್ಕ್, ಐಬೀಸ್ ಸೇರಿದಂತೆ ವಿವಿಧ ಪಕ್ಷಿಗಳನ್ನು ನೋಡಿದರು. ಆನೆಕಟ್ಟೆ ಮಾರ್ಗವಾಗಿ ಮಾರಿಗುಡಿ ಸರ್ಕಲ್‌ನಿಂದ ಸಾಗುತ್ತಿದ್ದಾಗ ಮತ್ತೆ ಸಾಂಬರ್ ಡೀರ್, ಮರಳಹಳ್ಳಿ ಕ್ಯಾಂಪ್ ರಸ್ತೆಯಲ್ಲಿ ಆನೆಗಳ ಹಿಂಡು, ಬಾರ್ಡರ್ ರಸ್ತೆಯಲ್ಲಿ ಆನೆಗಳ ದೊಡ್ಡ ಹಿಂಡು ಕಾಣಿಸಿಕೊಂಡವು. ಆ, ನಂತರ ಕೆಕ್ಕನಹಳ್ಳಿ ಬಾರ್ಡರ್ ಬಳಿ ತೆರಳಿ ತಮಿಳುನಾಡು ಬಾರ್ಡರ್‌ನಲ್ಲಿ ವಾಹನ ಬದಲಿಸಿ, ತೆಪ್ಪಕಾಡು ಪ್ರದೇಶಕ್ಕೆ ಪ್ರಯಾಣಿಸಿದರು.

ಭದ್ರತೆಗಾಗಿ ಎಸ್‌ಜಿಪಿಯವರು ಹುಲಿ, ಚಿರತೆ ಓಡಿಸಿರಬೇಕು

ಹಾಸ್ಯ ಚಟಾಕಿ ಹಾರಿಸಿದ ಪ್ರಧಾನಿ ಮೋದಿ

ಎರಡು ಗಂಟೆಯಲ್ಲಿ 22 ಕಿ.ಮಿ ದೂರ ಸಫಾರಿಗೆ ತೆರಳಿದ್ದರೂ ಹುಲಿ ಹಾಗೂ ಚಿರತೆ ಪ್ರಧಾನಿ ಮೋದಿ ಅವರ ಕಣ್ಣಿಗೆ ಬೀಳಲಿಲ್ಲ. ಇದರಿಂದ ಮೋದಿ ಅವರು ಸಫಾರಿ ಮುಗಿಯುತ್ತಿದ್ದಂತೆ ಕಟ್ಟುನಿಟ್ಟಿನ ಭದ್ರತೆ ಕೈಗೊಂಡು ಎಸ್‌ಪಿಜಿಯವರು ಹುಲಿ ಹಾಗೂ ಚಿರತೆ ಓಡಿಸಿರಬೇಕು ಎಂದು ನಗುತ್ತಲೇ ಹಾಸ್ಯ ಚಟಾಕಿ ಹಾರಿಸಿದರಲ್ಲದೇ, ಬಂಡೀಪುರ ಅರಣ್ಯ ವೀಕ್ಷಣೆ ಮಾಡಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು. ಅಲ್ಲದೆ, ದೆಹಲಿ ತಲುಪಿದ ಬಳಿಕವೂ ಟ್ವೀಟ್ ಮಾಡಿ, ಬಂಡೀಪುರ ಹಾಗೂ ಮಧುಮಲೇ ಅರಣ್ಯಕ್ಕೆ ಭೇಟಿ ನೀಡಿದ್ದು ಸಂತೋಷವನ್ನುಂಟು ಮಾಡಿದೆ ಎಂದು ಪೋಸ್ಟ್ ಮಾಡಿದ್ದಾರೆ.



ಪ್ರಧಾನಿ ಮೋದಿ ಕಾರ್ಯಕ್ರಮಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧ

ಸಿಎಂ ಸೇರಿದಂತೆ ರಾಜ್ಯದ ರಾಜಕಾರಣಿಗಳಿಗೂ ಪ್ರವೇಶವಿಲ್ಲ

ಮೈಸೂರು,ಏ.9(ಎಂಟಿವೈ)– ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಲು ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದ ಕಾರ್ಯಕ್ರಮಕ್ಕೆ ಪ್ರವೇಶ ನಿರ್ಬಂಧಿಸಿದ್ದರಿಂದ ಸಾರ್ವಜನಿಕರು ನಿರಾಸೆ ಅನುಭವಿಸಿದರು. ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2022ರ ಹುಲಿ ಗಣತಿ ವರದಿಯನ್ನು ಪ್ರಧಾನಿ ಬಿಡುಗಡೆಗೊಳಿಸಿದರು. ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್, ಕೇಂದ್ರದ ಪರಿಸರ ಅರಣ್ಯ ಹಾಗೂ ಹವಾಮಾನ ಬದಲಾವಣೆ ಖಾತೆಯ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಹೊರತು ಪಡಿಸಿ ಯಾರೂ ವೇದಿಕೆಯಲ್ಲಿ ಇರಲಿಲ್ಲ. ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಆಹ್ವಾನಿತರು, ವಿದೇಶಗಳ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿತ್ತು. ಇವರನ್ನು ಹೊರತು ಪಡಿಸಿದರೆ ಯಾರೂ ಇರಲಿಲ್ಲ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಪ್ರಧಾನಿ ಕಾರ್ಯಕ್ರಮದಲ್ಲಿ ಶಿಷ್ಟಾಚಾರದಂತೆ ಪಾಲ್ಗೊಳ್ಳುವ ಮುಖ್ಯಮಂತ್ರಿ, ಸಚಿವರು, ಶಾಸಕರು, ಸಂಸದರು, ಹಿರಿಯ ಅಧಿಕಾರಿಗಳ ದಂಡೂ ಕಾರ್ಯಕ್ರಮದಿಂದ ದೂರ ಉಳಿಯಬೇಕಾಯಿತು. ಸಾರ್ವಜನಿಕರಿಗೂ ಪ್ರವೇಶ ಇರಲಿಲ್ಲ.

ವಿಧಾನಸಭಾ ಚುನಾವಣೆಯಿಂದಾಗಿ ಮೈಸೂರು ಸೇರಿದಂತೆ ರಾಜ್ಯಾದ್ಯಂತ ನೀತಿ ಸಂಹಿತೆ ಜಾರಿಯಲ್ಲಿ ಇದೆ ಈ ಹಿನ್ನೆಲೆಯಲ್ಲಿ ಚುನಾವಣೆ ಆಯೋಗದ ಅನುಮತಿ ಪಡೆದು ಆಯೋಜಿಸಿರುವ ಈ ಕಾರ್ಯಕ್ರಮಕ್ಕೆ ಸ್ಥಳೀಯ ಜನಪ್ರತಿನಿಧಿಗಳು, ರಾಜಕಾರಣಿಗಳಿಗೆ ಅವಕಾಶ ಇರಲಿಲ್ಲ.


ಸವಾರರ ಪರದಾಟ: ಪ್ರಧಾನಮಂತ್ರಿ ವಾಸ್ತವ್ಯ ಹೂಡಿದ್ದ ರ್‍ಯಾಡಿಷನ್ ಬ್ಲ್ಯೂ ಹೋಟೆಲ್, ಸಂಚರಿಸಲಿರುವ ಪ್ರಮುಖ ರಸ್ತೆಗಳು, ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಿಸಿರುವ ಓವೆಲ್ ಮೈದಾನ, ಕಾರ್ಯಕ್ರಮ ನಡೆಯಲಿರುವ ಘಟಿಕೋತ್ಸವ ಭವನದ ಸುತ್ತಮುತ್ತ ಹಾಗೂ ಪ್ರಮುಖ ಜಂಕ್ಷನ್‌ಗಳಲ್ಲಿ ಭಾರಿ ಬಂದೋಬಸ್ತ್ ಮಾಡಲಾಗಿತ್ತು ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ವಹಿಸಲಾಗಿತ್ತು. ಅರೆಸೇನಾ ಪಡೆಯೊಂದಿಗೆ ನಗರ ಸಶಸ್ತ್ರ ಮೀಸಲು ಪಡೆ, ಕಮಾಂಡೊ ಪಡೆಯೊಂದಿಗೆ ಸಿವಿಲ್ ಮತ್ತು ಸಂಚಾರ ಪೊಲೀಸರು ಸೇರಿದಂತೆ ಸಾವಿರಕ್ಕೂ ಹೆಚ್ಚು ಪೊಲೀಸರು ಭದ್ರತೆಗೆ ನಿಯೋಜಿಸಲಾಗಿತ್ತು. ಕೆಲವೆಡೆ ಬ್ಯಾರಿಕೇಡ್ ಅಳವಡಿಸಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ವಾಹನಗಳ ಸಂಚಾರ ಮಾರ್ಗವನ್ನೂ ಬದಲಿಸಲಾಗಿತ್ತು. ಇದು ಸಾರ್ವಜನಿಕರಿಗೆ, ವಾಹನ ಸವಾರರಿಗೆ ಕಿರಿಕಿರಿ ಉಂಟು ಮಾಡಿತು.

ಜನರಿಂದ ಅಸಮಾದಾನ : ಹಿನಕಲ್ ಜಂಕ್ಷನ್‌ನಿಂದ ಮೆಟ್ರೋಪೋಲ್ ವೃತ್ತದವರೆಗಿನ ಹುಣಸೂರು ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಹೀಗಾಗಿ, ಬದಲಿ ಮಾರ್ಗದಲ್ಲಿ ವಾಹನಗಳು ಸುತ್ತಿ ಬಳಸಿ ಬರುವಂತಾಯಿತು. ರಸ್ತೆಗಳು ಬಂದ್ ಆಗಿರುವುದು ಬಹಳಷ್ಟು ಸಾರ್ವಜನಿರಿಗೆ ತಿಳಿದಿರಲಿಲ್ಲ. ಅವರನ್ನು ಪೊಲೀಸರು ತಡೆದಿದ್ದರಿಂದ ಗಲಿಬಿಲಿಗೊಂಡರು. ಗೊಣಗುತ್ತಲೇ ಬೇರೆ ದಾರಿಯಲ್ಲಿ ಸಾಗಿದರು.

ಪರದಾಡಿದ ಚಿಣ್ಣರು: ಕುಕ್ಕರಹಳ್ಳಿ ಮುಖ್ಯದ್ವಾರದಿಂದ ಕಲಾಮಂದಿರದ ವರೆಗಿನ ರಸ್ತೆಯನ್ನೂ ಬಂದ್ ಮಾಡಲಾಗಿತ್ತು. ಇದರಿಂದ ರಂಗಾಯಣದಲ್ಲಿ ಆಯೋಜಿಸಿದ್ದ 'ಕಿಶೋರೋಲ್ಲಾಸ' ಚಿಣ್ಣರಮೇಳಕ್ಕೆ ತೆರಳುತ್ತಿದ್ದ ಮಕ್ಕಳಿಗೆ ತೊಂದರೆ ಆಯಿತು.

ಹುಲಿ ಸಂರಕ್ಷಿತ ಯೋಜನೆಗೆ 380 ಕೋಟಿ ರೂ ಮೀಸಲು

ಕೇಂದ್ರ ಪರಿಸರ ಇಲಾಖೆ ಸಚಿವ ಭೂಪೇಂದ್ರ ಯಾದವ್





ಮೈಸೂರು, ಏ.9(ಜಿಎ)–ಹುಲಿ ಸಂರಕ್ಷಿತ ಯೋಜನೆಗೆ 2014ರಲ್ಲಿ ಕೇವಲ 185 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿತ್ತು. ಆದರೆ, ಈಗ ಬಜೆಟ್‌ನಲ್ಲಿ 380 ಕೋಟಿ ರೂ.ಗಳನ್ನು ನೀಡುವ ಮೂಲಕ ಹುಲಿ ಸಂರಕ್ಷಣೆಗೆ ಹಣವನ್ನು ದ್ವಿಗುಣಗೊಳಿಸಲಾಗಿದೆ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಸಚಿವ ಭೂಪೇಂದ್ರ ಯಾದವ್ ತಿಳಿಸಿದರು.

ಹುಲಿ ಯೋಜನೆಯ 50ನೇ ವರ್ಷಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆವರಣದ ಕಾವೇರಿ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಕೇಂದ್ರ ಸರಕಾರ ಬಜೆಟ್‌ನಲ್ಲಿ ನೀಡಿರುವ ವಿಶೇಷ ಅನುದಾನ ಬಳಕೆ ಮಾಡಿಕೊಂಡು ಹುಲಿ ಸಂರಕ್ಷಣೆಗೆ ಎದುರಾಗಿರುವ ಸಮಸ್ಯೆಗಳನ್ನು ಜಾಗತಿಕವಾಗಿ ಎಲ್ಲರೂ ಒಟ್ಟಾಗಿ ಪರಿಹರಿಸಬೇಕಿದೆ. ಕೇಂದ್ರ ಸರಕಾರ ಬಜೆಟ್‌ನಲ್ಲಿ 380 ಕೋಟಿ ರೂ.ಗಳನ್ನು ನೀಡಿದ್ದು, ಹುಲಿ ಜಾತಿಗೆ ಸೇರಿದ ಪ್ರಾಣಿಗಳನ್ನು ಹೆಚ್ಚಾಗಿ ಹೊಂದಿರುವ ರಾಷ್ಟ್ರಗಳ ಸಹಕಾರ ಹಾಗೂ ಸಲಹೆ ಪಡೆದು ಸಮಸ್ಯೆಗಳನ್ನು ಪರಿಹರಿಸಲು ಮುಂದಾಗೋಣ ಎಂದರು.

1973ರಲ್ಲಿ ಹುಲಿ ಯೋಜನೆ ಪ್ರಾರಂಭಿಸಿದ್ದಾಗ ಕೇವಲ 9 ಹುಲಿ ಸಂರಕ್ಷಿತ ಪ್ರದೇಶಗಳು ಮಾತ್ರ ಇದ್ದವೂ, ಕಳೆದ ಐದು ದಶಕಗಳಲ್ಲಿ ಅವು 53 ಹುಲಿ ಸಂರಕ್ಷಿತ ಪ್ರದೇಶಗಳಾಗಿ ಬೆಳೆದಿವೆ. ಇದು ಪ್ರಮುಖ ಜಾತಿಗಳಿಗೆ ಮಾತ್ರವಲ್ಲದೆ ಇತರ ಅಳಿವಿನಂಚಿನಲ್ಲಿರುವ ಸಸ್ಯಗಳು ಮತ್ತು ಇತರೆ ಪ್ರಾಣಿಗಳ ಸುರಕ್ಷಿತ ಸ್ವರ್ಗವಾಗಿದೆ. ಈ ಹಿಂದೆ ಹುಲಿ ಸಂರಕ್ಷಿತ ಯೋಜನೆಗೆ 2014ರಲ್ಲಿ ಕೇವಲ 185 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿತ್ತು. ಆದರೆ, ಈಗ ಬಜೆಟ್‌ನಲ್ಲಿ 380 ಕೋಟಿ ರೂ.ಗಳನ್ನು ನೀಡುವ ಮೂಲಕ ಹುಲಿ ಸುರಕ್ಷತೆಗೆ ಹಣವನ್ನು ದ್ವಿಗುಣಗೊಳಿಸಲಾಗಿದೆ ಎಂದರು.

ಸುಮಾರು 1.3 ಶತಕೋಟಿ ಜನರನ್ನು ಹೊಂದಿರುವ ಮತ್ತು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯನ್ನು ಹೊಂದಿರುವ ದೇಶವು ಹುಲಿ ಸಂತತಿಯನ್ನು ಉಳಿಸಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಭಾರತವು ಪ್ರಪಂಚದಲ್ಲಿ ಹುಲಿ ಸಂರಕ್ಷಣೆಗೆ ಶೇ.70 ರಷ್ಟು ಬೆಂಬಲಿಸಿದೆ ಹುಲಿಗಣತಿಯ ವಾರ್ಷಿಕ ದರದಲ್ಲಿ ಶೇ.6 ರಷ್ಟು ಹೆಚ್ಚಾಗಿದ್ದು, ಹುಲಿ ಬೇಟೆಯನ್ನು ಶೂನ್ಯಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.


ಹುಲಿ ಯೋಜನೆಯು ಅಳಿವಿನಂಚಿನಲ್ಲಿರುವ ಹುಲಿಗಳ ಸಂರಕ್ಷಣೆ ಮತ್ತು ಅವುಗಳ ಸಂತತಿ ಹೆಚ್ಚಿಸುವುದು, ಆವಾಸ ಸ್ಥಾನದ ರಕ್ಷಣೆ ಹುಲಿ ಸ್ಥಿತಿ ಗತಿ ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಅದರಂತೆ ಗುಜರಾತ್‌ನಲ್ಲಿರುವ ಸೌರಾಷ್ಟ್ರ ಏಷ್ಯಾಟಿಕ್ ಸಿಂಹಗಳ ಏಕೈಕ ನೆಲೆಯಾಗಿದ್ದು, ದೇಶದ ಹೆಮ್ಮೆಯೂ ಆಗಿದೆ. ಸಿಂಹಗಳನ್ನು ರಕ್ಷಿಸಲು ಮತ್ತು ಅವುಗಳ ಸಂರಕ್ಷಣೆಯನ್ನು ಮತ್ತಷ್ಟು ಬಲಪಡಿಸಲು, ಕೇಂದ್ರ ಸರಕಾರ ಆಗಸ್ಟ್ 2020ರಲ್ಲಿ ಸಿಂಹ ಸಂರಕ್ಷಿತ ಯೋಜನೆ ಪ್ರಾರಂಭಿಸಿದೆ. ಒಂದು ಕಾಲಘಟ್ಟದಲ್ಲಿ 20ಕ್ಕಿಂತ ಕಡಿಮೆ ಇದ್ದ ಸಿಂಹಗಳ ಸಂಖ್ಯೆ, ಪ್ರಸ್ತುತ 700 ರಷ್ಟಿದೆ ಎಂದು ಸಂತಸ ವ್ಯಕ್ತಪಡಿಸಿದರು.

2014ರಲ್ಲಿ 7ಸಾವಿರವಿದ್ದ ಚಿರತೆ ಸಂಖ್ಯೆ, 2019 ವೇಳೆ 12 ಸಾವಿರ ಆಗಿದೆ. ಇತ್ತೀಚಿನ ಗಣತಿ ನಡೆಯುತ್ತಿದೆ. ಚಿರತೆಯನ್ನು ಭಾರತದಲ್ಲಿ ವನ್ಯಜೀವಿ (ರಕ್ಷಣೆ) ಕಾಯಿದೆಯ ಶೆಡ್ಯೂಲ್ ಐ ಅಡಿಯಲ್ಲಿ ಪಟ್ಟಿಮಾಡಲಾಗಿದೆ. ಈ ಮೂಲಕ ಅವುಗಳಿಗೆ ಅತ್ಯುನ್ನತ ಮಟ್ಟದ ರಕ್ಷಣೆಯನ್ನು ಒದಗಿಸಲಾಗುತ್ತಿದೆ. ಹಾಗೇ ಕೇಂದ್ರ ಸರಕಾರ ಹಿಮ ಚಿರತೆ ಉಳಿವಿಗೆ ಶ್ರಮಿಸುತ್ತಿದೆ. ಹಿಮಾಲಯದ ಮೇಲ್ಭಾಗದಲ್ಲಿ ಹಿಮ ಚಿರತೆ ಮತ್ತು ಅದರ ಆವಾಸಸ್ಥಾನವನ್ನು ರಕ್ಷಿಸಲು ನಮ್ಮ ಪ್ರಾಜೆಕ್ಟ್ 'ಸ್ನೋ ಲೆಪರ್ಡ್' ಪ್ರಾರಂಭಿಸಿದೆ. ಭಾರತವು ಇತ್ತೀಚಿಗೆ 12 ಹಿಮ ಚಿರತೆಯನ್ನು ವನ್ಯಜೀವಿ (ರಕ್ಷಣೆ) ಕಾಯಿದೆಯ ಶೆಡ್ಯೂಲ್ ಐ ಅಡಿಯಲ್ಲಿ ಪಟ್ಟಿಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹುಲಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ 19 ದೇಶಗಳ ಅರಣ್ಯ ಖಾತೆ ಸಚಿವರು ತಮ್ಮ ದೇಶದಲ್ಲಿ ಹುಲಿ ಸಂರಕ್ಷಣೆಗೆ ಕೂಗೊಂಡಿರುವ ಕ್ರಮಗಳ ಬಗ್ಗೆ ವಿವರಣೆ ನೀಡಿದರು. ಅರಣ್ಯ ತಜ್ಞರು ಮತ್ತು ಹಿರಿಯ ಅರಣ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಶ್ವದಲ್ಲೇ ಹುಲಿಗಳ ಸಂಖ್ಯೆಯಲ್ಲಿ ಭಾರತಕ್ಕೆ ಸಿಂಹಪಾಲು

ಒಂದನೇ ಪುಟದಿಂದ









ಭಾರತ ತನ್ನದೇ ಆದ ಸಂಸ್ಕೃತಿ ಮತ್ತು ಆಚರಣೆ ಹೊಂದಿರುವ ರಾಷ್ಟ್ರವಾಗಿದೆ. ಉತ್ತಮ ವಾದ ಜೀವವೈವಿಧ್ಯತೆ ಹೊಂದಿದೆ. ಬುಡ ಕಟ್ಟು ಸಮುದಾಯ ಸೇರಿದಂತೆ ಕೆಲವು ಜಾತಿ, ಜನಾಂಗದವರು ಇಂದಿಗೂ ಹುಲಿ ಯನ್ನು ಆರಾಧಿಸುವ ಸಂಪ್ರದಾಯ ಹೊಂದಿ ದ್ದಾರೆ. ಪ್ರಕೃತಿಯೊಂದಿಗೆ ಜೀವನ ನಡೆಸುವ ಪದ್ಧತಿಯೂ ನಮ್ಮಲ್ಲಿ ಕಾಣಬಹುದು. ಬುಡಕಟ್ಟು ಸಮುದಾಯ ವನ್ಯ ಸಂಪತ್ತಿಗೆ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮಧ್ಯಪ್ರದೇಶದಲ್ಲಿ ಹತ್ತು ಸಾವಿರ ವರ್ಷ ಗಳಷ್ಟು ಹಳೆಯದಾದ 'ರಾಕ್ ಆರ್ಟ್' ನಲ್ಲಿ ಹುಲಿಗಳ ಚಿತ್ರಣಗಳಿವೆ. ಮಧ್ಯ ಭಾರತದ ಭರಿಯಾ (ಭಾಡಿಯಾ) ಸಮು ದಾಯ ಮತ್ತು ಮಹಾರಾಷ್ಟ್ರದ ವರ್ಲಿ ಸಮು ದಾಯದವರು ಹುಲಿಯನ್ನು ಪೂಜಿಸು ತ್ತಾರೆ ವಿವಿಧ ಸಮುದಾಯಗಳು ಹುಲಿಯನ್ನು ಬಂಧು, ಸ್ನೇಹಿತ ಮತ್ತು ಸಹೋದರ ಎಂದು ತಿಳಿಯುತ್ತಾರೆ. ದೇಶದಲ್ಲಿ ಆಧ್ಯಾತ್ಮಿಕವಾಗಿಯೂ ಹುಲಿಗೆ ಸ್ಥಾನಮಾನ ನೀಡಲಾಗಿದೆ. ದುರ್ಗ ಮತ್ತು ಅಯ್ಯಪ್ಪ ಸ್ವಾಮಿಗೂ ಹುಲಿಯೇ ವಾಹನವಾಗಿದೆ. ಭಾರತದಲ್ಲಿ ಹುಲಿಗೆ ಪೂಜನೀಯ ಸ್ಥಾನಮಾನ ಇದೆ ಎಂದರು.

ಈ ಹಿಂದೆ ದೇಶದ ಪವಿತ್ರ ನದಿಯಾಗಿರುವ ಗಂಗಾ ನದಿ ಮಲೀನಗೊಂಡಿತ್ತು. ಅದು ಅಪಾಯದ ಸ್ಥಿತಿಯಲ್ಲಿತ್ತು. ಅದರಲ್ಲಿದ್ದ ಜಲಚರಗಳಿಗೆ ಸಂಕಷ್ಟ ಒದಗಿತ್ತು. ಆದರೆ, ಗಂಗಾ ನದಿಯನ್ನು ಸ್ವಚ್ಛಗೊಳಿಸಿದ ಹಿನ್ನೆಲೆಯಲ್ಲಿ ಇದೀಗ ಅದರ ಮಹತ್ವ ಹಾಗೂ ಪಾವಿತ್ರತೆ ಕಾಪಾಡುವುದರೊಂದಿಗೆ ಜಲಚರಗಳ ಹಿತ ಕಾಯಲಾಗಿದೆ. ಈ ಸಾಧನೆಗಳಿಗೆ ಜನರ ಸಹಭಾಗಿತ್ವ ಮತ್ತು ಸಂರಕ್ಷಣಾ ಸಂಸ್ಕೃತಿ ಅಗತ್ಯ. ಪರಿಸರ ಸಂರಕ್ಷಣೆಯಾದಂತೆ ಜೀವವೈವಿಧ್ಯತೆ ಸಂರಕ್ಷಣೆ ಸಾಧ್ಯ. ದೇಶದಲ್ಲಿ ಹೊಸದಾಗಿ 11 ಜೌಗು ಪ್ರದೇಶಗಳನ್ನು ರಾಮ್‌ಸರ್‌ಸೈಟ್ ಪಟ್ಟಿಗೆ ಸೇರಿಸಲಾಗಿದ್ದು, ಇದೀಗ ದೇಶದಲ್ಲಿ ರಾಮ್‌ಸರ್ ಸೈಟ್‌ಗಳ ಸಂಖ್ಯೆಯನ್ನು 75ಕ್ಕೆ ಏರಿದೆ. 2019ಕ್ಕೆ ಹೋಲಿಸಿದರೆ 2021ರ ವೇಳೆಗೆ ಭಾರತದಲ್ಲಿ 2200 ಚದರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಅರಣ್ಯ ಬೆಳೆಸಿ, ಮರಗಳ ಹೊದಿಕೆಯಾಗುವಂತೆ ಕ್ರಮ ಕೈಗೊಳ್ಳಲಾಗಿದೆ. ಕಮ್ಯುನಿಟಿ ರಿಸರ್ವ್ (ಸಮುದಾಯ ಮೀಸಲು ಅರಣ್ಯ)ಸಂಖ್ಯೆಯು 43ರಿಂದ 100ಕ್ಕೆ ಹೆಚ್ಚಳವಾಗಿದೆ. ಪರಿಸರ ಸೂಕ್ಷ್ಮ ವಲಯ, ಅಧಿಸೂಚಿಸಲಾದ ರಾಷ್ಟ್ರೀಯ ಉದ್ಯಾನವನಗಳು ಹಾಗೂ ಅಭಯಾರಣ್ಯಗಳ ಸಂಖ್ಯೆಯು 9 ರಿಂದ 468 ಕ್ಕೆ ಹೆಚ್ಚಾಗಿದೆ ಎಂದು ವಿವರಿಸಿದರು.

ನಾನು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ವನ್ಯಜೀವಿ ಸಂರಕ್ಷಣೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದೆ. ಸಿಂಹಗಳ ಸಂತತಿ ಉಳಿವಿಗಾಗಿ ಕಾರ್ಯಕ್ರಮ ರೂಪಿಸಲಾಯಿತು. ಯಾವುದೇ ಒಂದು ಭೌಗೋಳಿಕ ಪ್ರದೇಶಕ್ಕೆ ಕಾಡು ಪ್ರಾಣಿಗಳನ್ನು ಸೀಮಿತಗೊಳಿಸುವುದರಿಂದ ಅವುಗಳನ್ನು ಉಳಿಸಲು ಸಾಧ್ಯವಿಲ್ಲ. ಅನೇಕ ಕಾಡಂಚಿನ ಗ್ರಾಮಗಳ ಜನ, ಹಾಡಿಗಳಲ್ಲಿರುವ ಆದಿವಾಸಿಗಳು ಹಾಗೂ ಸ್ಥಳೀಯ ಜನರು ಪ್ರಾಣಿಗಳ ನಡುವೆ ಭಾವನಾತ್ಮಕ ಮತ್ತು ಆರ್ಥಿಕತೆಯ ಸಂಬಂಧವನ್ನು ಹೊಂದಿದ್ದಾರೆ. ಇದಕ್ಕಾಗಿಯೇ ಗುಜರಾತ್‌ನಲ್ಲಿ ವನ್ಯಜೀವಿ ಮಿತ್ರ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಅಲ್ಲಿ ಬೇಟೆಯಂತಹ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ನಗದು ಬಹುಮಾನದ ಪ್ರೋತ್ಸಾಹವನ್ನು ನೀಡಲಾಯಿತು. ಘಿರ್ ಪ್ರದೇಶದಲ್ಲಿ ಸಿಂಹಗಳ ಪುನರ್ವಸತಿ ಕೇಂದ್ರವನ್ನು ತೆರೆಯಲಾಗಿದೆ. ಅರಣ್ಯ ಇಲಾಖೆಯಲ್ಲಿ ಮಹಿಳಾ ಬೀಟ್ ಗಾರ್ಡ್ ಮತ್ತು ಫಾರೆಸ್ಟರ್‌ಗಳನ್ನು ನೇಮಿಸುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಗಿರ್‌ನಲ್ಲಿ ಪ್ರವಾಸೋದ್ಯಮ ಮತ್ತು ಪರಿಸರ ಪ್ರವಾಸೋದ್ಯಮದ ಬೃಹತ್ ಪರಿಸರ ವ್ಯವಸ್ಥೆಯಾಗಿ ರೂಪುಗೊಂಡಿದೆ ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಕೇಂದ್ರದ ಪರಿಸರ ಹಾಗೂ ಅರಣ್ಯ ಸಚಿವ ಭೂಪೇಂದ್ರ ಯಾದವ್, ಕೇಂದ್ರದ ಪರಿಸರ ಮತ್ತು ಅರಣ್ಯ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಭೆ ಉಪಸ್ಥಿತರಿದ್ದರು.

ಈ ಬಾರಿ ವೈಜ್ಞಾನಿಕವಾಗಿ ಹುಲಿ ಸಮೀಕ್ಷೆಯನ್ನು ನಡೆಸಲಾಗಿದ್ದು, ದೇಶದ 53 ಹುಲಿ ಸಂರಕ್ಷಿತ ಪ್ರದೇಶ ಹಾಗೂ ವಿವಿಧ ವನ್ಯಧಾಮದಲ್ಲಿ 32,588 ಕ್ಯಾಮರಾ ಟ್ರಾಪ್ ಬಳಸಲಾಗಿತ್ತು. ಈ ಕ್ಯಾಮರಾಗಳಲ್ಲಿ 4,70,81,881 ಫೋಟೋಗಳು ತೆಗೆಯಲಾಗಿತ್ತು. ಅವುಗಳಲ್ಲಿ 97,399 ಹುಲಿ ಚಿತ್ರಗಳೇ ಸೆರೆಯಾಗಿದ್ದವು. ಇದರಲ್ಲಿ 3080 ಹುಲಿಗಳ ಚಿತ್ರಗಳನ್ನು ಪ್ರತ್ಯೇಕಿಸಲಾಗಿತ್ತು. ಸಮೀಕ್ಷೆ ವೇಳೆ 6,41,449 ಹುಲಿ ಹೆಜ್ಜೆ ಗುರುತನ್ನು ದಾಖಲೀಕರಿಸಲಾಗಿತ್ತು. ಸಮೀಕ್ಷೆಯಲ್ಲಿ ದಾಖಲಾದ ಹೆಜ್ಜೆ ಗುರುತು, ಫೋಟೋ ಹಾಗೂ ಹುಲಿಗಳ ಮೈಮೇಲಿನ ಪಟ್ಟೆ ಗುರುತು ಸೇರಿದಂತೆ ವಿವಿಧ ಆಯಾಮಗಳಲ್ಲಿ ವೈಜ್ಞಾನಿಕವಾಗಿ ಪರಿಶೀಲಿಸಿ ಸಮೀಕ್ಷಾ ವರದಿ ತಯಾರಿಸಲಾಗಿದ್ದು, ಅವುಗಳಲ್ಲಿ ಭಾರತ 2022ನೇ ಸಾಲಿನ ಸಮೀಕ್ಷೆಯಲ್ಲಿ 3,167 ಹುಲಿಗಳಿರುವುದು ಖಚಿತವಾಗಿದೆ.

2006ರಲ್ಲಿ ನಡೆದ ಸಮೀಕ್ಷೆಯಲ್ಲಿ ಭಾರತದಲ್ಲಿ 1,411 ಹುಲಿ, 2010ರಲ್ಲಿ 1,706, 2014ರಲ್ಲಿ 2,226, 2018ರ ಸಮೀಕ್ಷೆಯಲ್ಲಿ 2,967 ಹುಲಿಗಳಿರುವುದು ಪತ್ತೆಯಾಗಿತ್ತು. ಇದೀಗ 3,167 ಹುಲಿಗಳಿರುವುದು ದಾಖಲಾಗಿದೆ. ಸಮೀಕ್ಷೆ ವೇಳೆ ಒಂದು ವರ್ಷದ ಕೆಳಗಿನ ಮರಿಗಳನ್ನು ಕೈಬಿಡಲಾಗಿದೆ.

ಈ ಬಾರಿ ಕರ್ನಾಟಕ ಹುಲಿಗಳ ಸಂಖ್ಯೆಯಲ್ಲಿ ಭಾರತದಲ್ಲೇ ಅಗ್ರಗಣ್ಯ ಸ್ಥಾನ ಹೊಂದಲಿದೆ ಎಂಬ ಆಶಯವಿದ್ದು, ಕಳೆದ ಬಾರಿ ಸಮೀಕ್ಷೆಯಲ್ಲಿ ಮಧ್ಯಪ್ರದೇಶ 526 ಹುಲಿ ಹೊಂದಿ ಮೊದಲ ಸ್ಥಾನ ಪಡೆದಿದ್ದರೆ, ಕರ್ನಾಟಕ 524 ಹುಲಿಯಿಂದಾಗಿ ಎರಡನೇ ಸ್ಥಾನ ಪಡೆದಿತ್ತು. ಈ ಸಾಲಿನ ಸಮೀಕ್ಷೆಯಲ್ಲಿ ಯಾವ ರಾಜ್ಯ ಎಷ್ಟನೇ ಸ್ಥಾನ ಪಡೆದಿದೆ ಎಂಬ ಅಂಕಿ ಅಂಶವನ್ನು ಇನ್ನೆರಡು ದಿನದಲ್ಲಿ ಎನ್‌ಟಿಸಿಎ ಬಿಡುಗಡೆ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ನಕ್ಕರೆ ಅದೇ ಸ್ವರ್ಗ

ಗೆಳೆಯ : ಪ್ರೀತಿಗೂ, ಮದುವೆಗೂ ಏನು ವ್ಯತ್ಯಾಸ...?
ಗುಂಡ : ಪ್ರೀತಿ ಬಸ್ಸಿನಲ್ಲಿ ಹೋದ ಹಾಗೆ, ಮದುವೆ ಅಂದ್ರೆ ವಿಮಾನದಲ್ಲಿ ಹೋದ ಹಾಗೆ.
ಗೆಳೆಯ : ಅದು ಹೇಗೆ ಗುಂಡ...?
ಗುಂಡ : ಇಷ್ಟ ಇಲ್ಲ ಅಂದ್ರೆ ಬಸ್ಸಿನಿಂದ ಇಳಿಯಬಹುದು, ಆದರೆ ವಿಮಾನದಲ್ಲಿ ತಕ್ಷಣ ಇಳಿಯೋಕ್ಕಾಗಲ್ಲ!!

ಮೈಸೂರು ಮಿತ್ರ
ಸೋಮವಾರ, 10 ಏಪ್ರಿಲ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅವಶ್ಯಕತೆಗಿಂತ ಹೆಚ್ಚಾಗಿ ಪ್ರಾಮಾಣಿಕತೆ ತೋರುವ ಅವಶ್ಯಕತೆ ಇಲ್ಲ. ಅತಿಯಾಗಿ ಪ್ರಾಮಾಣಿಕರಾಗಿರುವುದು ಆರೋಗ್ಯಕರವಲ್ಲ, ಏಕೆಂದರೆ ಅಂಕು–ಡೊಂಕಾಗಿರುವ ಮರಗಳನ್ನು ಬಿಟ್ಟು ನೇರವಾಗಿರುವ ಮರಗಳನ್ನು ಮೊದಲು ಕಡಿಯುತ್ತಾರೆ.

– ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಪ್ಪೆನ ತಕ್ಕಡಿಲಿ ಹಾಕಿದ ಹಾಗೆ...

ನಿಮ್ಮ ಪತ್ರಗಳು

ನಂದಿನಿ ವಿಲೀನಕ್ಕೆ ಎಲ್ಲರ ವಿರೋಧ

ಮಾನ್ಯರೆ,



ಕೆಲವು ದಿನಗಳಿಂದ ನಂದಿನಿ ಉತ್ಪನ್ನ ಹಾಗೂ ಅಮುಲ್ ಉತ್ಪನ್ನದ ನಡುವೆ ನಮ್ಮ ರಾಜಕೀಯ ನಾಯಕರು ತಮ್ಮ ಬೇಳೆ ಬೇಯಿಸಿ ಕೊಳ್ಳುತ್ತಿರುವುದು ವಿಪರ್ಯಾಸವೆ ಸರಿ. ನಂದಿನಿ ಕರ್ನಾಟಕದ ಒಂದು ಹೆಸರಾಂತ ಉದ್ಯಮ. ಅದನ್ನು ವಿಲೀನಗೊಳಿಸುವುದಕ್ಕೆ ಎಲ್ಲರ ವಿರೋಧವಿದೆ. ಸರ್ಕಾರವು ಇದನ್ನು ಹಿಂಪಡೆದಿದೆ. ಆದಾಗ್ಯೂ ರಾಜಕೀಯ ಮುಖಂಡರು ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಬೇಡವಾದ ನೇಮಕಾತಿ, ಅಕ್ರಮ ಟೆಂಡರ್, ನೇಮಕಾತಿ ಹಗರಣದಲ್ಲಿ ಪ್ರತಿಭಾವಂತ ಬಡ ಮಕ್ಕಳಿಗೆ ಅನ್ಯಾಯವಾದಾಗ ಇವರೆಲ್ಲ ಎಲ್ಲಿ ಹೋಗಿದ್ದರು. ಹಾಲಿ, ನೇಮಕಾತಿ ಹಗರಣ ಕಾನೂನಿನ ತಡೆಯಾಜ್ಞೆಯಲ್ಲಿದೆ. ಎಲ್ಲಾ ಸೋರಿಕೆಯನ್ನು ತಡೆಗಟ್ಟಿ ಉತ್ತಮ ಕಾಯಕಲ್ಪ ಕೊಟ್ಟರೆ ರೈತರಿಗೆ ಹಾಗೂ ಗ್ರಾಹಕರಿಗೆ ನಂದಿನಿ ಅಮೃತವಾಗುವುದರಲ್ಲಿ ಹಾಗೂ ದೇಶದ ನಂ.1 ಸ್ಥಾನದಲ್ಲಿ ಇರುವುದರಲ್ಲಿ ಎರಡು ಮಾತಿಲ್ಲ. ಇದು ಹಿಟ್ಲರ್ ಸಂಸ್ಕೃತಿಯಲ್ಲ, ಯಾರು ಎಲ್ಲಿ ಬೇಕಾದರು ತಮ್ಮ ಉತ್ಪನ್ನ ವಿಸ್ತರಿಸಬಹುದು. ಆಗಲೆ ಬೇಕಾದಷ್ಟು ಬ್ರಾಂಡ್‌ನ ಉತ್ಪನ್ನ ನಮ್ಮ ರಾಜ್ಯಕ್ಕೆ ಕಾಲಿಟ್ಟಿದೆ. ಅದರಲ್ಲಿ ಅಮುಲ್ ಒಂದು. ಅವಕ್ಕಿರದ ರಾಜಕೀಯ ಅಮುಲ್‌ಗೆ ಯಾಕೆ. ಅಸ್ಮಿತೆ ಹೆಸರಲ್ಲಿ ನಕಲಿ ಹೋರಾಟಗಾರರು ರಾಜಕೀಯ ಮಾಡುವುದನ್ನು ನಿಲ್ಲಿಸಿ. ನಮ್ಮ ರಾಜ್ಯದ ನಂದಿನಿ ಉತ್ಪನ್ನ, ಮೈಸೂರು ಸ್ಯಾಂಡಲ್ ಸೋಪು, ಮೈಸೂರು ಸೀರೆ ಮುಂತಾದ ಉತ್ಪನ್ನಗಳು ಬೇರೆ ರಾಜ್ಯದಲ್ಲಿ ಯಶಸ್ವಿಯಾಗಿಲ್ಲವೆ. ಗುಣಮಟ್ಟ ಕೊಟ್ಟರೆ ಇಂತಹ ನೂರು ಅಮುಲ್ ಬಂದರು. ಏನು ಮಾಡಲಾಗುವುದಿಲ್ಲ, ಈಗಿನ ಜನರು ದಡ್ಡರಲ್ಲ ನಂದಿನಿ ಹೆಸರಲ್ಲಿ ರಾಜಕೀಯ ಬಿಡಿ. ನಂದಿನಿ ರೈತರು ಹಾಗೂ ಗ್ರಾಹಕರ ಸ್ವತ್ತು. ರಾಜಕೀಯ ಮುಖಂಡರದಲ್ಲ.

– ಸಂತೋಷ, ಮೈಸೂರು

ಧನ್ಯವಾದಗಳು 'ಮೈಸೂರು ಮಿತ್ರ'

ಮಾನ್ಯರೆ,

ಪತ್ರಿಕೋದ್ಯಮ ಎಂಬುದು ಕೇವಲ ನಾಲ್ಕು ಗೋಡೆಗಳ ನಡುವಿನ ತರಗತಿ ಕೋಣೆಯೊಳಗೆ ಕುಳಿತು ಕಲಿಯುವುದಷ್ಟೇ ಅಲ್ಲ, ಪತ್ರಿಕೋದ್ಯಮದ ನೈಜ್ಯ ಕಲಿಯುವಿಕೆ 'ಸಾಮಾಜಿಕ ಒಳಗೊಳ್ಳುವಿಕೆ' ಎಂದರೇ ತಪ್ಪಾಗಲಾರದು, ನಮಗೆ ದಿನಪತ್ರಿಕೆಗಳು ಸಹ ಪಾಠ ಹೇಳಿ ಕೊಡುವ ಗುರುಗಳಿದ್ದ ಹಾಗೆ, ಇಂತಹ ಪತ್ರಿಕೆಗಳು ನೂರಾರು ಸುದ್ದಿಗಳನ್ನೊತ್ತು ನಮ್ಮ ಮನೆ ಬಾಗಿಲಿಗೆ ಬರುತ್ತವೆ. ಅಂತಹ ಪತ್ರಿಕೆಗಳಲ್ಲಿ 'ಮೈಸೂರು ಮಿತ್ರ' ಪ್ರಮುಖವಾದದು, ಈ ಪತ್ರಿಕೆ ನಮ್ಮ ಕೈ ಸೇರುವ ಮುನ್ನ ಹಲವಾರು ಹಂತಗಳನ್ನು ದಾಟಿ ಬರುತ್ತದೆ. ಈ ಪ್ರಕ್ರಿಯೆಯನ್ನು ಹತ್ತಿರದಿಂದ ಕಾಣಲು 'ಮೈಸೂರು ಮಿತ್ರ' ಕಚೇರಿಗೆ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ತೆರಳಿದ್ದೆವು, ಒಂದು ಪತ್ರಿಕೆ ಸಿದ್ಧವಾಗಲು ನಾನಾ ರೀತಿಯ ಹಂತಗಳನ್ನು ದಾಟಿ ಹಲವರ ಪರಿಶ್ರಮದಿಂದ ಆ ಪತ್ರಿಕೆ ಸಿದ್ಧವಾಗುತ್ತದೆ. ಸುದ್ದಿ ಸಂಗ್ರಹದಿಂದಿಡಿದು ಆ ಸುದ್ದಿ ಪತ್ರಿಕೆಯಲ್ಲಿ ಮುದ್ರಣವಾಗಿ ಅದು ಓದುಗರನ್ನು ಕೈ ಸೇರುವ ಪ್ರಕ್ರಿಯೆಯನ್ನು ಕಣ್ತುಂಬಿಕೊಂಡೆವು, ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಒಂದು ಪತ್ರಿಕೆ ಸಿದ್ಧವಾಗುವ ಸಾಮಾನ್ಯ ಅರಿವು ಇರಲೇಬೇಕು. ಹಾಗಾಗಿ ಇದೊಂದು ಉತ್ತಮ ಅವಕಾಶವಾಗಿತ್ತು. ಇಂತಹ ಪತ್ರಿಕೋದ್ಯಮದ ನೈಜ್ಯ ಕಲಿಯುವಿಕೆಯ ಅವಕಾಶ ಕಲ್ಪಿಸಿಕೊಟ್ಟಂತಹ 'ಮೈಸೂರು ಮಿತ್ರ' ಹಾಗೂ ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗಕ್ಕೆ ಹೃದಯಸ್ಪರ್ಶಿ ಧನ್ಯವಾದಗಳು.

– ನವೀನ್ ಕೋಳೂರು, ಪತ್ರಿಕೋದ್ಯಮ ವಿದ್ಯಾರ್ಥಿ,
ಮೈಸೂರು ವಿಶ್ವವಿದ್ಯಾನಿಲಯ

ಮುತ್ತಿಡುವ ಪರಿಪಾಠ ಹೊಸದಲ್ಲ

ಮಾನ್ಯರೆ,

ಬೆಂಗಳೂರಿನ ಯಶವಂತಪುರದಲ್ಲಿ ಇತ್ತೀಚೆಗೆ ನಡೆದ ಜೆಡಿಎಸ್‌ನ ಪಂಚರತ್ನ ಯಾತ್ರೆಯ ಸಂದರ್ಭದಲ್ಲಿ ಮಹಿಳೆಯೋರ್ವಳು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರ ಸ್ವಾಮಿಯವರ ಕೆನ್ನೆಗೆ ಮುತ್ತಿಟ್ಟ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜಕೀಯ ನಾಯಕರಿಗೆ ಅಥವಾ ಸಿನಿಮಾ ನಟ–ನಟಿಯರಿಗೆ ಅಥವಾ ಇತರ ಕ್ಷೇತ್ರಗಳ ಸಾಧಕರಿಗೆ ಬಹಿರಂಗವಾಗಿ ಮುತ್ತಿಡುವ ಪರಿಪಾಠವೇನೂ ಹೊಸದಲ್ಲ. ಇಂತಹ ಸಂಸ್ಕೃತಿ ಪರದೇಶಗಳಲ್ಲಿ ಸಹ ಕಂಡು ಬರುತ್ತದೆ. ಕೆಲವು ವರ್ಷಗಳ ಹಿಂದೆ, ಅಂದರೆ 2016ರ ಜೂನ್ ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕಾಂಗ್ರೆಸ್‌ನ ನೂತನ ಜಿಪಂ ಮತ್ತು ತಾಪಂ ಸದಸ್ಯರಿಗೆ ಏರ್ಪಡಿಸಲಾಗಿದ್ದ ಸಮಾವೇಶದಲ್ಲಿ ಮಹಿಳೆಯೋರ್ವಳು ಬಹಿರಂಗವಾಗಿ 'ಕಿಸ್' ಕೊಟ್ಟಾಗ ದೊಡ್ಡಮಟ್ಟದ ಸುದ್ದಿಯಾಗಿತ್ತು. ಇಂತಹ ಮುತ್ತಿಕ್ಕುವ ಪ್ರಸಂಗಗಳು "ಆಗಾಗ" ನಡೆಯುತ್ತಲೇ ಇರುತ್ತದೆ. ಮುತ್ತಿಡುವುದು ಕೆಟ್ಟದ್ದೇನೂ ಅಲ್ಲ. ಅದರಲ್ಲಿ ಕೆಟ್ಟ ಉದ್ದೇಶವನ್ನು ಕೂಡ ಹುಡುಕಬೇಕಿಲ್ಲ. ಅದು ಪ್ರೀತಿಯ ದ್ಯೋತಕವೆಂದು ಹೇಳಬಹುದು. ಆದ್ದರಿಂದ ಮುತ್ತಿಡಿಸಿಕೊಂಡ ಪುರುಷರ ಪತ್ನಿಯರು "ಸೀರಿಯಸ್" ಆಗುವುದು ಬೇಡ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಐಪಿಎಲ್‌ನಲ್ಲಿ ಮಂಕಾದ ಕನ್ನಡ ಕಾಮೆಂಟ್ರಿ

ಮಾನ್ಯರೆ,

ಯಾವುದೇ ಕಾರ್ಯಕ್ರಮ, ಸಮಾರಂಭಕ್ಕೆ ನಿರೂಪಕ ಕೇಂದ್ರ ಬಿಂದುವಾಗಿರುತ್ತಾರೆ. ಅವರ ಮಾತಿನಿಂದಲೇ ಜನರನ್ನು ತಮ್ಮತ್ತ ಸೆಳೆಯುವ ಶಕ್ತಿ ಹಾಗೂ ಕಾರ್ಯಕ್ರಮದ ಯಶಸ್ಸು ನಿರ್ಧಾರವಾಗಿರುತ್ತದೆ. ಪ್ರಸ್ತುತ ರಂಗು ರಂಗಿನ ಐಪಿಎಲ್ ಹಬ್ಬ ಆರಂಭ ಗೊಂಡಿದ್ದು ವೀಕ್ಷಕರನ್ನು ರಂಜಿಸುತ್ತಿದೆ. ಈ ವಿಚಾರದಲ್ಲಿ ಆಟಗಾರರು ಕಮಾಲಿನ ಸಿಕ್ಸರ್, ಬೌಲರ್ ವಿಕೆಟ್ ಪಡೆದು, ಕ್ಯಾಚ್ ಹಿಡಿದು ಹೀಗೆ ಕೂತೂಹಲ ಮ್ಯಾಚ್‌ಗಳಿಗೆ ಕಾಮೆಂಟ್ರಿಗಳಿಂದ ಮೆರಗು ಹೆಚ್ಚುತ್ತದೆ.

ಕಾಮೆಂಟ್ರಿಗಳನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೇಳುವುದು ಒಂದು ಅನಂದ, ಅವರ ಮಾತಿನ ಶೈಲಿ ಜನರನ್ನು ತಮ್ಮತ್ತ ಸೆಳೆಯುತ್ತದೆ. ಅದ್ಯಾಕೋ ಕನ್ನಡ ಕಾಮೆಂಟ್ರಿಗಳನ್ನು ಗಮನಿಸಿದಾಗ ಮ್ಯಾಚ್ ಗೆದ್ದರು, ಸೋತರು ಒಂದೇ ರೀತಿಯಲ್ಲಿ ಮಾತು. ಆ ಮಾತಿನಲ್ಲಿ ಹುಮಸ್ಸು ಇಲ್ಲದಿರುವುದು, ಪಂದ್ಯದ ಮಧ್ಯೆ ನಗು ಚಟಾಕೆಗಳು ಹೀಗೆ ಎಲ್ಲವೂ ಕಾಮೆಂಟ್ರಿಯಲ್ಲಿ ಇಲ್ಲದೆ ಇರುವುದು, ಒಂದು ರೀತಿ ಊಟಕ್ಕೆ ಮಾಸಲೆ ಇಲ್ಲವೆನ್ನುವುದು ಜನರ ಅಭಿಪ್ರಾಯ. ಹಾಗಾಗಿ ಕನ್ನಡದಲ್ಲಿ ಕಾಮೆಂಟ್ರಿಗಳಿಗಾಗಿ ಅನೇಕ ಕ್ರೀಡಾ ಪಂಡಿತರು, ರೇಡಿಯೋ ಜಾಕಿಗಳು ಇದ್ದಾರೆ ಅವರಿಗೆ ಅವಕಾಶ ಕಲ್ಪಿಸಿ ಕೊಟ್ಟರೆ, ಅಯಸ್ಕಾಂತದಂತೆ ಪಂದ್ಯವನ್ನು ಮಾತೃ ಭಾಷೆಯಲ್ಲಿ ನೋಡುವ ಹಾಗೆ ಮಾಡಬಹುದು ಅಲ್ವಾ, ಏನಂತೀರಾ ನೀವು...?

– ಆನಂದ ಜೇವೂರ್, ಕಲಬುರಗಿ



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಸಾಮಾಜಿಕ ಜಾಲತಾಣ ಎಂಬ ಮಾಯಾಜಾಲ!

ಸಾಮಾಜಿಕ ಜಾಲತಾಣ ಇಂದು ಒಂದು ಮಾಯಾಜಾಲವಾಗಿ ಮಾರ್ಪಾಡಾಗಿದೆ. ಆಬಾಲ ವೃದ್ಧರಾಗಿ ಇಂದು ಈ ಮಾಯಾಜಾಲದಲ್ಲಿ ಅರಿವಿಲ್ಲದ ರೀತಿಯಲ್ಲಿ ಸಿಲುಕಿ, ಅದರಿಂದ ಹೊರಬರಲಾಗದೆ ತೊಳಲಾಡುತ್ತಿರುವ ಅನೇಕರನ್ನು ಕಾಣಬಹುದು. ಹವ್ಯಾಸವಾಗಬೇಕಾದದ್ದು ಹುಚ್ಚು ಗೀಳಾಗಿ ಪರಿಣಮಿಸಿ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರತ್ತಿರುವುದು ಸುಳ್ಳಲ್ಲ. ತಾಂತ್ರಿಕತೆ ಹೆಚ್ಚಾದಂತೆಲ್ಲಾ ಮನುಷ್ಯ ಹೆಚ್ಚು ಕ್ರಿಯಾಶೀಲನಾಗುತ್ತಾನೆ. ಆದರೆ ಸಾಮಾಜಿಕ ಜಾಲತಾಣ ಎಂಬ ಮಾಯಾವಿ ಮನುಷ್ಯನನ್ನು ಸೋಂಬೇರಿಯಾಗಿಸುವ ಸಾಧ್ಯತೆಯೇ ಹೆಚ್ಚಿದೆ. ತಾಂತ್ರಿಕ ಉಪಕರಣಗಳು ಮನುಷ್ಯನಿಗೆ ಸೇವಕರಾಗಿ ಇರಬೇಕು, ಆದರೆ ಮನುಷ್ಯನೇ ಅವುಗಳ ಸೇವಕನಾಗಿ ಬಿಟ್ಟಿರುವುದು ದುರದೃಷ್ಟಕರ. ಸೋಷಿಯಲ್ ಮೀಡಿಯಾ ಹುಚ್ಚು ಬೆಳೆಸಿಕೊಂಡವರು ತಮ್ಮ ಅಮೂಲ್ಯ ಸಮಯ, ಆರೋಗ್ಯ ಅಷ್ಟೇ ಅಲ್ಲದೆ ಹಣವನ್ನೂ ಕಳೆದುಕೊಳ್ಳುತ್ತಿದ್ದಾರೆ. ಆಶ್ಚರ್ಯವೆಂದರೆ ಕೆಲವರು 'ಹನಿಟ್ರ್ಯಾಪ್'ನಂತಹ ಮೋಹಕ ಮಾಯಾಜಾಲಕ್ಕೆ ಸಿಲುಕಿ ಹಣವಷ್ಟೇ ಅಲ್ಲದೆ ಮಾನವನ್ನು ಕಳೆದುಕೊಂಡ ಉದಾಹರಣೆಗಳು ಸಹ ಇವೆ.

ಮನುಷ್ಯನ ಮೂಲಭೂತ ಅವಶ್ಯಕತೆಗಳ ಪಟ್ಟಿಗೆ ಇಂದು ಮೊಬೈಲ್ ಫೋನ್ ಸಹ ಸೇರಿದೆ. ಹೌದು, ಮೊಬೈಲ್ ಫೋನ್‌ನಿಂದ ಅನೇಕ ಪ್ರಯೋಜನಗಳಿವೆ. ಅನೇಕ ಸೇವೆಗಳು ಮನುಷ್ಯನ ಜೀವನಕ್ಕೆ ಸಹಕಾರಿಯಾಗಿವೆ. ಆದರೆ ಮೊಬೈಲ್ ಫೋನ್‌ಗಳಲ್ಲಿ ಲಭ್ಯವಿರುವ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್ಯಾಪ್, ಇನ್‌ಸ್ಟಾಗ್ರಾಂ, ಟ್ವೀಟರ್... ಮತ್ತಿತರ ಆಪ್‌ಗಳು ಮನುಷ್ಯರನ್ನು ಹೆಚ್ಚಾಗಿ ಬೆಸೆಯುವ ಬದಲು ಅನೇಕರ ಬದುಕನ್ನು ಆಪತ್ತಿನ ಅಂಚಿಗೆ ತಂದು ನಿಲ್ಲಿಸಿವೆ. ಗುರುತಿಸಿಕೊಳ್ಳುವಿಕೆ ಅಂದರೆ 'ಐಡೆಂಟಿಟಿ ಕ್ರೈಸಿಸ್'ನಿಂದ ಬಳಲುವ ಅನೇಕರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಸುಲಭವಾಗಿ ಸಿಗುವ ಲೈಕ್‌ಗಳು, ಕಮೆಂಟ್‌ಗಳು ಪರೋಕ್ಷವಾಗಿ ಅನೇಕ ಅನಾರೋಗ್ಯಕರ ಬೆಳವಣಿಗೆಗಳಿಗೆ ನಾಂದಿ ಹಾಡುತ್ತವೆ. ಸಾಮಾಜಿಕ ಜಾಲತಾಣದಲ್ಲಿ ಇರುವ ವಿಡೀಯೋಕಾಲ್ ಸೌಲಭ್ಯವು ವಿದೇಶದಲ್ಲಿರುವ ಬಂಧುಗಳನ್ನು ಸಂಪರ್ಕಿಸಿ ಮುಖ ನೋಡಿಕೊಂಡು ಮಾತನಾಡಲು ಸಹಕಾರಿಯಾಗಿದೆ. ಆದರೆ ಈ ಸೌಲಭ್ಯವನ್ನು ಬ್ಲಾಕ್‌ಮೇಲ್ ಮಾಡಲು ಸಹ ಬಳಸುವ ಕಿರಾತಕರು ಇದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸಾವಿರಾರು ಜನರನ್ನು ಹತ್ತಾರು ದಿನಗಳಲ್ಲಿ ಸ್ನೇಹಿತರನ್ನಾಗಿ ಮಾಡಿಕೊಳ್ಳುವ ಅವಕಾಶವಿದೆ. ನನಗೆ ಇಂತಿಷ್ಟು ಸಾವಿರ ಗೆಳೆಯರಿದ್ದಾರೆ, ಫಾಲೋವರ್‌ಗಳಿದ್ದಾರೆ ಎಂದು ಬೀಗುವ ಮಂದಿಯನ್ನು ಸಹ ಕಾಣಬಹುದು. ಅದರಿಂದ ನಾನೊಬ್ಬ ಸೆಲೆಬ್ರಿಟಿ ಎಂಬ ಅಮಲು ಪ್ರತಿಷ್ಠೆ ತಲೆಗೆ ಹತ್ತುತ್ತದೆ. ಆದರೆ ಅವರು ಕೇವಲ ಟೈಂಪಾಸ್ ಗೆಳೆಯರು ಎಂದು ಕೆಲವು ಸನ್ನಿವೇಶಗಳು ತಿಳಿಸಿ ಬಿಡುತ್ತವೆ. ಸಾಮಾಜಿಕ ಜಾಲತಾಣದ ಸ್ನೇಹಿತರಿಗೋಸ್ಕರ ಮನೆಯವರನ್ನು, ಬಂಧುಗಳನ್ನು ದೂರ ಮಾಡಿಕೊಳ್ಳುವವರು ಇದ್ದಾರೆ. ಆದರೆ ಆಸ್ಪತ್ರೆಗೆ ಸೇರಿದಾಗ, ಅಕಾಲಿಕ ಮರಣಕ್ಕೆ ತುತ್ತಾದಾಗ ಈ ಫೇಕ್ ಸ್ನೇಹಿತರು ಸಹಾಯಕ್ಕೆ ಬರದೆ, ಅದೇ ಸಾಮಾಜಿಕ ಜಾಲತಾಣದಲ್ಲಿ ಸಹಾನುಭೂತಿಯ ಮಾತುಗಳಲ್ಲೇ ತಮ್ಮ ಕಾಳಜಿಯನ್ನು ಪ್ರಕಟಿಸುತ್ತಾರೆ. ಮನೆಯವರು ಹಾಗೂ ಬಂಧುಗಳು ಸಹಾಯಕ್ಕೆ ಬಂದು ನಿಂತಿರುತ್ತಾರೆ. ಆದ್ದರಿಂದ ಕೇವಲ ಒಣ ಪ್ರತಿಷ್ಠೆಗೆ ಒಳಗಾಗಿ ನಿಜವಾದ ಬಂಧುಗಳನ್ನು ಕಳೆದುಕೊಳ್ಳುವುದು ಬೇಡ.

ಸಾಮಾಜಿಕ ಜಾಲತಾಣವು ಮೋಸದ ಆಟವಾಡುವ ಒಂದು ಮೋಹಕ ತಾಣವಾಗಿಯೂ ಮಾರ್ಪಟ್ಟಿದೆ. ಇದರ ತಿಳುವಳಿಕೆ ಇಲ್ಲದವರು ಇದರಿಂದ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಫೇಕ್ ಅಕೌಂಟ್ ಸೃಷ್ಟಿಸಿ, ಸ್ನೇಹಿತರನ್ನು ಹಣ ಕಳುಹಿಸಿಕೊಡುವಂತೆ ಕೋರಿಕೆ ಸಂದೇಶ ಕಳುಹಿಸುವುದು, ಹುಡುಗರೇ ಸ್ಪುರದ್ರೂಪಿ ಹುಡುಗಿಯರ ಫೋಟೋಗಳನ್ನು ತಮ್ಮ ಪ್ರೊಫೈಲ್ ಫೋಟೋವಾಗಿ ಹಾಕಿ ಫ್ರೆಂಡ್‌ರಿಕ್ವೆಸ್ಟ್ ಕಳುಹಿಸಿ ಸ್ನೇಹ ಬೆಳಸಿ, ಕಷ್ಟವಿದೆ ಹಣ ಸಹಾಯ ಮಾಡಿ ಎಂದು ಕೇಳುವುದು. ಹಣ ವರ್ಗಾವಣೆಯಾದ ನಂತರ ಅನ್‌ಫ್ರೆಂಡ್ ಮಾಡಿ ಜಾಲತಾಣದಿಂದಲೇ ಮರೆಯಾಗುವುದು ಹೀಗೆ..... ಅನೇಕ ಮೋಸದಾಟಕ್ಕೆ ಸುಲಭ ವೇದಿಕೆಯಾಗಿದೆ ಈ ಸಾಮಾಜಿಕ ಜಾಲತಾಣ.

ಇಂದಿನ ಯುವ ಪೀಳಿಗೆಗೆ ಸಾಮಾಜಿಕ ಜಾಲತಾಣಗಳು ವರವಾಗುವ ಬದಲು ಶಾಪವಾಗಿ ಪರಿಣಮಿಸಿದೆ. ಶಾಲಾ ಕಾಲೇಜಿನ ತರಗತಿ, ಪಠ್ಯ ಅಧ್ಯಯನಕ್ಕಿಂತ ಹೆಚ್ಚು ಸಮಯ ಹುಚ್ಚರ ರೀತಿ ಸಾಮಾಜಿಕ ಜಾಲತಾಣದಲ್ಲಿಯೇ ವಿಹರಿಸುತ್ತಾರೆ. ಇದರಿಂದ ಅವರ ವಿದ್ಯಾಭ್ಯಾಸಕ್ಕೆ ದೊಡ್ಡ ತೊಡಕಂತೂ ಆಗುತ್ತಿದೆ. ಅನೇಕರ ಭವಿಷ್ಯ ಬೀದಿಗೆ ಬಂದಿದೆ. ಯವಕರು ಮನೆಯೊಳಗೆ ಇದ್ದರೂ ಅನೇಕ ತಾಣಗಳಲ್ಲಿ ಬಿಡುವಿಲ್ಲದೆ ತಿರುಗಾಡುತ್ತಿರುತ್ತಾರೆ. ವಿದ್ಯಾರ್ಥಿಗಳು ಇಂದು ಸಾಮಾಜಿಕ ಜಾಲತಾಣಗಳ ಮುಖಾಂತರ ಐಪಿಎಲ್ ಬೆಟ್ಟಿಂಗ್ ದಂಧೆಯಲ್ಲಿ ಭಾಗಿಯಾಗುವುದು, ಆನ್‌ಲೈನ್ ಜೂಜಾಟಗಳಲ್ಲಿ ಭಾಗಿಯಾಗಿ ತಮ್ಮ ಹೆತ್ತವರ ಸಾವಿರಾರು–ಲಕ್ಷಾಂತರ ರೂಪಾಯಿಗಳನ್ನು ಕೆಲವೇ ದಿನಗಳಲ್ಲಿ ಕಳೆದುಕೊಳ್ಳುವುದನ್ನು ಕಂಡಿರಬಹುದು. ಅನೇಕ ಯುವಕರು ಈ ಗೀಳಿನಿಂದ ಹೊರ ಬರಲಾಗದೆ, ಹಣ ಹಾಗೂ ಹೆಸರು ಎರಡನ್ನು ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡು ಅಕಾಲಿಕ ಮರಣಕ್ಕೆ ಈಡಾಗಿ ಮನೆಯವರಿಗೆ ಅವರು ಮಾಡದ ತಪ್ಪಿಗೆ ಶಿಕ್ಷೆ ನೀಡುತ್ತಿರುವುದನ್ನು ಕಾಣಬಹುದು.



> “ ಸಾಮಾಜಿಕ ಜಾಲತಾಣಗಳು ಜನರ ಅಭಿರುಚಿಯ ಮಟ್ಟವನ್ನೇ ಮಟ್ಟ ಹಾಕಿಬಿಟ್ಟಿವೆ ಎಂದರೆ ಅತಿಶಯೋಕ್ತಿಯಲ್ಲ. ನಗೆ ಕಾರ್ಯಕ್ರಮದ ಹೆಸರಿನಲ್ಲಿ ಜಾಲತಾಣಗಳಲ್ಲಿ ಪ್ರಸಾರವಾಗುವ ಅನೇಕ ವಿಡೀಯೋ ತುಣುಕುಗಳು ಡಬಲ್ ಮೀನಿಂಗ್‌ಗಳಿಂದ ಕೂಡಿರುತ್ತವೆ. ಕೆಲವು ಅಶ್ಲೀಲ ವಿಡೀಯೋಗಳು ಸಹ ಎಗ್ಗಿಲ್ಲದೆ ಪ್ರಸಾರವಾಗುತ್ತಿವೆ. ಅನೇಕ ಸ್ಥಿರಚಿತ್ರಗಳು ಸಹ ಮನೋವಿಕರತೆಯಿಂದ ಕೂಡಿರುತ್ತವೆ. ಚಲನಚಿತ್ರಗಳಿಗಾದರೆ ಸೆನ್ಸಾರ್ ಮಂಡಳಿಯೊಂದು ಇರುತ್ತದೆ. ಅನಾರೋಗ್ಯಕರ ದೃಶ್ಯಗಳು ಸಾರ್ವಜನಿಕವಾಗಿ ಪ್ರಸಾರವಾಗಲು ಅವುಗಳನ್ನು ತೆಗೆದು ಹಾಕಲಾಗುತ್ತದೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಇವುಗಳಿಗೆ ಇತಿಮಿತಿ ಎಂಬುದಿಲ್ಲ. ಅನೇಕರು ಮುಜುಗರ ಪಡುವಂತಹ ದೃಶ್ಯಗಳು ಹಾಗೂ ಕಾರ್ಯಕ್ರಮಗಳು ಯಾವುದೇ ಫಿಲ್ಟರ್/ಸೆನ್ಸಾರ್ ಇಲ್ಲದೆ ಮೂಡಿ ಬರುತ್ತವೆ. ಅನೇಕ ಯುವಕ-ಯುವತಿಯರು ನಾಚಿಕೆಯಿಲ್ಲದೆ ರೀಲ್ಸ್‌ಗಳಲ್ಲಿ ಅಸಂಬದ್ಧ ಪದಗಳು, ಅರೆಬರೆ ಬಟ್ಟೆ ಧರಿಸಿದ ದೃಶ್ಯಗಳು ಪ್ರಸಾರವಾಗುತ್ತಿವೆ. ಚಿಕ್ಕವಯಸ್ಸಿನ ಮಕ್ಕಳನ್ನು ಬಳಸಿಕೊಂಡು ಅವರ ಬಾಯಲ್ಲಿ ವಯಸ್ಸಿಗೂ ಮೀರಿದ ಮಾತುಗಳನ್ನು ಆಡಿಸಿ ಒಂದು ಪೀಳಿಗೆಯನ್ನೇ ಹಾಳು ಮಾಡುತ್ತಿರುವ ಹೊಣೆಗೇಡಿ ಪ್ರಜೆಗಳು ನಮ್ಮ ದೇಶದಲ್ಲಿರುವುದು ನಾಚಿಕೆಗೇಡಿನ ಸಂಗತಿ.

ಯುವತಿಯರಿಗಂತೂ ಇದು ಒಂದು ಆಕರ್ಷಣೀಯ ವೇದಿಕೆಯಾಗಿ ಪರಿಣಮಿಸಿದೆ. ಟಿಕ್‌ಟಾಕ್, ರೀಲ್ಸ್ ಮಾಡಿ ಅವುಗಳನ್ನು ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿ ಲೈಕ್ ಹಾಗೂ ಕಮೆಂಟ್‌ಗಳಿಗೆ ಕಾಯುವುದು ವಾಡಿಕೆಯಾಗಿದೆ. ಅದಕ್ಕಾಗಿ ತಮ್ಮ ಸಮಯ ಹಾಗೂ ಹಣ ಎರಡನ್ನೂ ವ್ಯಯಿಸುತ್ತಾರೆ. ಇದರಿಂದ ಆಗುವ ಅನೇಕ ಪರೋಕ್ಷ ಅನಾಹುತಗಳಿಗೆ ಈಡಾಗುತ್ತಿದ್ದಾರೆ. ಯುವಕರು ಸ್ವಲ್ಪದುರ್ಬಲ ಮನಸ್ಸಿನ ಯುವತಿಯರನ್ನು ಸಾಮಾಜಿಕ ಜಾಲತಾಣದ ಮೂಲಕ ಪರಿಚಯಿಸಿಕೊಂಡು ಅವರನ್ನು ತಮ್ಮ ಸೂತ್ರದಗೊಂಬೆಯಂತೆ ಆಡಿಸಿ, ಅವರಿಂದ ಹಣ, ಒಡವೆಗಳನ್ನು ಕಬಳಿಸಿ ಕೈಕೊಡುವ ಪ್ರಕರಣಗಳು ವರದಿಯಾಗುತ್ತಿರುವುದನ್ನು ಕಾಣಬಹುದು.

ಸಾಮಾಜಿಕ ಜಾಲತಾಣವು ಅನೇಕ ದುರ್ಜನರ ಮುಖವಾಡಗಳನ್ನು ಕಳಚಿದ ಉದಾಹರಣೆಗಳಿವೆ. ಅನೇಕ ಮಂತ್ರಿ ಮಹೋದಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಈ ಜಾಲತಾಣಗಳೇ ಕಾರಣವಾಗಿವೆ. ಇದು ಒಂದು ಬಗೆಯಲ್ಲಿ ಸರಿ ಎಂದು ಕಂಡು ಬಂದರೂ, ಆ ಮಹಾನುಭಾವರು ಆಡಿರುವ ಕಾಮಕೇಳಿಯ ದೃಶ್ಯಾವಳಿಗಳನ್ನು ಟಿ.ವಿ. ಹಾಗೂ ಮೊಬೈಲ್‌ಗಳಲ್ಲಿ ನೋಡಿದ ಜನರ ಮಾನಸಿಕ ಸ್ವಾಸ್ಥ್ಯವು ಹಾಳಾಗಿರುವುದರಲ್ಲಿ ಸಂಶಯವಿಲ್ಲ. ಮನೆಯಲ್ಲಿ ಮಕ್ಕಳೂ ಸೇರಿದಂತೆ ಇಂತಹ ದೃಶ್ಯಾವಳಿಗಳನ್ನು ವೀಕ್ಷಿಸುವ ಮೂಲಕ ತಮ್ಮ ಮುಗ್ಧ ಮನಸುಗಳನ್ನು ಹಾಳು ಮಾಡಿಕೊಳ್ಳುತ್ತಿರುವುದು ಸಾಮಾಜಿಕವಾಗಿ ಉತ್ತಮ ಬೆಳವಣಿಗೆಯಲ್ಲ.

ಸಾಮಾಜಿಕ ಜಾಲತಾಣಗಳು ಜನರ ಅಭಿರುಚಿಯ ಮಟ್ಟವನ್ನೇ ಮಟ್ಟ ಹಾಕಿಬಿಟ್ಟಿವೆ ಎಂದರೆ ಅತಿಶಯೋಕ್ತಿಯಲ್ಲ. ನಗೆ ಕಾರ್ಯಕ್ರಮದ ಹೆಸರಿನಲ್ಲಿ ಜಾಲತಾಣಗಳಲ್ಲಿ ಪ್ರಸಾರವಾಗುವ ಅನೇಕ ವಿಡೀಯೋ ತುಣುಕುಗಳು ಡಬಲ್ ಮೀನಿಂಗ್‌ಗಳಿಂದ ಕೂಡಿರುತ್ತವೆ. ಕೆಲವು ಅಶ್ಲೀಲ ವಿಡೀಯೋಗಳು ಸಹ ಎಗ್ಗಿಲ್ಲದೆ ಪ್ರಸಾರವಾಗುತ್ತಿವೆ. ಅನೇಕ ಸ್ಥಿರಚಿತ್ರಗಳು ಸಹ ಮನೋವಿಕರತೆಯಿಂದ ಕೂಡಿರುತ್ತವೆ. ಚಲನಚಿತ್ರಗಳಿಗಾದರೆ ಸೆನ್ಸಾರ್ ಮಂಡಳಿಯೊಂದು ಇರುತ್ತದೆ. ಅನಾರೋಗ್ಯಕರ ದೃಶ್ಯಗಳು ಸಾರ್ವಜನಿಕವಾಗಿ ಪ್ರಸಾರವಾಗಲು ಅವುಗಳನ್ನು ತೆಗೆದು ಹಾಕಲಾಗುತ್ತದೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಇವುಗಳಿಗೆ ಇತಿಮಿತಿ ಎಂಬುದಿಲ್ಲ. ಅನೇಕರು ಮುಜುಗರ ಪಡುವಂತಹ ದೃಶ್ಯಗಳು ಹಾಗು ಕಾರ್ಯಕ್ರಮಗಳು ಯಾವುದೇ ಫಿಲ್ಟರ್/ಸೆನ್ಸಾರ್ ಇಲ್ಲದೆ ಮೂಡಿ ಬರುತ್ತವೆ. ಅನೇಕ ಯುವಕ–ಯುವತಿಯರು ನಾಚಿಕೆಯಿಲ್ಲದೆ ರೀಲ್ಸ್‌ಗಳಲ್ಲಿ ಅಸಂಬದ್ಧ ಪದಗಗಳನ್ನು ಬಳಸುವುದಲ್ಲದೆ ಅರೆಬರೆ ಬಟ್ಟೆ ಧರಿಸಿದ ದೃಶ್ಯಗಳು ಪ್ರಸಾರವಾಗುತ್ತಿವೆ. ಚಿಕ್ಕವಯಸ್ಸಿನ ಮಕ್ಕಳನ್ನು ಬಳಸಿಕೊಂಡು ಅವರ ಬಾಯಲ್ಲಿ ವಯಸ್ಸಿಗೂ ಮೀರಿದ ಮಾತುಗಳನ್ನು ಆಡಿಸಿ ಒಂದು ಪೀಳಿಗೆಯನ್ನೇ ಹಾಳು ಮಾಡುತ್ತಿರುವ ಹೊಣೆಗೇಡಿ ಪ್ರಜೆಗಳು ನಮ್ಮ ದೇಶದಲ್ಲಿರುವುದು ನಾಚಿಕೆಗೇಡಿನ ಸಂಗತಿ.

'ಅತಿಯಾದರೆ ಅಮೃತವೂ ವಿಷ' ಎಂಬ ಮಾತು ಸಾಮಾಜಿಕ ಜಾಲತಾಣದ ವಿಷಯದಲ್ಲಿ ಸತ್ಯ ಎನಿಸುತ್ತದೆ. ಯಾವುದನ್ನು ಎಷ್ಟು ಬಳಸಬೇಕೋ ಅಷ್ಟು ಬಳಸುವುದು ಆರೋಗ್ಯಕ್ಕೆ ಒಳ್ಳೆಯದು. 'ಹರ್ಷದ ಕೂಳಿಗೆ ವರ್ಷದ ಕೂಳು ಹಾಳು ಮಾಡಿಕೊಂಡರು' ಎನ್ನುವಂತೆ ಕ್ಷಣಿಕ ಖುಷಿಯ ಮಾಯಾ ಜಾಲಕ್ಕೆ ಸಿಲುಕಿ ಅನೇಕರು ತಮ್ಮ ಸುಂದರ ಬದುಕನ್ನು ತಮ್ಮ ಕೈಯಾರೆ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸ್ಟೇಟಸ್ ಹಾಕುವ ಹುಚ್ಚಿಗೆ ಬಿದ್ದು ಇರುವ ಸ್ಟೇಟಸ್ ಹಾಳು ಮಾಡಿಕೊಳ್ಳುವ ಅಗತ್ಯವಿಲ್ಲ.

ಸಾಮಾಜಿಕ ಜಾಲತಾಣ ಅನೇಕರಿಗೆ ಶಾಪವಾದರೆ ಕೆಲವರಿಗೆ ವರವಾಗಿರುವುದು ಉಂಟು. ಅನೇಕರು ಯುಟ್ಯೂಬ್ ಹಾಗೂ ಇನ್ನಿತರ ತಾಣಗಳಲ್ಲಿ ಉಪಯುಕ್ತ ಮಾಹಿತಿಗಳನ್ನು ಹಂಚಿಕೊಂಡು ಖ್ಯಾತಿ ಗಳಿಸುವುದರ ಜೊತೆಗೆ ಉತ್ತಮ ಮಾರ್ಗದಲ್ಲಿ ಹಣವನ್ನೂ ಸಹ ಗಳಿಸಿ ತಮ್ಮ ಬದುಕನ್ನು ಹಸನು ಮಾಡಿಕೊಂಡಿದ್ದಾರೆ. ಸಾಧಕರ ವಿಡಿಯೋಗಳು ಅನೇಕರ ಉಜ್ವಲ ಭವಿಷ್ಯಕ್ಕೆ ಮೆಟ್ಟಿಲುಗಳಾಗಿವೆ. ಈ ಜಾಲತಾಣದಿಂದ ಹಳ್ಳಿಯ ಮೂಲೆಯಲ್ಲಿ ಎಲ್ಲೋ ಇದ್ದ ಪ್ರತಿಭೆಗಳು ಮುಖ್ಯವಾಹಿನಿಗೆ ಬಂದುತಮ್ಮ ಪ್ರತಿಭೆಗೆತಕ್ಕ ಪ್ರತಿಫಲ ಪಡೆದುಕೊಂಡಿದ್ದಾರೆ. ಅನೇಕ ಡೋಂಗಿ ಜನರ ಮುಖವಾಡಗಳನ್ನು ಸಾಕ್ಷಿ ಸಮೇತ ಕಳಚಿ ಜನರಿಗೆ ಸತ್ಯ ತಿಳಿಸುವ ಸತ್ಕಾರ್ಯವೂ ಸಹ ಆಗುತ್ತಿದೆ.

ಮನುಷ್ಯ ತನ್ನ ಸುತ್ತಮುತ್ತ ಇರುವ ಜನರೊಂದಿಗೆ ಸಾಮಾಜಿಕವಾಗಿ ಆರೋಗ್ಯಕರ ಸಂಬಂಧ ಹೊಂದುವುದು ಒಳಿತು. ತಮಗೆ ಗೊತ್ತಿಲ್ಲದ ಜನರ ಜೊತೆ ಸಖ್ಯ ಬೆಳಸುವುದು ಅನೇಕ ದೃಷ್ಟಿಕೋನದಿಂದ ಒಳಿತಲ್ಲ. ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುವಾಗ ಹುಷಾರಾಗಿರಬೇಕು. ಸಾಮಾಜಿಕ ಜಾಲತಾಣ ಒಂದು ಹವ್ಯಾಸವಾಗಿ ಇರಬೇಕೆ ಹೊರತು ಅದೊಂದು ಹುಚ್ಚು ಗೀಳಾಗಬಾರದು. ಇಂದಿನ ಪೀಳಿಗೆ ಮಕ್ಕಳ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯದ್ದೂ ಆಗಿರುತ್ತದೆ. ಎಲ್ಲದಕ್ಕೂ ಅಂತ್ಯವಿರುವಂತೆ ಈ ಜಾಲತಾಣಗಳಿಗೂ ಒಂದು ಅಂತ್ಯವಿರುತ್ತದೆ. ಏನಂತೀರಿ?

ಪದತಾಂಬೂಲ : ಜಾಲತಾಣದಲ್ಲಿನ ಬಂಧು ಕಷ್ಟ ಬರುವವರಗೆ,
ಇರುವ ತಾಣದ ಬಂಧು ಕಷ್ಟ ಮುಗಿವವರಗೆ


ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ನೀಡಲಿರುವ ಅವಕಾಶ ಕುರಿತು ಚರ್ಚಿಸಲು

ನಾಳೆ 'ವಿಜ್ಞಾನ–ತಂತ್ರಜ್ಞಾನ; ಕನ್ನಡೋತ್ಸವ'

ಮೈಸೂರು,ಏ.9(ಪಿಎಂ)– ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ನೀಡಲಿರುವ ಅವಕಾಶಗಳ ಬಗ್ಗೆ ಚಿಂತನ–ಮಂಥನ ನಡೆಸಲು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಜಿಲ್ಲಾ ಕಸಾಪ) ಮತ್ತು ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ (ಎಂಐಟಿ) ಜಂಟಿ ಆಶ್ರಯದಲ್ಲಿ ಏ.11ರಂದು 'ವಿಜ್ಞಾನ–ತಂತ್ರಜ್ಞಾನ; ಕನ್ನಡೋತ್ಸವ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕರೆ ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಸರೆಯ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 3.30ರವರೆಗೆ ಈ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 9.30ಕ್ಕೆ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಕಾರ್ಯಕ್ರಮ ಉದ್ಘಾಟಿಸಿ, 'ತಂತ್ರಜ್ಞಾನದಲ್ಲಿ ಕೃತಕ ಬುದ್ಧಿಮತ್ತೆ' ಕುರಿತು ವಿಚಾರ ಮಂಡಿಸಲಿದ್ದಾರೆ.

ಜಿಲ್ಲಾ ಕಸಾಪ ವತಿಯಿಂದ ಆಯೋಜನೆ



'ಕನ್ನಡದಲ್ಲಿ ಅರಿವು–ಅಭಿಮಾನ' ಕುರಿತು ಕವಯತ್ರಿ ಡಾ. ಲತಾ ರಾಜಶೇಖರ್, 'ಮಾಧ್ಯಮ ಮತ್ತು ತಂತ್ರಜ್ಞಾನ' ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಲಿದ್ದಾರೆ ಎಂದರು.

ಮಧ್ಯಾಹ್ನ 12.15ರಿಂದ 12.45ರವರೆಗೆ 'ಆಹಾರ ಮತ್ತು ತಂತ್ರಜ್ಞಾನ' ಕುರಿತು ವಿಜ್ಞಾನ ಲೇಖಕ ಡಾ.ಪ್ರಸನ್ನ ಸಂತೆಕಡೂರು ವಿಚಾರ ಮಂಡಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಸಮಾರೋಪ ಭಾಷಣ ಮಾಡುವರಲ್ಲದೆ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಮುರಳಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಇನ್ನು ಹಲವು ಚಿಂತಕರು, ಸಾಹಿತಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ಉತ್ತೇಜಿಸುವ ಬಗ್ಗೆ ಉಪಯುಕ್ತ ಮಾಹಿತಿ ನೀಡಲಿದ್ದಾರೆ. ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ನೀಡಲು ಇರುವ ಅಡೆತಡೆ ನಿವಾರಿಸಲು ಪರಿಹಾರೋಪಾಯ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡದ ಬಗ್ಗೆ ತಿಳುವಳಿಕೆ ಮೂಡಿಸುವ ನಿಟ್ಟಿನಲ್ಲಿಯೂ ಈ ಕಾರ್ಯಕ್ರಮ ಪರಿಣಾಮಕಾರಿಯಾಗಲಿದೆ. ತಾಂತ್ರಿಕ ವಿಷಯಕ್ಕೆ ಸಂಬಂಧ ಕನ್ನಡದಲ್ಲಿಯೇ ಪಠ್ಯಪುಸ್ತಕ, ಬೋಧಕರಿದ್ದರೂ ವಿದ್ಯಾರ್ಥಿಗಳ ಕೊರತೆ ಏಕಿದೆ ಎಂಬಿತ್ಯಾದಿ ವಿಷಯಗಳ ಕುರಿತು ತಜ್ಞರು ಬೆಳಕು ಚೆಲ್ಲಲಿದ್ದಾರೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿ, ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಏನೆಲ್ಲ ಬೆಳವಣಿಗೆ ಆಗಿದೆ ಎಂಬ ಬಗ್ಗೆ ಈ ಕಾರ್ಯಕ್ರಮದಲ್ಲಿ ಬೆಳಕು ಚೆಲ್ಲಲಾಗುವುದು. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡದ ಬಗ್ಗೆ ಅರಿವು, ಅಭಿಮಾನ ಮೂಡಿಸುವುದು, ಕನ್ನಡದಲ್ಲಿನ ತಾಂತ್ರಿಕ ಪಠ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಜಾಕೀರ್ ಹುಸೇನ್ ಮಾತನಾಡಿ, ರಾಜ್ಯದಲ್ಲಿ ಐದು ತಾಂತ್ರಿಕ ಕಾಲೇಜುಗಳಲ್ಲಿ ಕನ್ನಡದಲ್ಲಿ ಶಿಕ್ಷಣ ನೀಡಲು ಸರ್ಕಾರ ಅವಕಾಶ ಕಲ್ಪಿಸಿದೆ. ಅದಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪಠ್ಯಪುಸ್ತಕಗಳೂ ಇವೆ. ಕನ್ನಡದಲ್ಲಿ ಬೋಧನೆ, ಪಠ್ಯ ಇರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಕಲಿಕೆ ಗುಣಮಟ್ಟ ಹೆಚ್ಚಾಗಲಿದೆ. ಆದರೆ ಕನ್ನಡದಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಹಾಗಾಗಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು. ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿಗಳಾದ ಪವನ್ ಸಿದ್ದರಾಜು, ರದಿವುಲ್ಲಾ ಖಾನ್, ಪ್ರಶಾಂತ್ ಆರ್ಯ ಮತ್ತಿತರರು ಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ತಾಜ್ ಮಹಲ್‌ಗಿಂತ ಕಾಶಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚು

ಉಡುಪಿಯ ಪಲಿಮಾರು ಮಠದ ವಿದ್ಯಾಧೀಶತೀರ್ಥ ಸ್ವಾಮೀಜಿ



ಮೈಸೂರು, ಏ.9– ತಾಜ್‌ಮಹಲ್ ಬದಲಿಗೆ ಕಾಶಿಯನ್ನು ನೋಡುವುದಕ್ಕೆ ಬರುವವರ ಸಂಖ್ಯೆ ಜಾಸ್ತಿಯಾಗಿದೆ ಎಂದು ಉಡುಪಿಯ ಪಲಿಮಾರು ಮಠದ ವಿದ್ಯಾಧೀಶತೀರ್ಥ ಸ್ವಾಮೀಜಿ ಹೇಳಿದರು.

ಸರಸ್ವತಿಪುರಂ ಶ್ರೀಕೃಷ್ಣಧಾಮದಲ್ಲಿ ಶ್ರೀಕೃಷ್ಣ ಮಿತ್ರ ಮಂಡಳಿ, ಶ್ರೀಕೃಷ್ಣ ಟ್ರಸ್ಟ್ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಶ್ರೀಕೃಷ್ಣ ಮಿತ್ರ ಮಂಡಳಿಯ 47ನೇ ವಾರ್ಷಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ದೇಶಕ್ಕೆ ಉತ್ತಮ ನಾಯಕ ಸಿಕ್ಕಿದ್ದು, ನಮ್ಮ ದೇಶವು ವಿಶ್ವಗುರು ಆಗುವ ಕಾಲ ಸಮೀಪದಲ್ಲಿದೆ. ಹಿಂದೊಂದು ಕಾಲವಿತ್ತು. ಮಸೀದಿ ಮತ್ತು ಕಸಾಯಿಖಾನೆಗಳೂ ಬಹಳಷ್ಟಿದ್ದವು. ಈಗ ನಮ್ಮ ಹಿಂದೂ ದೇವಸ್ಥಾನಗಳ ಕಾಲಘಟ್ಟದಲ್ಲಿ ಇದ್ದೇವೆ. ಸಾಕಷ್ಟು ದೇವಾಲಯಗಳು ಜೀರ್ಣೋದ್ಧಾರಗೊಳ್ಳುತ್ತಿರುವ ಸಮಯವಿದು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಅಸಾಧ್ಯವಲ್ಲ ಎಂಬುದನ್ನು ಸಾಬೀತುಪಡಿಸುವ ಕೆಲಸ ನಡೆದಿದೆ. ಕಾಶಿ ಎಂದರೆ ಮೂಗು ಮುರಿಯುವ ಕಾಲವಿತ್ತು. ಈಗ ಅದು ಮಾದರಿಯಾಗಿದೆ. ತಾಜ್‌ಮಹಲ್ ಬದಲಿಗೆ ಕಾಶಿಯನ್ನು ನೋಡುವುದಕ್ಕೆ ಬರುವವರ ಸಂಖ್ಯೆ ಜಾಸ್ತಿಯಾಗಿದೆ ಎಂದರು.

> ಭಾರತದ ಸಂಸ್ಕೃತಿಯು ಯಾವುದನ್ನೂ ನಿರಾಕರಿಸಲಿಲ್ಲ ಹಾಗೂ ನಿಷೇಧಿಸಲಿಲ್ಲ. ಎಲ್ಲದಕ್ಕೂ ಅವಕಾಶ ಕೊಟ್ಟಿರುವ ಧರ್ಮವೆಂದರೆ ಅದು ಹಿಂದೂ ಧರ್ಮ ಮಾತ್ರ ಮಹಿಳೆಯರು ಅಭಿವ್ಯಕ್ತಿ ಮಾಡಲು ನಮ್ಮ ಧರ್ಮದಲ್ಲಿ ಅವಕಾಶವಿದೆ. ಧರ್ಮದ ಸಂರಕ್ಷಣೆ ಮಾಡಬೇಕಾದ ಸಂದರ್ಭದಲ್ಲಿ ಮಾತ್ರವೇ ಕತ್ತಿ ಹಿಡಿಯಬೇಕೇ ಹೊರತು ವೈಯಕ್ತಿಕ ದ್ವೇಷಕ್ಕಾಗಿ ಅಲ್ಲ ಎನ್ನುವುದನ್ನು ತಿಳಿಸಿಕೊಟ್ಟಿದೆ.
> -ರೋಹಿತ್ ಚಕ್ರತೀರ್ಥ, ಚಿಂತಕ

ಕೋವಿಡ್ ಬಂದಾಗ ಇಡೀ ಜಗತ್ತು ತಲ್ಲಣಿಸಿತು. ಆದರೆ, ಭಾರತವು ಸಮರ್ಪಕವಾಗಿ ನಿರ್ವಹಿಸಿತು. ದೇಶದ ಜನರೊಂದಿಗೆ ಇತರ ದೇಶದವರಿಗೂ ಲಸಿಕೆಯನ್ನು ನೀಡಿದ ದೇಶ ನಮ್ಮದು. ದೇವರು ನಿಜವಾದ ಮಿತ್ರ. ಉಪಕಾರ ಮಾಡುವವರ ಮನಸ್ಸಿನಲ್ಲಿ ದೇವರು ಇರುತ್ತಾನೆ ಎಂದರು.

ಈ ವೇಳೆ ಲೇಖಕ ರೋಹಿತ್ ಚಕ್ರತೀರ್ಥ ಮಾತನಾಡಿ, ಶಿಕ್ಷಣ, ಉದ್ಯೋಗ, ಆರ್ಥಿಕ ನೆರವು, ಸ್ಥೈರ್ಯ ನೀಡುವಂತಹ ಕೆಲಸವನ್ನು ಮಠ ಮಾನ್ಯಗಳು ಮಾಡುತ್ತಿವೆ. ಆದರೆ, ಈಚೆಗೆ ಮಠಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕೌನ್ಸೆಲಿಂಗ್ ಮಾಡುವವರು ಜಾಸ್ತಿಯಾಗುತ್ತಿದ್ದಾರೆ ಎಂದರು. ಹಿಂದೂ ಧರ್ಮ ಸನಾತನ ಧರ್ಮ. ಅದು ಧರ್ಮ ರಕ್ಷಕರು ಹಾಗೂ ಸಾಂಸ್ಕೃತಿಕ ನಾಯಕರ ಮೇಲೆ ನಿಂತಿದೆ. ಹಿಂದೂಗಳು ಒಟ್ಟಾಗಿ ಸೇರಲು ಸ್ವಾಮೀಜಿಗಳು ಕಾರಣವಾಗುತ್ತಿದ್ದಾರೆ. ಅಂತರ್ವಾಹಿನಿಯಂತೆ ಸಮಾಜಕ್ಕೆ ದಿಕ್ಕು ತೋರಿಸುತ್ತಿರುವುದು ಮಠ–ಮಾನ್ಯಗಳು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಾಸವಾಣಿ ಗಾಯಕ ರಾಮಚಂದ್ರಾಚಾರ್, ರಾಷ್ಟ್ರಪ್ರಶಸ್ತಿ ಪುರಸ್ಕೃತ ಹೆಚ್.ಶ್ರೀಧರ್ ಹಂಡೆ ಅವರನ್ನು ಸನ್ಮಾನಿಸಲಾಯಿತು. ಮಂಡಳಿಯ ಅಧ್ಯಕ್ಷ ಸುಬ್ರಮಣ್ಯ ಆರ್.ತಂತ್ರಿ, ಕಾರ್ಯದರ್ಶಿ ಶ್ರೀವತ್ಸ ರಾವ್ ಉಪಸ್ಥಿತರಿದ್ದರು.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ: ಸವಾರ ಸ್ಥಳದಲ್ಲೇ ಸಾವು

ಹುಣಸೂರು, ಏ.9– ಟಾಟಾ ಏಸ್ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಕೆ.ಆರ್.ನಗರ ರಸ್ತೆಯ ಕಟ್ಟೆಮಳವಾಡಿ ಕ್ರಾಸ್ ಬಳಿ ಭಾನುವಾರ ನಡೆದಿದೆ. ತಾಲೂಕಿನ ಹುಣಸೇಗಾಲ ಗ್ರಾಮದ ನಿವಾಸಿ ಪುಟ್ಟೇಗೌಡರ ಪುತ್ರ ಮಂಜು(32) ಮೃತ ದುರ್ದೈವಿ.

ವಿವರ: ಮಂಜು ಕುಟುಂಬದೊಂದಿಗೆ ಕಟ್ಟೆಮಳವಾಡಿ ಕಡೆ ಹೋಗುತ್ತಿದ್ದ ವೇಳೆ ಕೆ.ಆರ್.ನಗರ ಕಡೆಯಿಂದ ಬರುತ್ತಿದ್ದ ಟಾಟಾ ಏಸ್ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ ಪರಿಣಾಮ ಮಂಜು ತಲೆ, ಕೈ ಕಾಲುಗಳಿಗೆ ಗಂಭೀರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್‌ನಲ್ಲಿದ್ದ ಪತ್ನಿ ತುಳಸಿ ಹಾಗೂ ಮಕ್ಕಳಿಗೂ ಸಣ್ಣ ಪುಟ್ಟಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇಷ್ಟೆ ಅಲ್ಲದೆ ರಸ್ತೆಯಲ್ಲಿ ಬರುತ್ತಿದ್ದ ಮತ್ತೊಂದು ಬೈಕಿಗೂ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದಿದ್ದು. ಬೈಕ್ ಸವಾರ ಹಿರಿಕ್ಯಾತನಹಳ್ಳಿಯ ಸಚ್ಚಿನ್ ಎಂಬುವವರ ತಲೆಗೆ ಗಂಭೀರ ಗಾಯವಾಗಿದ್ದು ಅವರನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬಳಿಕ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದ ನಂತರ ಗೂಡ್ಸ್ ವಾಹನ ಚಾಲಕ ಪರಾರಿಯಾಗಲೆತ್ನಿಸಿದ್ದು ಸಾರ್ವಜನಿಕರು ಚಾಲಕನನ್ನು ಹಿಡಿದು ಗ್ರಾಮಾಂತರ ಠಾಣೆ ಪೊಲೀಸರಿಗೊಪ್ಪಿಸಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ

ಹೆಚ್ಡಿಕೆ ನೇತೃತ್ವದಲ್ಲಿ ಮಂಡ್ಯ ಜೆಡಿಎಸ್ ಟಿಕೆಟ್ ಆಕಾಂಕ್ಷಿತರ ಸಭೆ

2ನೇ ಪಟ್ಟಿಯಲ್ಲಿ ಅಭ್ಯರ್ಥಿ ಹೆಸರು ಬದಲಾವಣೆ ಸಾಧ್ಯತೆ?



ಮಂಡ್ಯ, ಏ.9– ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಗೊಂದಲ ಮುಂದುವರೆದಿದ್ದು, 2ನೇ ಪಟ್ಟಿಯಲ್ಲಿ ಮತ್ತೊಮ್ಮೆ ಅಭ್ಯರ್ಥಿ ಹೆಸರು ಘೋಷಣೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಈಗಾಗಲೇ ಮೊದಲ ಪಟ್ಟಿಯಲ್ಲಿ ಹಾಲಿ ಶಾಸಕ ಎಂ.ಶ್ರೀನಿವಾಸ್ ಹೆಸರು ಘೋಷಣೆಯಾಗಿದೆ. ಆದರೆ ಮತ್ತೊಮ್ಮೆ ಆಕಾಂಕ್ಷಿತರ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಬಿಡದಿ ಬಳಿಯ ತೋಟದ ಮನೆಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ನಾಲ್ವರು ಟಿಕೆಟ್ ಆಕಾಂಕ್ಷಿತರ ಸಭೆ ನಡೆಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪ್ರತ್ಯೇಕವಾಗಿ ಒಬ್ಬೊಬ್ಬರ ಸಂದರ್ಶನ ಮಾಡುವ ಮೂಲಕ ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಈಗಾಗಲೇ ಮಂಡ್ಯ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಶ್ರೀನಿವಾಸ್, ಆಕಾಂಕ್ಷಿತರಾದ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ಜಿಲ್ಲಾ ಮಾಧ್ಯಮ ವಕ್ತಾರ ಮಹಾಲಿಂಗೇಗೌಡ ಮುದ್ದನಘಟ್ಟ, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಹಾಗೂ ಜಿಪಂ ಮಾಜಿ ಸದಸ್ಯ ಎಚ್.ಎನ್.ಯೋಗೇಶ್ ಕುರಿತು ಸಮೀಕ್ಷೆ ನಡೆಸಲಾಗಿದ್ದು, ಇಂದು–ನಾಳೆ ವರದಿ ಕೈ ಸೇರಲಿದೆ. ಸಮೀಕ್ಷೆ ವರದಿ ಆಧಾರದ ಮೇಲೆ 2ನೇ ಪಟ್ಟಿಯಲ್ಲಿ ಅಭ್ಯರ್ಥಿ ಹೆಸರು ಮತ್ತೊಮ್ಮೆ ಘೋಷಣೆಯಾಗಲಿದೆ.

ಜೆಡಿಎಸ್ ಮೊದಲ ಪಟ್ಟಿಯಲ್ಲಿ ಹಾಲಿ ಶಾಸಕ ಎಂ.ಶ್ರೀನಿವಾಸ್‌ಗೆ ಟಿಕೆಟ್ ಘೋಷಿಸಿದ್ದರೂ, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಪ್ರತ್ಯೇಕವಾಗಿ ಕ್ಷೇತ್ರ ಸಂಚಾರ ಮಾಡುತ್ತಾ ಪ್ರಚಾರ ನಡೆಸುತ್ತಿದ್ದರು. ಇದು ಕಾರ್ಯಕರ್ತರು, ಮುಖಂಡರ ಗೊಂದಲಕ್ಕೆ ಕಾರಣವಾಗಿತ್ತು.

ಒಗ್ಗಟ್ಟು ಮಂತ್ರ ಪಠಿಸುವಂತೆ ಸೂಚನೆ: 2ನೇ ಪಟ್ಟಿಯಲ್ಲಿ ಮತ್ತೊಮ್ಮೆ ಅಭ್ಯರ್ಥಿ ಹೆಸರು ಘೋಷಣೆ ಮಾಡುವುದರಿಂದ ಎಲ್ಲರೂ ಒಗ್ಗಟ್ಟಿನಿಂದ ಇರಬೇಕು. ಎರಡನೇ ಪಟ್ಟಿಯಲ್ಲಿ ಯಾರಿಗೇ ಟಿಕೆಟ್ ಘೋಷಣೆ ಮಾಡಿದರೂ ಯಾವುದೇ ಭಿನ್ನಾಭಿಪ್ರಾಯ, ಬಣ ರಾಜಕೀಯ ಮಾಡದೆ ಒಗ್ಗಟ್ಟಿನಿಂದ ಅಭ್ಯರ್ಥಿ ಪರ ದುಡಿಯುವ ಮೂಲಕ ಚುನಾವಣೆ ಎದುರಿಸಬೇಕು ಎಂಬ ಸಂದೇಶವನ್ನು ನೀಡಲಾಗಿದೆ.

"ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ನಾನು ಸೇರಿದಂತೆ ಇತರೆ ಆಕಾಂಕ್ಷಿತರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದಾರೆ. ನನ್ನ ಅಭಿಪ್ರಾಯ ತಿಳಿಸಿದ್ದೇನೆ. ಅಲ್ಲದೆ, ಏ.17ರಂದು ನಾಮಪತ್ರ ಸಲ್ಲಿಸುವ ಬಗ್ಗೆಯೂ ತಿಳಿಸಿದ್ದೇನೆ.

-ಎಂ.ಶ್ರೀನಿವಾಸ್, ಶಾಸಕರು ಹಾಗೂ ಜೆಡಿಎಸ್ ಅಭ್ಯರ್ಥಿ.

"ಮಾಜಿ ಸಿಎಂ ಕುಮಾರಸ್ವಾಮಿ ಅವರು ಎಲ್ಲಾ ಆಕಾಂಕ್ಷಿತರನ್ನು ಕರೆದು ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದಾರೆ. ಅಲ್ಲದೆ, ಕ್ಷೇತ್ರದಲ್ಲಿ ಸಮೀಕ್ಷೆ ನಡೆಸಿದ್ದು, ಸಮೀಕ್ಷೆ ವರದಿಯಂತೆ 2ನೇ ಪಟ್ಟಿಯಲ್ಲಿ ಮತ್ತೊಮ್ಮೆ ಅಭ್ಯರ್ಥಿ ಹೆಸರು ಘೋಷಣೆ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ. ಯಾರ ಪರ ಸಮೀಕ್ಷೆ ಬರಲಿದೆ. ಅವರ ಹೆಸರು ಘೋಷಣೆಯಾಗಲಿದೆ.

-ಡಿ.ರಮೇಶ್, ಜಿಲ್ಲಾಧ್ಯಕ್ಷ, ಮಂಡ್ಯ.

ಏ.17ರಂದು ನಾಮಪತ್ರ ಸಲ್ಲಿಕೆಗೆ ಸಿದ್ಧತೆ: ಮಂಡ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಶಾಸಕ ಎಂ.ಶ್ರೀನಿವಾಸ್ ಹೆಸರು ಘೋಷಣೆ ಮಾಡಿರುವುದರಿಂದ ಏ.17ರಂದು ನಾಮಪತ್ರ ಸಲ್ಲಿಕೆಗೆ ಎಂ.ಶ್ರೀನಿವಾಸ್ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ. ಅಪಾರ ಸಂಖ್ಯೆಯಲ್ಲಿ ಜೆಡಿಎಸ್ ಕಾರ್ಯಕರ್ತರು, ಮುಖಂಡರೊಂದಿಗೆ ಮೆರವಣಿಗೆ ಮೂಲಕ ತೆರಳಿ ಉಮೇದುವಾರಿಕೆ ಸಲ್ಲಿಸಲು ತಯಾರಿ ನಡೆಸಿದ್ದಾರೆ. ಅಲ್ಲದೆ, ವರಿಷ್ಠರ ಸೂಚನೆಯಂತೆ ಕ್ಷೇತ್ರಾದ್ಯಂತ ಚುನಾವಣಾ ಪ್ರಚಾರ ಹಾಗೂ ಪಂಚರತ್ನ ಯೋಜನೆಗಳ ಜಾಗೃತಿ ಕಾರ್ಯಕ್ರಮ ನಡೆಸುತ್ತಿದ್ದಾರೆ.

ಬದಲಾಗಲಿದ್ದಾರಾ ಅಭ್ಯರ್ಥಿ?: ಜೆಡಿಎಸ್‌ನಲ್ಲಿ ಟಿಕೆಟ್ ಗೊಂದಲದಿಂದ ಉಂಟಾಗಿರುವ ಭಿನ್ನಮತ ಹಾಗೂ ಬಣ ರಾಜಕೀಯಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಕಸರತ್ತು ನಡೆಯುತ್ತಿದೆ. ಈ ನಡುವೆ ಸಮೀಕ್ಷೆ ವರದಿ ಆಧಾರದ ಮೇಲೆ ಎರಡನೇ ಪಟ್ಟಿಯಲ್ಲಿ ಹೆಸರು ಘೋಷಣೆ ಮಾಡಲು ಕುಮಾರಸ್ವಾಮಿ ಮುಂದಾಗಿದ್ದಾರೆ ಎನ್ನಲಾಗಿದೆ. ಅಲ್ಲದೆ, ಇತ್ತೀಚೆಗೆ ನಡೆಯುತ್ತಿರುವ ರಾಜಕೀಯ ಬೆಳವಣಿಗೆಯಿಂದ ಅಭ್ಯರ್ಥಿ ಬದಲಾಗಲಿದ್ದಾರಾ ಎಂಬ ಪ್ರಶ್ನೆಯೂ ಎದ್ದಿದ್ದು, ಎರಡನೇ ಪಟ್ಟಿ ಬಿಡುಗಡೆ ಬಳಿಕ ತಿಳಿಯಲಿದೆ.

ಕೆ.ಆರ್.ಪೇಟೆ ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ಭೇಟಿ, ಪರಿಶೀಲನೆ



ಕೆ.ಆರ್.ಪೇಟೆ, ಏ.9– ಪಟ್ಟಣದ ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ ಭೇಟಿ ನೀಡಿ ಚುನಾವಣಾ ಸಿದ್ಧತೆಗಳನ್ನು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, ನೀತಿ ಸಂಹಿತೆಯನ್ನು ಕಡ್ಡಾಯವಾಗಿ ಜಾರಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಪಾರದರ್ಶಕವಾಗಿ ಚುನಾವಣೆ ನಡೆಸಲು ಅಧಿಕಾರಿಗಳು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. 80 ವರ್ಷ ತುಂಬಿದವರಿಗೆ ಹಾಗೂ ವಿಕಲಚೇತನರಿಗೆ ಮನೆಯಿಂದಲೇ ಮತದಾನ ಮಾಡಲು ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ಚೆಕ್‌ಪೋಸ್ಟ್‌ಗಳಲ್ಲಿ ನಿಯಮ ಮೀರಿ ಸಾಗಿಸುವ ಹಣ ಮತ್ತು ವಸ್ತುಗಳನ್ನು ವಶಪಡಿಸಿಕೊಂಡು ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಬೇಕು. ವಿವಾಹ, ಬೀಗರ ಔತಣ, ದೇವರ ಪರ ಇತರೆ ಕಾರ್ಯಕ್ರಮಗಳಿಗೆ ಅನುಮತಿ ನೀಡುವ ಮುನ್ನ ಕಾರ್ಯಕ್ರಮ ರಾಜಕೀಯ ಪ್ರೇರಿತವೇ ಅಥವಾ ನಿಜವಾದ ಕಾರ್ಯಕ್ರಮವೇ ಎಂಬುದನ್ನು ಖಚಿತಪಡಿಸಿಕೊಂಡು ಅನುಮತಿ ನೀಡಬೇಕು. ರಾಜಕೀಯ ಮುಖಂಡರು, ಅಭ್ಯರ್ಥಿಗಳ ಬೆಂಬಲಿಗರು ಏರ್ಪಡಿಸುವ ಔತಣಕೂಟಗಳ ಬಗ್ಗೆ ನಿಗಾ ವಹಿಸಬೇಕು ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಜಿಲ್ಲಾಧಿಕಾರಿ ಗೋಪಾಲಕೃಷ್ಣ ಚುನಾವಣಾ ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಹಾಗೂ ಚುನಾವಣಾಧಿಕಾರಿಗಳಿಗೆ ಸಲಹೆ ನೀಡಿದರು.

ಈ ವೇಳೆ ತಹಸೀಲ್ದಾರ್ ನಿಸರ್ಗ ಪ್ರಿಯಾ, ಚುನಾವಣಾಧಿಕಾರಿ ಕೃಷ್ಣಕುಮಾರ್, ಚುನಾವಣಾ ಶಿರಸ್ತೇದಾರ್ ಹರೀಶ್, ತಾಪಂ ಇಓ ಸತೀಶ್, ಟೌನ್ ಪೊಲೀಸ್ ಇನ್ಸ್‌ಪೆಕ್ಟರ್ ಆನಂದಕುಮಾರ್, ಎಸ್‌ಐ ಸುನೀಲ್, ಗ್ರಾಮಾಂತರ ಇನ್ಸ್‌ಪೆಕ್ಟರ್ ಜಗದೀಶ್, ಎಸ್‌ಐ ಬಸವರಾಜು ಮತ್ತಿತರರಿದ್ದರು.

ಅಮೂಲ್‌ಗೆ ಅವಕಾಶ ನೀಡಿದರೆ ರೈತರ ಹಿತಾಸಕ್ತಿಗೆ ಧಕ್ಕೆ: ರಾಮಕೃಷ್ಣ



ಮದ್ದೂರು, ಏ.9– ರಾಜ್ಯದಲ್ಲಿ ಗುಜರಾತ್‌ನ ಅಮೂಲ್ ಹಾಲಿನ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ನೀಡಿದರೆ ರಾಜ್ಯದ ರೈತರ ಹಿತಾಸಕ್ತಿಗೆ ಧಕ್ಕೆಯಾಗಲಿದೆ. ಹೀಗಾಗಿ ಪ್ರಗತಿಪರ ಸಂಘಟನೆಗಳು, ರಾಜಕೀಯ ಮುಖಂಡರು ಪಕ್ಷಾತೀತವಾಗಿ ಹೋರಾಟ ರೂಪಿಸುವ ಮೂಲಕ ಮಾರಾಟಕ್ಕೆ ಅವಕಾಶ ಕಲ್ಪಿಸಬಾರದು ಎಂದು ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ ತಿಳಿಸಿದರು.

ಪಟ್ಟಣದ ಶಿವಪುರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರು, ನೌಕರರು ಇದನ್ನೇ ನಂಬಿ ಬದುಕು ಸಾಗಿಸುತ್ತಿರುವ ಲಕ್ಷಾಂತರ ಕುಟುಂಬಗಳಿಗೆ ಹೊಡೆತ ಬೀಳಲಿದ್ದು, ಅಮೂಲ್‌ನೊಂದಿಗೆ ವಿಲೀನ ಅಥವಾ ಬೇರೆ ಯಾವುದೇ ಒಪ್ಪಂದ ಮಾಡಿಕೊಳ್ಳಬಾರದೆಂದು ಸರ್ಕಾರಕ್ಕೆ ಮನವಿ ಮಾಡಿದರು.

ರಾಜ್ಯಾದ್ಯಂತ ಪ್ರತಿದಿನ 80 ಲಕ್ಷ ಹಾಲು ಪೂರೈಕೆಯಾಗುತ್ತಿದ್ದು ಮತ್ತು ನಂದಿನಿಗೆ ರಾಜ್ಯ ಸೇರಿದಂತೆ ಇತರೆ ದೇಶಗಳಲ್ಲೂ ಉತ್ತಮವಾದ ಬೇಡಿಕೆ ಮತ್ತು ಬ್ರಾಂಡ್ ಇದ್ದು ಇದರಿಂದಾಗಿ ನೌಕರರು, ರೈತರು ಉತ್ತಮ ಜೀವನ ನಡೆಸುತ್ತಿದ್ದು ಅಮೂಲ್ ಉತ್ಪನ್ನಗಳು ರಾಜ್ಯದ ಮಾರುಕಟ್ಟೆಗೆ ಬಂದರೆ ರೈತರ ಅಸ್ಮಿತೆಗೆ ಹೊಡೆತ ಬೀಳಲಿದೆ ಎಂದರು.

ಕೆಎಂಎಫ್ ರಾಜ್ಯದ ಹೆಮ್ಮೆಯ ಸಂಸ್ಥೆಯಾಗಿದ್ದು ಲಕ್ಷಾಂತರ ಕೃಷಿಕರು, ಕೂಲಿಕಾರರ ಬದುಕಿಗೆ ಬೆಳಕಾಗಿದ್ದು ಹಾಲನ್ನು ಖರೀದಿಸುವ ಮೂಲಕ ಹೈನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿರುವ ಜತೆಗೆ ಕೃಷಿಗೂ ಸಹಕಾರಿಯಾಗಿದ್ದು ಹಾಲಿನ ಉತ್ಪನ್ನಗಳು ಹೊರ ರಾಜ್ಯಗಳಲ್ಲೂ ಪ್ರಸಿದ್ಧಿ ಪಡೆದಿವೆ ಎಂದರು.

ಕೆಎಂಎಫ್‌ನಿಂದ ರಾಜ್ಯದ ಲಕ್ಷಾಂತರ ಕೃಷಿಕರು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಿದ್ದು ರೈತರ ಮಕ್ಕಳ ವಿದ್ಯಾಭ್ಯಾಸಕ್ಕೂ ಮತ್ತು ಪ್ರತಿ ತಿಂಗಳ ಜೀವನ ನಿರ್ವಹಣೆಗೂ ಹಾಲು ಉದ್ಯಮ ನೆರವಾಗುತ್ತಿದ್ದು ಮಹಿಳೆಯರಿಗೂ ಉದ್ಯೋಗ ಲಭಿಸಿ ಸ್ವಾವಲಂಬಿ ಬದುಕನ್ನು ಕಂಡುಕೊಳ್ಳಲು ನಂದಿನಿ ಬ್ರಾಂಡ್ ಕಾರಣವಾಗಿದ್ದು ಇದನ್ನರಿತು ಅಮೂಲ್ ಮಾರಾಟಕ್ಕೆ ಯಾವುದೇ ಅವಕಾಶಗಳನ್ನು ಕಲ್ಪಿಸದಂತೆ ಮತ್ತು ಇದರ ವಿರುದ್ಧ ಪ್ರತಿಯೊಬ್ಬರು ಜಾಗೃತರಾಗಿ ಹೋರಾಟ ನಡೆಸಬೇಕಾದ ಅನಿವಾರ್ಯತೆ ಉಂಟಾಗಿರುವುದಾಗಿ ಹೇಳಿದರು.

ಗೋಷ್ಠಿ ವೇಳೆ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ನಾಗೇಗೌಡ, ತಾಪಂ ಮಾಜಿ ಸದಸ್ಯ ಬೊಮ್ಮೇಗೌಡ, ನಾಗರಾಜು ಇದ್ದರು.

ಶ್ರೀರಂಗಪಟ್ಟಣ, ಗಂಜಾಂ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆ

ಮಾಜಿ ಶಾಸಕರ ವಿರುದ್ಧ ಹರಿಹಾಯ್ದ ಶಾಸಕ ರವೀಂದ್ರ ಶ್ರೀಕಂಠಯ್ಯ



ಶ್ರೀರಂಗಪಟ್ಟಣ, ಏ.9– ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ನ್ಯಾಯಾಲಯದ ಮೂಲಕ ತಡೆಯುವ ಪ್ರಯತ್ನ ಮಾಡಿರುವ ನೀವು, ಇದೀಗ ಜನರ ಬಳಿ ಮತ ಕೇಳಲು ನಿಮಗೆ ನಾಚಿಕೆಯಾಗುತ್ತಿಲ್ಲವೇ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡರ ವಿರುದ್ಧ ಹರಿಹಾಯ್ದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಶ್ರೀರಂಗಪಟ್ಟಣ–ಗಂಜಾಂ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮಲ್ಲಿರುವ ಕೆಟ್ಟ ಮನಸ್ಥಿತಿ ಬಿಟ್ಟು ಜನಸೇವೆಗೆ ಮುಂದಾಗಬೇಕು. ಇದೀಗ ಕ್ಷೇತ್ರದಲ್ಲಿ ಮತಯಾಚಿಸುತ್ತಿರುವ ನೀವು ಈ ಹಿಂದೆ ಎಲ್ಲೆಲ್ಲಿ ಅಭಿವೃದ್ಧಿ ಕಾರ್ಯ ತಡೆಯಲು ನ್ಯಾಯಾಲಯಕ್ಕೆ ಹೋಗಿದ್ದೀರಿ ಎಂಬುದನ್ನು ಮತದಾರರಿಗೆ ತಿಳಿಸಿ ಎಂದ ಅವರು, ಮತದಾರರ ಬಳಿ ಮತಯಾಚಿಸಲು ನಿಮಗೆ ಅರ್ಹತೆ ಏನಿದೆ ಎಂದು ಕಿಡಿಕಾರಿದರು.

ನಮ್ಮ ತಾಯಿಯವರು ಕಳೆದ 20 ವರ್ಷಗಳ ಹಿಂದೆ ಪಟ್ಟಣದ ರಂಗನಾಥನಗರದ ಲೆಪ್ರಸಿ ಕಾಲೋನಿ ನಿವಾಸಿಗಳಿಗೆ ಮನೆ ನಿರ್ಮಿಸಿಕೊಟ್ಟಿದ್ದು ಸರಿಯಷ್ಟೆ. ಆದರೆ ಅವರಿಗೆ ಹಕ್ಕು ಪತ್ರ ನೀಡಲು ಅವರ ಮಗನಾದ ನಾನೇ ಶಾಸಕನಾಗಿ ಬರಬೇಕಾಯಿತು. ಕ್ಷೇತ್ರದ ಜನತೆ ನಿಮ್ಮ ಕುಟುಂಬಕ್ಕೆ ಮೂರ್‍ನಾಕು ಬಾರಿ ಅಧಿಕಾರ ಕೊಟ್ಟರೂ ನಿಮಗೆ ಇದರ ಅರಿವಿರಲಿಲ್ಲವೇ ಎಂದು ಮಾಜಿ ಶಾಸಕರನ್ನು ಪ್ರಶ್ನಿಸಿದರು.

ಪಟ್ಟಣದ ಸಂತೆಮಾಳ ನಿವಾಸಿಗಳು ರಸ್ತೆ, ಚರಂಡಿ ಇಲ್ಲದೇ ತೊಂದರೆ ಅನುಭವಿಸುತ್ತಿದ್ದರು. ಕಳೆದ ಚುನಾವಣೆಯಲ್ಲಿ ಮತಯಾಚನೆಗೆ ತೆರಳಿದ್ದ ವೇಳೆ ಬಹುತೇಕ ನಿವಾಸಿಗಳು ಕಾಲೋನಿ ಅಭಿವೃದ್ಧಿ ಪಡಿಸುವಂತೆ ಮನವಿ ಮಾಡಿದ್ದರು. ಇದೀಗ ಆ ಕಾಲೋನಿ ಸಂಪೂರ್ಣವಾಗಿ ಅಭಿವೃದ್ಧಿಯಾಗಿದೆ. ಅಲ್ಲದೇ ಪಟ್ಟಣ ಹಾಗೂ ಗಂಜಾಂನ ಹಲವು ರೈತರು ದುಸ್ಥಿತಿಯಲ್ಲಿದ್ದ ಬಂಗಾರದೊಡ್ಡಿ ನಾಲೆಯಿಂದ ವ್ಯವಸಾಯ ಮಾಡಲು ಸಾಧ್ಯವಾಗದೆ ಪರಿತಪಿಸುತ್ತಿದ್ದರು. ಇದೀಗ ಬಂಗಾರದೊಡ್ಡಿ ನಾಲೆ ಆಧುನೀಕರಣಗೊಂಡಿದ್ದು, ನೂರಾರು ಎಕರೆ ರೈತರ ಜಮೀನುಗಳಿಗೆ ನೀರು ಸರಾಗವಾಗಿ ಹರಿದು ಹೋಗುವಂತಾಗಿದೆ ಎಂದರು.

ಈ ವೇಳೆ ಪುರಸಭೆ ಮಾಜಿ ಉಪಾಧ್ಯಕ್ಷ ವಿ.ರಾಜೇಂದ್ರ, ಮಾಜಿ ಸದಸ್ಯರಾದ ಶ್ರೀನಿವಾಸ್, ಯಶೋಧಮ್ಮ, ನಸೀಮಾ, ಮುಸ್ಲಿಂ ಮುಖಂಡ ಕಾಬೂಲ್, ರಾಮು, ಪ್ರಸನ್ನ, ಯಜಮಾನರಾದ ವೆಂಕಟೇಶ್, ಅಜಾಜ್ ಖಾನ್, ಅಭಿ ಸೇರಿದಂತೆ ನೂರಾರು ಮಂದಿ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಂ.ಸಂತೋಷ್, ಜಿಲ್ಲಾ ಉಪಾಧ್ಯಕ್ಷ ಶಂಕರ್, ತಾಲೂಕು ಅಧ್ಯಕ್ಷ ಪೈ.ಮುಕುಂದ, ನಗರ ಘಟಕ ಅಧ್ಯಕ್ಷ ಸುರೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಕಾಳೇಗೌಡ, ಎಪಿಎಂಸಿ ಅಧ್ಯಕ್ಷ ಚಂದ್ರಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ದಿವಾಕರ್, ಉಪಾಧ್ಯಕ್ಷೆ ಲಕ್ಷ್ಮಿದೇವಮ್ಮ, ಕುಮಾರಸ್ವಾಮಿ, ಪುರಸಭೆ ಮಾಜಿ ಸದಸ್ಯ ಸಾಯಿಕುಮಾರ್ ಸೇರಿದಂತೆ ಇತರರಿದ್ದರು.

ಪುನೀತ್ ಕೆರೆಹಳ್ಳಿ ವಿರುದ್ಧ ಮತ್ತೊಂದು ದೂರು

ಆರೋಪಿಗಳಿಗೆ 7 ದಿನ ಪೊಲೀಸ್ ಕಸ್ಟಡಿ



ಬೆಂಗಳೂರು: ಜಾನುವಾರು ಸಾಗಾಣಿಕೆದಾರನ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಆರೋಪದಡಿ ಬಂಧನಕ್ಕೀಡಾಗಿರುವ ಪುನೀತ್ ಕೆರೆಹಳ್ಳಿ ವಿರುದ್ಧ ಮತ್ತೊಂದು ಹಲ್ಲೆ ಪ್ರಕರಣ ದಾಖಲಾಗಿದೆ.

ಮಾರ್ಚ್ 20 ರಂದು ನಗರದ ಹೊರವಲಯದ ಹೊಸೂರು ರಸ್ತೆಯಲ್ಲಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಅಲೀಮುಲ್ಲಾ ಬೇಗ್(30) ಎಂಬ ಯುವಕನ ಮೇಲೆ ಪುನೀತ್ ಕೆರೆಹಳ್ಳಿ ಮತ್ತು ಇತರ ಮೂವರು ಸ್ಟನ್ ಗನ್ ನಿಂದ ಹಲ್ಲೆ ನಡೆಸಿ ಚಿತ್ರಹಿಂಸೆ ನೀಡಿದ್ದರು. ಅಲೀಮುಲ್ಲಾ ಅವರ ದೂರಿನ ಆಧಾರದ ಮೇಲೆ, ಏಪ್ರಿಲ್ 6 ರಂದು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಪುನೀತ್ ವಿರುದ್ಧ ಹಲ್ಲೆ, ಅಕ್ರಮ ತಡೆ ಮತ್ತು ಕ್ರಿಮಿನಲ್ ಬೆದರಿಕೆ ಸೇರಿದಂತೆ ಇತರ ಅಪರಾಧಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಎಫ್‌ಐಆರ್‌ನ ಪ್ರಕಾರ, ಅಲೀಮುಲ್ಲಾ ಅವರನ್ನು ತಮಿಳುನಾಡಿನ ಕೃಷ್ಣಗಿರಿಗೆ ದನಗಳನ್ನು ಸಾಗಿಸುವ ಕೆಲಸಕ್ಕೆ ನಿಯೋಜಿಸಲಾಗಿತ್ತು. ಅವರನ್ನು ಪುನೀತ್ ಕೆರೆಹಳ್ಳಿ ಮತ್ತು ಅವರ ಮೂವರು ಸಹಚರರಾದ ಸಂತೋಷ್, ಚೇತನ್ ಮತ್ತು ದೀಪಕ್ ಅವರು ನೈಸ್ ರಸ್ತೆಯಲ್ಲಿ ತಡೆದಿದ್ದಾರೆ. ಪುನೀತ್ ಮತ್ತು ಆತನ ಸಹಚರರು ವಾಹನದ ಚಾಲಕ ರಫೀಕ್ ಅವರನ್ನು ಮೊದಲು ಥಳಿಸಿದ್ದಾರೆ ದನಗಳನ್ನು ಸಾಗಿಸುತ್ತಿದ್ದ ಕಾರಣ ಆತನನ್ನು ನಿಂದಿಸಿ ಹೊಡೆದಿದ್ದಾರೆ ಬಳಿಕ ವಿದ್ಯುತ್ ಶಾಕ್ ನೀಡಲು ಸ್ಟನ್ ಗನ್ ಅನ್ನು ಬಳಸಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಪೊಲೀಸ್ ಕಸ್ಟಡಿಗೆ: ಇನ್ನು ಇದ್ರೀಶ್ ಪಾಷಾ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಪುನೀತ್ ಕೆರೆಹಳ್ಳಿ ಸೇರಿದಂತೆ ಇತರೆ ನಾಲ್ಕು ಆರೋಪಿಗಳಿಗೆ 7 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಕನಕಪುರ JMFC ನ್ಯಾಯಾಲಯ ಆದೇಶ ಹೊರಡಿಸಿದೆ. ಇದ್ರೀಶ್ ಪಾಷಾ ಅನುಮಾನಾಸ್ಪದ ಸಾವು ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಹಿಂದೂಪರ ಸಂಘಟನೆ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಮತ್ತು ನಾಲ್ವರು ಸಹಚರರನ್ನು ಇಂದು ಬೆಳಗ್ಗೆ ರಾಜಸ್ಥಾನದಿಂದ ರಾಮನಗರಕ್ಕೆ ಕರೆತಂದಿದ್ದು, ಬಳಿಕ ಪೊಲೀಸರು ಆರೋಪಿಗಳನ್ನು ಕನಕಪುರ ಜೆಎಂಎಫ್‌ಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಹೆಚ್ಚಿನ ವಿಚಾರಣೆಗೆ ಆರೋಪಿಗಳನ್ನು 7 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದ್ದಾರೆ.

ಈ ಪ್ರಕರಣದ ಬಗ್ಗೆ ಇನ್ನಷ್ಟು ವಿಚಾರಣೆ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಆರೋಪಿಗಳನ್ನು ತಮ್ಮ ಕಸ್ಟಡಿಗೆ ನೀಡಬೇಕೆಂದು ನ್ಯಾಯಾಲಕ್ಕೆ ಪೊಲೀಸರು ಮನವಿ ಮಾಡಿದ್ದರು. ಪೊಲೀಸ್ ಮನವಿ ಪುರಸ್ಕರಿಸಿದ ಕೋರ್ಟ್, ಆರೋಪಿಗಳನ್ನು ಏಳು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ. ಇನ್ನು ಪುನೀತ್ ಕೆರಹಳ್ಳಿ ಪರವಾಗಿ ಬೆಂಗಳೂರು ಮೂಲದ ಇಬ್ಬರು ವಕೀಲರು ವಕಾಲತ್ತು ವಹಿಸಿದ್ದರು.

ಬಾಲಿವುಡ್ ನಿರ್ಮಾಪಕ ಬೋನಿ ಕಪೂರ್ ಕುಟುಂಬಕ್ಕೆ ಸೇರಿದ 39 ಲಕ್ಷ ರೂ. ಮೌಲ್ಯದ ಬೆಳ್ಳಿ ವಶ

ದಾವಣಗೆರೆ: ಬಾಲಿವುಡ್ ಖ್ಯಾತ ನಟಿ ದಿವಂಗತ ಶ್ರೀದೇವಿ ಪತಿ ಬೋನಿ ಕಪೂರ್ ಅವರ ಕುಟುಂಬಕ್ಕೆ ಸೇರಿದ ಬೆಳ್ಳಿ ಹಾಗೂ ಕಾರನ್ನು ಪೊಲೀಸರು ದಾವಣಗೆರೆಯಲ್ಲಿ ವಶಕ್ಕೆ ಪಡೆದಿದ್ದಾರೆ.



ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 48ರ ಹೆಬ್ಬಾಳು ಟೋಲ್ ಚೆಕ್‌ಪೋಸ್ಟ್ ಬಳಿ ಚುನಾವಣಾಧಿಕಾರಿಗಳು 66 ಕೆಜಿ ಬೆಳ್ಳಿ ಪಾತ್ರೆಗಳು ಮತ್ತು ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆಂದು ತಿಳಿದುಬಂದಿದೆ. ಐದು ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಲಾಗಿದ್ದ ವಸ್ತುಗಳನ್ನು ಚೆನ್ನೈನಿಂದ ಮುಂಬೈಗೆ ಬಿಎಂಡಬ್ಲ್ಯು ಕಾರಿನಲ್ಲಿ ಸಾಗಿಸಲಾಗುತ್ತಿತ್ತು.

ಕಾರನ್ನು ತಪಾಸಣೆ ನಡೆಸಿದ ಅಧಿಕಾರಿಗಳ ತಂಡಕ್ಕೆ ಕಾರಿನ ಚಾಲಕ ಸುಲ್ತಾನ್ ಖಾನ್ ಮತ್ತು ಕಾರಿನಲ್ಲಿದ್ದ ಹರಿ ಸಿಂಗ್ ರಘುನಾಥ್ ದಾಖಲೆ ಹಾಗೂ ಸರಿಯಾದ ಉತ್ತರ ನೀಡಲಿಲ್ಲ. ಈ ಹಿನ್ನೆಲೆಯಲ್ಲಿ ವಸ್ತುಗಳನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ. ದಾಖಲೆಗಳ ಪ್ರಕಾರ ಕಾರು ಬೋನಿ ಕಪೂರ್ ಅವರಿಗೆ ಸೇರಿದ್ದಾಗಿದೆ ಎಂದು ತಿಳಿದುಬಂದಿದೆ. ಆದರೆ, ಕಾರಿನಲ್ಲಿ ಬೋನಿಕಪೂರ್ ಇರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂಬಂಧ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ.

ಅಸ್ಸಾಂ: 'ವಿಷಕಾರಿ' ಅಣಬೆ ತಿಂದ ಮೂವರು ಸಾವು

ಗೋಲಘಾಟ್(ಅಸ್ಸಾಂ): ಅಸ್ಸಾಂನ ಗೋಲಾಘಾಟ್ ಜಿಲ್ಲೆಯಲ್ಲಿ ವಿಷಕಾರಿ ಅಣಬೆ ಸೇವಿಸಿ ಎರಡು ವರ್ಷದ ಮಗು ಸೇರಿದಂತೆ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಜಿಲ್ಲೆಯ ಮೆರಪಾನಿ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಐದು ಕುಟುಂಬಗಳ ಸದಸ್ಯರು ಏಪ್ರಿಲ್ 2 ರಂದು ಅಣಬೆಯನ್ನು ಸೇವಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಒಂದೇ ಕುಟುಂಬದ ಮೂವರು ಅಣಬೆ ತಿಂದು ಮೃತಪಟ್ಟಿದ್ದು, ಗುರುವಾರ ಹೇಮಂತ ಬರ್ಮನ್(2) ಹಾಗೂ ಅವರ ತಾಯಿ ತರಲಿ ಬರ್ಮನ್(23) ಅವರು ಮೃತಪಟ್ಟರೆ, ತಂದೆ ಪ್ರಫುಲ್ಲ ಬರ್ಮನ್(24) ಸಾವನ್ನಪ್ಪಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಅವರೆಲ್ಲರೂ ಜೋರ್ಹತ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ (ಜೆಎಂಸಿಎಚ್) ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ವಿಷಕಾರಿ ಅಣಬೆ ಸೇವಿಸಿದ ಐದು ಕುಟುಂಬಗಳ ಒಟ್ಟು 13 ಮಂದಿ ಆರೋಗ್ಯದಲ್ಲಿ ತೊಂದರೆ ಕಾಣಿಸಿಕೊಂಡಿತ್ತು ಎಂದು ಮೇರಪಾಣಿ ಸಮುದಾಯ ಆರೋಗ್ಯ ಕೇಂದ್ರದ ಉಪ ಅಧೀಕ್ಷಕ ಡಾ.ಚಂದ್ರ ಶ್ಯಾಮ್ ಅವರು ಹೇಳಿದ್ದಾರೆ. ಇತರ ಅಸ್ವಸ್ಥಗೊಂಡವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಶ್ಯಾಮ್ ತಿಳಿಸಿದ್ದಾರೆ.

ಷಣ್ಮುಗಂ ಮಣಿ ನಿಧನ



ಮೈಸೂರು, ಏ.9– ಮೈಸೂರಿನ ವಿದ್ಯಾನಗರ ನಿವಾಸಿ, ಸಿವಿಲ್ ಇಂಜಿನಿಯರ್ ಷಣ್ಮುಗಂ ಮಣಿ(77) ಅವರು ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ 12.30ಕ್ಕೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಬಂಡೀಪುರ ಅರಣ್ಯದಲ್ಲಿ ಮೋದಿ ಸಫಾರಿ ವೇಳೆ ಕಾಣದ ಹುಲಿ

ಹಿಡಿದು ಮಾರಿಬಿಡುತ್ತಾರೆ ಅನ್ನೋ ಭಯವಿರಬೇಕು

ಚಾಮರಾಜನಗರ: ಹುಲಿ ಯೋಜನೆಯ ಸುವರ್ಣ ಮಹೋತ್ಸವದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಬಂಡೀಪುರಕ್ಕೆ ಭೇಟಿ ನೀಡಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ನಡೆಸಿದರು. ಎರಡು ಗಂಟೆಗಳ ಅವಧಿಯಲ್ಲಿ 22 ಕಿ.ಮೀ ಸಂಚರಿಸಿ ಪ್ರಕೃತಿಯ ಸೊಬಗನ್ನು ಕಣ್ತುಂಬಿಕೊಂಡರು. ಆದರೆ, ಈ ವೇಳೆ ಹುಲಿ ಮಾತ್ರ ಪ್ರಧಾನಿಗೆ ಕಾಣಿಸಲಿಲ್ಲ.



ಪ್ರಧಾನಿ ಮೋದಿ ಅವರು ನಡೆಸಿದ ಸಫಾರಿ ವೇಳೆ ಹುಲಿ ಕಂಡುಬಾರದಿರುವ ಬಗ್ಗೆ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿ ಅವರನ್ನು ಕುರಿತು ಕುಟುಕಿದ್ದಾರೆ.

ಸಫಾರಿ ಸಮಯದಲ್ಲಿ ಸಫಾರಿ ವೇಳೆ ಆನೆಗಳು, ಜಿಂಕೆಗಳು, ಕಾಟಿಗಳು ಸೇರಿದಂತೆ ಹಲವು ಪ್ರಾಣಿ, ಪಕ್ಷಿಗಳು ಎದುರಾದವು. ಆದರೆ, ನಮಗೆ ಹುಲಿ ಕಾಣಿಸಲಿಲ್ಲ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಹುಲಿಯನ್ನು ಹಿಡಿದು ಮಾರಿಬಿಡುತ್ತಾರೆ ಎನ್ನುವ ಭಯಕ್ಕೆ ಅವುಗಳು ಯಾವ ಗುಹೆಯೊಳಗೆ ಅಡಗಿ ಕುಳಿತಿವೆಯೋ.. ಅಯ್ಯೋ ಪಾಪ ಎಂದು ವ್ಯಂಗ್ಯವಾಗಿ ಹೇಳಿದ್ದಾರೆ.

ಮುಂದುವರಿದು, ಇನ್ನು ಕೆಲವೇ ದಿನಗಳಲ್ಲಿ 'ಬಂಡೀಪುರ ಉಳಿಸಿ' ಎಂಬ ಅಭಿಯಾನವನ್ನು ಕನ್ನಡಿಗರು ಶುರು ಮಾಡುವಂತೆ ಆಗದಿರಲಿ. ಅದೇ ನೀವು ಕುನಾಡಿಗೆ ಮಾಡುವ ದೊಡ್ಡ ಉಪಕಾರ ನರೇಂದ್ರ ಮೋದಿ ಜೀ ಎಂದು ಟ್ವೀಟ್ ಮೂಲಕ ಕುಟುಕಿದ್ದಾರೆ.

ಕೊಡಗಿನ ಹೆಚ್ಚು ಆಟಗಾರರು ಭಾರತ ಹಾಕಿ ತಂಡ ಪ್ರತಿನಿಧಿಸಬೇಕು

ಅಪ್ಪಚೆಟ್ಟೋಳಂಡ ಹಾಕಿ ಉತ್ಸವ ಸಮಾರೋಪದಲ್ಲಿ ಭಾರತ ಹಾಕಿ ತಂಡದ ಮಾಜಿ ನಾಯಕ ಧನರಾಜ್ ಪಿಳ್ಳೆ ಆಶಯ





40 ಸಾವಿರ ಪ್ರೇಕ್ಷಕರು...

ಫೈನಲ್ ಪಂದ್ಯವನ್ನು ವೀಕ್ಷಿಸಲು ಜಿಲ್ಲೆಯ ಮೂಲೆ ಮೂಲೆಗಳಿಂದ ಅಂದಾಜು 40 ಸಾವಿರ ಮಂದಿ ಪ್ರೇಕ್ಷಕರು ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣಕ್ಕೆ ಆಗಮಿಸಿದ್ದರು. ಏಕಕಾಲಕ್ಕೆ 25 ಸಾವಿರ ಮಂದಿ ಕುಳಿತು ಪಂದ್ಯ ವೀಕ್ಷಿಸಲು ಅನುಕೂಲ ವಾಗುವಂತೆ ಗ್ಯಾಲರಿಗಳನ್ನು ನಿರ್ಮಾಣ ಮಾಡಲಾಗಿತ್ತು. ನಿರೀಕ್ಷೆಗೂ ಮೀರಿ ಮೈದಾನದ ಗ್ಯಾಲರಿ ಕ್ರೀಡಾ ಪ್ರೇಮಿಗಳಿಂದ ತುಂಬಿ ಹೋಗಿತ್ತು. ಮಹಿಳೆಯರು, ಮಕ್ಕಳು, ವಯೋವೃದ್ಧರ ಸಹಿತ ಯುವಕ ಯುವತಿಯರು ಪಂದ್ಯಾಟ ವೀಕ್ಷಿಸಿದರು. ಯುವಕರ ತಂಡಗಳ ಸುಮಧುರ ಕೊಳಲು ವಾದನ ಸಹಿತ ದೇಸಿ ಬ್ಯಾಂಡ್ ಸೆಟ್‌ಗಳು ಪಂದ್ಯಾಟಕ್ಕೆ ಕಳೆ ತುಂಬಿದ್ದವು. ಮಾಳೇಟಿರ ಶ್ರೀನಿವಾಸ್ ಮತ್ತು ಚೆಪ್ಪುಡಿರ ಕಾರ್ಯಪ್ಪ ಅವರ ವೀಕ್ಷಕ ವಿವರಣೆ ಪಂದ್ಯಾಟದ ವೀಕ್ಷಕರನ್ನು ಸೆಳೆಯುವಲ್ಲಿ ಸಫಲವಾಯಿತು.

ಮಡಿಕೇರಿ, ಏ.9– ಪೋಷಕರು ಮಕ್ಕಳಿಗೆ ಹಾಕಿ ಕ್ರೀಡೆಯಲ್ಲಿ ಒಲವು ಮೂಡಿಸುವ ಮೂಲಕ ಪ್ರೋತ್ಸಾಹಿಸಬೇಕು, ಆ ಮೂಲಕ ಭವಿಷ್ಯದ ದಿನಗಳಲ್ಲಿ ಕೊಡಗಿನಿಂದ ಹೆಚ್ಚು ಆಟಗಾರರು ಭಾರತ ಹಾಕಿ ತಂಡವನ್ನು ಪ್ರತಿನಿಧಿಸುವಂತಾಗ ಬೇಕು ಎಂದು ಭಾರತ ಹಾಕಿ ತಂಡದ ಮಾಜಿ ನಾಯಕ, ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ವಿಜೇತ, ಒಲಿಂಪಿಯನ್ ಧನ್‌ರಾಜ್ ಪಿಳ್ಳೆ ಕರೆ ನೀಡಿದರು.

ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ 23ನೇ ವರ್ಷದ ಕೊಡವ ಕೌಟುಂಬಿಕ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ 2023' ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಒಂದು ಕಾಲದಲ್ಲಿ ಭಾರತ ಹಾಕಿ ತಂಡದಲ್ಲಿ 8ರಿಂದ 10 ಮಂದಿ ಕೊಡಗಿನ ಆಟಗಾರರು ಇರುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಅವರು ವಿಷಾಧಿಸಿದರು. ಮಕ್ಕಳು, ಯುವಕರಲ್ಲಿ ಹಾಕಿ ಕ್ರೀಡೆಯ ಬಗ್ಗೆ ಆಸಕ್ತಿ ಮೂಡಿಸಲು ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಸಹಕಾರಿಯಾಗಿದೆ. ಇಂತಹ ಕ್ರೀಡಾ ಕೂಟಗಳಿಂದ ಮತ್ತಷ್ಟು ಯುವ ಹಾಕಿ ಪಟುಗಳು ರಾಜ್ಯ ಮತ್ತು ರಾಷ್ಟ್ರವನ್ನು ಪ್ರತಿನಿಧಿಸುವಂತಾಗಲಿ ಎಂದು ಆಶಿಸಿದರು. ಎಂ.ಎಂ ಸೋಮಯ್ಯ, ಎಂ.ಪಿ ಗಣೇಶ್, ಎ.ಬಿ ಸುಬ್ಬಯ್ಯ ಅವರಂತಹ ಅನೇಕ ಅತ್ಯುತ್ತಮ ಆಟಗಾರರನ್ನು ಕೊಡಗು ಜಿಲ್ಲೆ ಭಾರತ ಹಾಕಿ ತಂಡಕ್ಕೆ ನೀಡಿದೆ ಎಂದು ಧನ್‌ರಾಜ್ ಪಿಳ್ಳೆ ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತ ಹಾಕಿ ತಂಡದ ಮತ್ತೋರ್ವ ಮಾಜಿ ನಾಯಕ, ಓಲಂಪಿಯನ್ ಜಾಫರ್ ಇಕ್ಬಾಲ್ ಮಾತನಾಡಿ, ಕೊಡವ ಕೌಟುಂಬಿಕ ಹಾಕಿ ಉತ್ಸವ ವಿಶ್ವ ದಾಖಲೆ ಬರೆದಿದೆ. 300ಕ್ಕೂ ಹೆಚ್ಚು ಕೊಡವ ಕುಟುಂಬಗಳು ಪಾಲ್ಗೊಂಡು ಆಟವಾಡುವ ಕ್ರೀಡಾ ಕೂಟವನ್ನು ವೀಕ್ಷಿಸಲು ಇದೇ ಮೊದಲ ಬಾರಿಗೆ ಕೊಡಗಿಗೆ ಬಂದಿರುವುದು ಸಂತೋಷ ತಂದಿದೆ ಎಂದರು. ಹಾಕಿಯನ್ನು ತಳಮಟ್ಟದಿಂದ ಬೆಳೆಸುವಲ್ಲಿ ಇಂತಹ ಕ್ರೀಡಾಕೂಟಗಳು ಸಹಕಾರಿಯಾಗಿದೆ. ಕೊಡಗು ಜಿಲ್ಲೆಯಲ್ಲಿ ಮತ್ತಷ್ಟು ಇಂತಹ ಕ್ರೀಡಾ ಕೂಟಗಳು ಆಯೋಜಿಸುವಂತಾಗಬೇಕು ಎಂದು ಜಾಫರ್ ಇಕ್ಬಾಲ್ ಅಭಿಪ್ರಾಯಪಟ್ಟರು.

ಒಲಂಪಿಯನ್ ಎ.ಬಿ ಸುಬ್ಬಯ್ಯ ಮಾತನಾಡಿ, ಅಪ್ಪಚೆಟ್ಟೋಳಂಡ ಕುಟುಂಬ ಅತ್ಯುತ್ತಮವಾಗಿ ಪಂದ್ಯಾವಳಿ ಆಯೋಜಿಸಿದ್ದು, ಹೆಮ್ಮೆ ತಂದಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ ಆಟಗಾರರು ಕಾರ್ಯಕ್ರಮಕ್ಕೆ ಆಗಮಿಸಿರುವುದು ಪಂದ್ಯಾವಳಿಯ ಗೌರವ ಹೆಚ್ಚಿಸಿದೆ ಎಂದು ಹೇಳಿ ಪಂದ್ಯಾಟಕ್ಕೆ ಶುಭ ಕೋರಿದರು.

ಏರ್ ಮಾರ್ಷಲ್ ಬಲ್ಲಿಕಾಳಂಡ ಯು. ಚೆಂಗಪ್ಪ ಮಾತನಾಡಿ, ಕೊಡವರನ್ನು ಒಗ್ಗೂಡಿಸುವ ಮತ್ತು ಜಿಲ್ಲೆಯಲ್ಲಿ ಹಾಕಿ ಕ್ರೀಡೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 1997ರಲ್ಲಿ ಪಾಂಡಂಡ ಕುಟ್ಟಪ್ಪ ಅವರು ಮೊಟ್ಟ ಮೊದಲ ಬಾರಿಗೆ ಪಂದ್ಯಾಟ ಆರಂಭಿಸಿದ್ದರು. ಇಂದು ಪ್ರತಿಯೋರ್ವರೂ ಪಾಂಡಂಡ ಕುಟ್ಟಪ್ಪ ಅವರನ್ನು ಸ್ಮರಿಸಬೇಕಿದೆ. ಅಂದು ಕುಟ್ಟಪ್ಪ ಅವರು ಬಿತ್ತಿದ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ ಎಂದು ಶ್ಲಾಘಿಸಿದರು. 336 ಕುಟುಂಬಗಳು ಪಾಲ್ಗೊಳ್ಳುವ ಅತಿ ದೊಡ್ಡ ಟೂರ್ನಿಯಾಗಿ ಬೆಳೆದಿರುವ ಕೊಡವ ಕುಟುಂಬಗಳ ಕೌಟುಂಬಿಕ ಹಾಕಿ ಉತ್ಸವದ ಮೂಲಕ ಇನ್ನಷ್ಟು ಕ್ರೀಡಾಪಟುಗಳು ಭಾರತ ತಂಡವನ್ನು ಪ್ರತಿನಿಧಿಸುವಂತಾಗಲಿ ಎಂದರು.

ಅಪ್ಪಚೆಟ್ಟೋಳಂಡ ಹಾಕಿ ನಮ್ಮೆಯ ಕುರಿತು ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ. ಬೋಪಣ್ಣ ಒಲಿಂಪಿಯನ್ ಚೆಪ್ಪುಡಿರ ಪೂಣಚ್ಚ ಅವರುಗಳು ಮಾತನಾಡಿ, ಪಂದ್ಯಾವಳಿಗೆ ಶುಭ ಹಾರೈಸಿದರು.

ಫೈನಲ್ ಪಂದ್ಯಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮವನ್ನು ಅಪ್ಪಚೆಟ್ಟೋಳಂಡ ಕುಟುಂಬದ ಪಟ್ಟೆದಾರರಾದ ಅಪ್ಪಚೆಟ್ಟೋಳಂಡ ಮಿಟ್ಟು ಈರಪ್ಪ, ಪಾಂಡಂಡ ಕುಟ್ಟಪ್ಪ ಅವರ ಪತ್ನಿ ಪಾಂಡಂಡ ಲೀಲಾ ಕುಟ್ಟಪ್ಪ, ಏರ್ ಮಾರ್ಷಲ್ ಬಲ್ಲಿಕಾಳಂಡ ಯು.ಚೆಂಗಪ್ಪ ಉದ್ಘಾಟಿಸಿದರು. ಭಾರತ ಹಾಕಿ ತಂಡದ ಕೋಚ್ ಡೇವಿಡ್ ಜಾನ್, ಧನ್‌ರಾಜ್ ಪಿಳ್ಳೆ ಸಹೋದರಿ ಸಮಿಕ್ಷಾ ಸಿಂಗ್, ಜಾಫರ್ ಇಕ್ಬಾಲ್ ಪತ್ನಿ ಫೌಜಿಯಾ ಇಕ್ಬಾಲ್, ಅಪ್ಪಚೆಟ್ಟೋಳಂಡ ಹಾಕಿ ನಮ್ಮೆಯ ಸಂಚಾಲಕ ಮನು ಮುತ್ತಪ್ಪ, ಪದ್ಮಶ್ರೀ ಐಮುಡಿಯಂಡ ರಾಣಿ ಮಾಚಯ್ಯ, ಅಪ್ಪಚೆಟ್ಟೋಳಂಡ ಕುಟುಂಬದ ಪ್ರಮುಖರು ವೇದಿಕೆಯಲ್ಲಿದ್ದರು.

ತೆರೆದ ಜೀಪ್‌ನಲ್ಲಿ ಮೆರವಣಿಗೆ

ಭಾರತ ಹಾಕಿ ದಂತಕಥೆಗಳೆಂದೇ ಕರೆಯಲ್ಪಡುವ ಓಲಂಪಿಯನ್‌ಗಳಾದ ಧನ್‌ರಾಜ್ ಪಿಳ್ಳೆ, ಜಾಫರ್ ಇಕ್ಬಾಲ್ ಸೇರಿದಂತೆ ಅಂತರರಾಷ್ಟ್ರೀಯ ತೀರ್ಪುಗಾರ ಬಿ.ಜೆ ಕಾರ್ಯಪ್ಪ, ಭಾರತ ಹಾಕಿ ತಂಡದ ಕೋಚ್ ಡೇವಿಡ್ ಜಾನ್, ಒಲಿಂಪಿಯನ್ ಅಂಜಪರವಂಡ ಸುಬ್ಬಯ್ಯ ಅವರನ್ನು ಮೈದಾನದಲ್ಲಿ ತೆರೆದ ಜೀಪ್‌ನಲ್ಲಿ ಮೆರವಣಿಗೆ ನಡೆಸಿ ಗೌರವಿಸಲಾಯಿತು.

ಕೊಡವ ಸಾಂಪ್ರದಾಯಿಕ ಉಡುಗೆಯಲ್ಲಿದ್ದ ಅಪ್ಪಚೆಟ್ಟೋಳಂಡ ಕುಟುಂಬಸ್ಥರು ಅಧ್ಯಕ್ಷ ಮನು ಮುತ್ತಪ್ಪ ನೇತೃತ್ವದಲ್ಲಿ ಮೆರವಣಿಗೆಯನ್ನು ಮುನ್ನಡೆಸಿದರು. ಸಹಸ್ರಾರು ಸಂಖ್ಯೆಯಲ್ಲಿದ್ದ ಕ್ರೀಡಾ ಪ್ರೇಮಿಗಳು ಓಲಂಪಿಯನ್‌ಗಳಿಗೆ ಕರತಾಡನ ಮಾಡುವ ಮೂಲಕ ತಮ್ಮ ಗೌರವ ಸಮರ್ಪಿಸಿದರು. ಇದೇ ಸಂದರ್ಭ ಮುಂದಿನ ವರ್ಷದ ಪಂದ್ಯಾಟದ ಜವಾಬ್ದಾರಿ ವಹಿಸಿಕೊಂಡಿರುವ ಕುಂಡ್ಯೋಳಂಡ ಕುಟುಂಬಸ್ಥರು ಮೈದಾನದಲ್ಲಿ ಕೊಡವ ಸಾಂಪ್ರದಾಯಿಕ ಉಡುಪಿನೊಂದಿಗೆ ಮೆರವಣಿಗೆ ಸಾಗಿ ಎಲ್ಲಾ ಕೊಡವ ಕುಟುಂಬಗಳ ಬೆಂಬಲ ಕೋರಿದರು. ಪೇರೂರು ಕಲಾ ತಂಡ ಮತ್ತು ಗೋಣಿಕೊಪ್ಪ ಕಾವೇರಿ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮೂಡಿ ಬಂತು.

ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸ್ ಗೆಲುವು ಖಚಿತ: ಪೊನ್ನಣ್ಣ ವಿಶ್ವಾಸ



ವಿರಾಜಪೇಟೆ, ಏ.9– ಕೊಡಗು ಜಿಲ್ಲೆಯ ಎರಡು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಪಕ್ಷ ಜಯಭೇರಿ ಭಾರಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್. ಪೊನ್ನಣ್ಣ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಭವಿಷ್ಯ ನುಡಿದರು.

ಪಟ್ಟಣದಲ್ಲಿಂದು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ಅವರು ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಲೆ ಎದ್ದಿರುವುದೇ ನಮ್ಮ ಗೆಲುವಿಗೆ ಕಾರಣವಾಗಿದೆ ಎಂದರು. ವಿರಾಜಪೇಟೆ ಮತ್ತು ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವೂ ಇಬ್ಬರು ಯುವಕರಿಗೆ ಅವಕಾಶ ಕಲ್ಪಿಸಿದೆ. ಈಗಾಗಲೇ ನಾವುಗಳು ಪ್ರಚಾರ ಕಾರ್ಯದಲ್ಲಿ ತೊಡಗಿದ್ದೇವೆ ಎಂದ ಅವರು, ಚುನಾವಣಾ ಆಯೋಗದ ಕಟ್ಟುನಿಟ್ಟಿನ ನಿಯಮ ಮತ್ತು ಕಾನೂನು ಪ್ರಕಾರವೇ ನಿಯಮ ಉಲ್ಲಂಘಿಸದೆ ಚುನಾವಣೆ ಪ್ರಚಾರ ಕೈಗೊಂಡಿದ್ದೇವೆ ಎಂದರು. ವಿರಾಜಪೇಟೆ ಮತ್ತು ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಇದುವರೆಗೂ ಇದ್ದ ಬಿಜೆಪಿ ಶಾಸಕರು ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ಜಿಲ್ಲೆಯ ಜನತೆಗೆ ಅನ್ಯಾಯ ಮಾಡಿದ್ದಾರೆ. ಜೊತೆಗೆ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರವೂ ಕೂಡ ದುರಾಡಳಿತದಲ್ಲಿ ತೊಡಗಿರುವುದರಿಂದ ಕೊಡಗು ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಮತದಾರರು ಬಿಜೆಪಿಗೆ ತಕ್ಕ ಪಾಠ ಕಲಿಸಲು ಸಿದ್ಧವಾಗಿದ್ದಾರೆ. ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆದಿರುವ ಕಾಂಗ್ರೆಸ್ ಪಕ್ಷದ ಬಗ್ಗೆ ಜನರ ಒಲವು ಹೆಚ್ಚಾಗಿರುವುದರಿಂದ ಪಕ್ಷದ ಗೆಲುವು ನಿಶ್ಚಿತ ಎಂದು ಅವರು ಪ್ರತಿಪಾದಿಸಿದರು.

ಈ ಮಧ್ಯೆ ಕ್ಷೇತ್ರದಾದ್ಯಂತ ಸದ್ದಿಲ್ಲದೆ ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಪೊನ್ನಣ್ಣ ಅವರು ಇಂದು ಸಹ ಮನೆ ಮನೆಗೆ ಭೇಟಿ ನೀಡಿದ್ದರಲ್ಲದೆ, ಊರಿನ ಹಿರಿಯ ಮುಖಂಡರನ್ನು ಭೇಟಿ ಮಾಡಿ ತಮ್ಮನ್ನು ಬೆಂಬಲಿಸುವಂತೆ ಕೋರುತ್ತಿದ್ದಾರೆ.

ಸಂತೆ ಮಾರುಕಟ್ಟೆಯ ತ್ಯಾಜ್ಯ ತುಂಬಿದ ಮಳಿಗೆಯಲ್ಲಿ ಬೆಂಕಿ



ಸಿದ್ದಾಪುರ, ಏ.9– ಸಂತೆ ಮಾರುಕಟ್ಟೆ ಬಳಿ ಮೀನು ಮಾಂಸ ವ್ಯಾಪಾರಕ್ಕಾಗಿ ನಿರ್ಮಿಸಲಾಗಿರುವ ಮಳಿಗೆವೊಂದರಲ್ಲಿ ತ್ಯಾಜ್ಯ ತುಂಬಿದ ಪರಿಣಾಮ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಸ್ಥಳೀಯರ ಸಮಯ ಪ್ರಜ್ಞೆಯಿಂದ ಬಾರಿ ಅನಾಹುತ ತಪ್ಪಿದಂತಾಗಿದೆ.

ಸಂತೆ ಮಾರುಕಟ್ಟೆ ಸುತ್ತಮುತ್ತಲು ಜನ ವಸತಿ ಪ್ರದೇಶವಾಗಿದ್ದು, ಪಂಚಾಯಿತಿ ಮಳಿಗೆ ಸೇರಿದಂತೆ ಸಂತೆ ಮಾರುಕಟ್ಟೆ ಒಳಗೆ ಗ್ರಾಪಂ ಅವೈಜ್ಞಾನಿಕವಾಗಿ ತ್ಯಾಜ್ಯ ಸುರಿಯಲಾಗುತ್ತಿದ್ದು, ಮೀನು ಮಾಂಸ ಮಾರಾಟಕ್ಕಾಗಿ ಐದು ಮಳಿಗೆಗಳನ್ನು ನಿರ್ಮಿಸಲಾಗಿದ್ದು ಇದುವರೆಗೂ ವ್ಯಾಪಾರಕ್ಕೆ ಬಳಕೆಯಾಗದೆ ತ್ಯಾಜ್ಯ ಸಂಗ್ರಹಿಡಲಾಗುತ್ತಿದೆ.

ರಾತ್ರಿ 9ರ ಸುಮಾರಿಗೆ ಅಂಗಡಿಯ ಮಳಿಗೆವೊಂದರಲ್ಲಿ ದಟ್ಟ ಹೊಗೆಯೊಂದಿಗೆ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಸ್ಥಳೀಯರು ಗಮನಿಸಿ ಅಕ್ಕ ಪಕ್ಕದಲ್ಲಿ ನಿವಾಸಿಗಳೆಲ್ಲ ಒಗ್ಗೂಡಿ ಸುಮಾರು ಒಂದೂವರೆ ಗಂಟೆ ಕಾಲ ಹರಸಾಹಸ ಪಟ್ಟು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮಾರುಕಟ್ಟೆ ಸುತ್ತಮುತ್ತ ವ್ಯಾಪ್ತಿಯಲ್ಲಿ ನೂರಾರು ಕುಟುಂಬಗಳು ವಾಸವಾಗಿದ್ದು ಬೆಂಕಿ ವ್ಯಾಪಿಸಿಕೊಂಡಿದ್ದಲ್ಲಿ ಭಾರೀ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು. ಸ್ಥಳೀಯ ಯುವಕರ ಸಮಯ ಪ್ರಜ್ಞೆಯಿಂದ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಂತರ ಗೋಣಿಕೊಪ್ಪ ಅಗ್ನಿಶಾಮಕ ದಳ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಪಂಚಾಯಿತಿ ವಿರುದ್ಧ ಆಕ್ರೋಶ: ತ್ಯಾಜ್ಯ ವಿಲೇವಾರಿಗೆ ಸೂಕ್ತ ಜಾಗ ಕಂಡುಕೊಳ್ಳಲಾಗದೆ ಅಸಹಾಯಕತೆ ತೋರುತ್ತಿರುವ ಗ್ರಾಪಂ ಜನ ವಸತಿ ಪ್ರದೇಶವಾದ ಮಾರುಕಟ್ಟೆ ಭಾಗದಲ್ಲಿ ತ್ಯಾಜ್ಯ ತಂದು ಸುರಿಯಲಾಗುತ್ತಿದ್ದು, ಇದರ ದುರ್ವಾಸನೆಯೊಂದಿಗೆ ಸುತ್ತಮುತ್ತಲ ನಿವಾಸಿಗಳು ಮೂಗು ಮುಚ್ಚಿ ಜೀವನ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಇದ್ದರು. ಗ್ರಾಪಂ ಮಾತ್ರ ತ್ಯಾಜ್ಯ ವಿಲೇವಾರಿ ಸಮಸ್ಯೆ ಬಗೆಹರಿಸುವಲ್ಲಿ ವಿಫಲವಾಗಿದೆ ಎಂದು ಸ್ಥಳೀಯರು ಆರೋಪಿಸಿದರು.

ಅಮುಲ್‌ನೊಂದಿಗೆ ನಂದಿನಿ ವಿಲೀನ ವಿರೋಧಿಸಿ ಪ್ರತಿಭಟನೆ

ನಂದಿನಿ ಎಂದರೆ ಕನ್ನಡಿಗರ ಅಸ್ಮಿತೆ, ಸ್ವಾಭಿಮಾನ : ಚಾ.ರಂ.ಶ್ರೀನಿವಾಸಗೌಡ



ನಂದಿನಿ ಹಾಲಿನೊಂದಿಗೆ ಅಮುಲ್ ಹಾಲನ್ನು ವಿಲೀನ ಮಾಡಬಾರದು ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಏ. 9– ನಂದಿನಿ ಉತ್ಪನ್ನಗಳೊಂದಿಗೆ ಅಮುಲ್ ಉತ್ಪನ್ನಗಳನ್ನು ವಿಲೀನ ಮಾಡಬಾರದು ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಿ ಉದ್ಯಾನವನದ ಆವರಣದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ ಅಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸೇನಾ ಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕರ್ನಾಟಕ ನಂದಿನಿ ಹಾಲು ಮತ್ತು ಉತ್ಪನ್ನಗಳು ಕನ್ನಡಿಗರ ಅಸ್ಮಿತೆ, ಸ್ವಾಭಿಮಾನವಾಗಿದೆ. ಈ ನಂದಿನಿ ಹಾಲಿನ ಉತ್ಪನ್ನಗಳ ಮೇಲೆ ರಾಜ್ಯದಲ್ಲಿ ಲಕ್ಷಾಂತರ ರೈತರು, ಅವರು ಕುಟುಂಬ ಅವಲಂಬಿತರಾಗಿದ್ದಾರೆ. ನಂದಿನಿಯನ್ನು ಗುಜರಾತಿನ ಅಮುಲ್‌ನೊಂದಿಗೆ ವಿಲೀನದಿಂದ ಲಕ್ಷಾಂತರ ಜನರು ಬೀದಿಪಾಲಾಗುತ್ತಾರೆ. ಆದರಿಂದ ಯಾವುದೇ ಕಾರಣಕ್ಕೂ ಅಮುಲ್‌ನೊಂದಿಗೆ ವಿಲೀನ ಮಾಡಬಾರದು. ಒಂದು ವೇಳೆ ಮಾಡಿದರೆ ಚುನಾವಣೆ ನಂತರ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾ.ಮರುಳಿ, ಚಾ.ವೆಂ. ರಾಜ್‌ಗೋಪಾಲ್, ಪಣ್ಯದಹುಂಡಿ ರಾಜು, ಚಾ.ರಾ. ಕುಮಾರ್, ಗು. ಪುರುಷೋತ್ತಮ್, ಮೂರ್ತಿ, ಶಿವರುದ್ರಸ್ವಾಮಿ, ಬಸವಣ್ಣ, ನಂಜಂಡಸ್ವಾಮಿ, ರವಿಚಂದ್ರಪ್ರಸಾದ್ ಕಹಳೆ, ಅಭಿಷೇಕ್, ಸಂಜಯ್, ಶಿವಣ್ಣ, ತಾಂಡವ ಮೂರ್ತಿ, ಶಿವು ಇತರರು ಭಾಗವಹಿಸಿದ್ದರು.

ನಾಳೆ ಬಿಜೆಪಿ ರೈತ ಮೋರ್ಚಾದ ಜಿಲ್ಲಾ ಸಮಾವೇಶ



ಚಾಮರಾಜನಗರ, ಏ.9– ಬಿಜೆಪಿ ರೈತ ಮೋರ್ಚಾದ ಜಿಲ್ಲಾ ಸಮಾವೇಶ ಏ.11 ರಂದು ನಡೆಯಲಿದೆ ಎಂದು ಮೋರ್ಚಾದ ಅಧ್ಯಕ್ಷ ಎಸ್.ಎಂ. ಮಲ್ಲಿಕಾರ್ಜುನ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಗರದ ಹೊರವಲಯದಲ್ಲಿರುವ ಸೂರ್ಯೋದಯ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶವನ್ನು ರೈತ ಮೋರ್ಚಾದ ರಾಜ್ಯಾಧ್ಯಕ್ಷ ವೀರಣ್ಣ ಕರಡಿ ಉದ್ಘಾಟಿಸಲಿದ್ದಾರೆ. ರಾಜ್ಯಸಭಾ ಸದಸ್ಯ ಜಗದೀಶ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಪ್ರಧಾನಿಮಂತ್ರಿ ನರೇಂದ್ರಮೋದಿಯವರು, ರಾಜ್ಯದ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರು ಜಾರಿಗೆ ತಂದಿರುವ ರೈತಪರ ಯೋಜನೆಗಳು, ರೈತರ ಬದುಕಿನಲ್ಲಿ ಪ್ರಗತಿಯನ್ನು ಸಾದಿಸುತ್ತಿದೆ. ರೈತರ ಖಾತೆಗಳಿಗೆ ನೇರವಾಗಿ ಕೇಂದ್ರದಿಂದ 6 ಸಾವಿರ ಹಾಗೂ ರಾಜ್ಯದಿಂದ 4 ಸಾವಿರ ಹೋಗುತ್ತಿದೆ. ಇದು ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಸಹಕಾರಿಯಾಗಿದೆ. ಅಲ್ಲದೆ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಕಡಿತ ದರ ಸಾಲ ಸೌಲಭ್ಯ ಕಲ್ಪಿಸುತ್ತಿದೆ. ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರು ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ರೈತ ವಿದ್ಯಾನಿಧಿ ಜಾರಿಮಾಡಿ ರಾಜ್ಯದ ಎಲ್ಲ ರೈತ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇವೆಲ್ಲವೂ ಸಹ ರೈತಪರ ಯೋಜನೆಗಳಾಗಿದ್ದು, ಈ ಬಾರಿಯು ಸಹ ರೈತರು ಬಿಜೆಪಿ ಮತ ನೀಡಲಿದ್ದಾರೆ. ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಸಾಧಿಸಲಿದೆ ಎಂದರು.

ಸಮಾವೇಶಕ್ಕೆ 3 ಸಾವಿರಕ್ಕೂ ಹೆಚ್ಚು ಮಂದಿ ರೈತರು ಭಾಗವಹಿಸುವ ನಿರೀಕ್ಷೆ ಇದೆ. ಈ ಸಮಾವೇಶಕ್ಕೆ ಜಿಲ್ಲೆಯಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ರೈತ ಮೋರ್ಚಾದ ಕಾರ್ಯಕಾರಿಣಿ ಸದಸ್ಯ ಎಚ್.ಎಂ.ಬಸವಣ್ಣ, ಜಿಲ್ಲಾ ಉಪಾಧ್ಯಕ್ಷ ಕೆಲ್ಲಂಬಳ್ಳಿ ಕೆ.ಎಸ್.ನಾಗರಾಜು, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಸಾಗಡೆ ನಾಗರಾಜಪ್ಪ, ಹನೂರು ಮಂಡಲ ಅಧ್ಯಕ್ಷ ಶಿವಸ್ವಾಮಿ, ಚಾಮರಾಜನಗರ ಗ್ರಾಮಾಂತರ ಮಂಡಲ ಅಧ್ಯಕ್ಷ ಸುಂದರ್, ಗಣೇಶ್ ಹಾಜರಿದ್ದರು.

ಬಿಎಸ್‌ಪಿ ತೊರೆದು ಯಾರೂ ಕಾಂಗ್ರೆಸ್ ಸೇರಿಲ್ಲ: ಸ್ಪಷ್ಟನೆ

ಚಾಮರಾಜನಗರ, ಏ.9– ತಾಲೂಕಿನ ಕೋಡಿಉಗನೆ ಹಾಗೂ ಬೇವಿನತಾಳಪುರದಲ್ಲಿ ಬಿಎಸ್‌ಪಿ ತೊರೆದು ಯಾರೊಬ್ಬರೂ ಕಾಂಗ್ರೆಸ್ ಸೇರ್ಪಡೆಯಾಗಿಲ್ಲ. ಹೀಗಿದ್ದರೂ ಸಹ ಕಾಂಗ್ರೆಸ್ ಮುಖಂಡರು ಕುತಂತ್ರ ರಾಜಕಾರಣ ಮಾಡುತ್ತಿದ್ದಾರೆ ಎಂದು ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್. ನಾಗಯ್ಯ ಹಾಗೂ ಚಾಮರಾಜನಗರ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಹ.ರಾ. ಮಹೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಡಿಉಗನೆ ಹಾಗೂ ಬೇವಿನ ತಾಳಪುರದ ಯುವಕರು ಬಿಎಸ್‌ಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ವರದಿ ಸುಳ್ಳು ಎಂದು ಸ್ಪಷ್ಟನೆ ನೀಡಿದರು.

ನಂತರ ಮುಖಂಡ ಎನ್. ನಾಗಯ್ಯ ಮಾತನಾಡಿ, ಬಿಎಸ್‌ಪಿ ಪಕ್ಷಕ್ಕೆ ಸೇರ್ಪಡೆ ಆಗಬೇಕಾದರೆ 200ರೂ. ಶುಲ್ಕ ನೀಡಿ ರಶೀದಿ ಪಡೆಯಬೇಕು. ಇದು ಪಕ್ಷದ ನಿಯಮ ಆದರೆ, ಬಿಎಸ್‌ಪಿ ತೊರೆದು ಕಾಂಗ್ರೆಸ್ ಸೇರಿದರು ಎಂದು ಅಪಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಮುಖಂಡರು ತಮ್ಮ ಪಕ್ಷಕ್ಕೆ ಸೇರ್ಪಡೆಗೊಂಡವರಲ್ಲಿ ಬಿಎಸ್‌ಪಿ ಸೇರಿರುವ ರಶೀದಿ ಇದ್ದರೆ ಬಹಿರಂಗಪಡಿಸಲಿ, ರಶೀದಿ ಇರುವುದು ನಿಜವಾದರೆ ಪಕ್ಷದ ಅಭ್ಯರ್ಥಿಯನ್ನು ಕಣದಿಂದ ಹಿಂದೆ ಸರಿಸಿ ಕಾಂಗ್ರೆಸ್ ಬೆಂಬಲಿಸುತ್ತೇವೆ. ಇಲ್ಲವಾದರೆ ಶಾಸಕ ಸಿ. ಪುಟ್ಟರಂಗಶೆಟ್ಟಿ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಾಗುವುದು ಎಂದರು. ಬಳಿಕ ಹ.ರಾ, ಮಹೇಶ್ ಮಾತನಾಡಿ, ಕಾಂಗ್ರೆಸ್ ಸೇರಿರುವವರು ಬಿಎಸ್‌ಪಿ ಮುಖಂಡರು ಹಾಗೂ ಕಾರ್ಯಕರ್ತರಲ್ಲ. ಪುಟ್ಟರಂಗಶೆಟ್ಟಿ ಅವರಿಗೆ ಜೈ ಎನ್ನುವವರಿಗೆ ಶಲ್ಯ ಹಾಕಿ ಪಕ್ಷಕ್ಕೆ ಸೇರಿದರು ಎಂದು ಹೇಳಲಾಗಿದೆ. ಇಂತಹ ಅಪಪ್ರಚಾರವನ್ನು ಶಾಸಕರು ಹಾಗೂ ಆ ಪಕ್ಷದ ಮುಖಂಡರು ಬಿಡಬೇಕು ಎಂದರು.

ವಾಟ್ಸಾಪ್‌ನಲ್ಲಿ ಎಂಎಲ್‌ಎ, ಸಿಎಚ್‌ಎಸ್ ಎಂದು ಗ್ರೂಪ್ ಮಾಡಲಾಗಿದೆ. ಇದರಲ್ಲಿ ಬಿಎಸ್‌ಪಿ ಬಗ್ಗೆ ಅಪಪ್ರಚಾರ ಮಾಡಲಾಗಿದೆ. ಶಾಸಕ ಪುಟ್ಟರಂಗಶೆಟ್ಟಿ ಸೋಲಿನ ಭೀತಿಯಿಂದ ಬಿಎಸ್‌ಪಿ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಈ ಬಗ್ಗೆ ಶಾಸಕರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲು ನಿರ್ಧರಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಬ.ಮ. ಕೃಷ್ಣಮೂರ್ತಿ, ಮುಖಂಡರಾದ ಎಸ್.ಪಿ. ಮಹೇಶ್, ಶಿವಣ್ಣ, ಬಾಲರಾಜು ಇದ್ದರು.

ಡಾ.ಬಾಬೂಜಿ ಅವರ 116ನೇ ಜಯಂತಿ ಆಚರಣೆ



ಚಾಮರಾಜನಗರದಲ್ಲಿ ಡಾ.ಬಾಬು ಜಗಜೀವನರಾಂ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ವತಿಯಿಂದ ಹಸಿರುಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬುಜಗಜೀವನರಾಂ ರವರ 116 ನೇ ಜಯಂತಿಯನ್ನು ಆಚರಿಸಲಾಯಿತು.

ಚಾಮರಾಜನಗರ, ಏ.9– ಡಾ.ಬಾಬು ಜಗಜೀವನರಾಂ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ವತಿಯಿಂದ ಹಸಿರುಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬುಜಗಜೀವನರಾಂ ರವರ 116 ನೇ ಜಯಂತಿಯನ್ನು ಆಚರಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಖ್ಯ ಗೇಟ್ ಮುಂಭಾಗದಲ್ಲಿ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕೇಕ್ ಕತ್ತರಿಸಿ ಹಂಚುವ ಮೂಲಕ ಆಚರಿಸಲಾಯಿತು.

ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜ್ ಡಾಬಾಬು ಜಗಜೀವನರಾಂ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಭಾರತದ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಂ ಅವರು ನಿರಂತರವಾಗಿ ಶೋಷಿತರ ಮತ್ತು ದುರ್ಬಲರ ಕಲ್ಯಾಣಕ್ಕಾಗಿ ಶ್ರಮಿಸಿದರು.

ಸ್ವಾತಂತ್ರದ ನಂತರ ದೇಶ ಆಹಾರ ಭದ್ರತೆ ಇಲ್ಲದೇ ಸಂಕಷ್ಟದಲ್ಲಿತ್ತು. ಆ ಸಂದರ್ಭದಲ್ಲಿ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಅನೇಕ ಯೋಜನೆಗಳನ್ನು ಜಾರಿ ಮಾಡಿದರು. ದೇಶದ ಎಲ್ಲ ಜನರಿಗೂ ಸಮರ್ಪಕವಾಗಿ ಆಹಾರ ದೊರೆಯಬೇಕು ಎಂಬ ಉದ್ದೇಶದೊಂದಿಗೆ ಹಸಿರು ಕಾಂತ್ರಿಯ ಹರಿಕಾರರಾದರು. ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ಡಾ.ಬಾಬು ಜಗಜೀವನರಾಮ್‌ರವರ ಜನ್ಮ ದಿನದ ಪ್ರಯುಕ್ತ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್‌ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ನಗರಸಭಾ ಸದಸ್ಯ ಮಹದೇವಯ್ಯ, ಟ್ರಸ್ಟ್ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಶಿವಣ್ಣ ಗೌರವ ಅಧ್ಯಕ್ಷ ಸಿ.ಚೆನ್ನಬಸವಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಅರಕಲವಾಡಿ ಮಹದೇವಯ್ಯ, ಮೂಡಳ್ಳಿ ಎಚ್. ಮೂರ್ತಿ, ಮುಖಂಡರಾದ ರಾಚಪ್ಪ, ಎಂ. ರಾಜಣ್ಣ, ಸಿದ್ದಪ್ಪಾಜಿ ಇತರರು ಹಾಜರಿದ್ದರು.

ರಾಷ್ಟ್ರೀಯ ಶಿಶಿಕ್ಷು ಮೇಳ ಮುಂದೂಡಿಕೆ

ಚಾಮರಾಜನಗರ, ಏ.9– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ವತಿಯಿಂದ ಏಪ್ರಿಲ್ 10ರಂದು ನಿಗದಿಪಡಿಸಲಾಗಿದ್ದ ರಾಷ್ಟ್ರೀಯ ಶಿಶಿಕ್ಷು ಮೇಳವನ್ನು ಮುಂದೂಡಲಾಗಿದೆ. ಮೇಳದ ಮುಂದಿನ ದಿನಾಂಕವನ್ನು ತರಬೇತುದಾರರು ಹಾಗೂ ಉದ್ದಿಮೆದಾರರಿಗೆ ತಿಳಿಸಲಾಗುವುದೆಂದು ಜಿಲ್ಲಾ ಶಿಶಿಕ್ಷು ನೋಡಲ್ ಅಧಿಕಾರಿ ಹೆಚ್.ಪಿ. ಶ್ರೀಕಂಠಾರಾಧ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಸಾಧನೆ ನನ್ನ ಗೆಲುವಿಗೆ ಶ್ರೀರಕ್ಷೆ: ಸಿ.ಪುಟ್ಟರಂಗಶೆಟ್ಟಿ

ವಿವಿಧ ಗ್ರಾಮಗಳಲ್ಲಿ ಬಿರುಸಿನ ಮತಯಾಚನೆ



ಚಾಮರಾಜನಗರ, ಏ.9– ಕಾಂಗ್ರೆಸ್ ಸರ್ಕಾರದ ಸಾಧನೆ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ಶಾಸಕ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ಕ್ಷೇತ್ರದ ಉತ್ತುವಳ್ಳಿ, ಮಲ್ಲಯ್ಯನಪುರ, ಯಡಪುರ, ಕಡುವಿನಕಟ್ಟೆ ಹುಂಡಿ ಗ್ರಾಮಗಳಲ್ಲಿ ಮನೆಮನೆಗೆ ತೆರಳಿ ಮತಯಾಚಿಸಿ ಮಾತನಾಡಿದರು.ಕಳೆದ 2013 ರ ಸಿದ್ದರಾಮಯ್ಯ ಅವರ ನೇತೃತ್ವ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಾರಿಯಾದ ಜನಪರ ಕಾರ್ಯಕ್ರಮಗಳು ಇನ್ನೂ ಕೂಡ ಜನಮಾನಸದಲ್ಲಿದೆ. ನಾನು ಮೂರು ಶಾಸಕರಾಗಿ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೋಡಿ ಜನರು ಮತ್ತೊಮ್ಮೆ ನನ್ನನ್ನು ಆಯ್ಕೆ ಮಾಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ಶೇ.40 ರಷ್ಟು ಕಮಿಷನ್ ದಂಧೆ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ, ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆ ಈ ಬಾರಿ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಕನಿಷ್ಠ ವೇತನ ಸಲಹಾ ಸಮಿತಿ ಸದಸ್ಯ ಎಸ್.ಪಿ.ಕೆ. ಉಮೇಶ್, ಜಿಪಂ ಮಾಜಿ ಸದಸ್ಯ ಎಸ್.ಸೋಮನಾಯಕ, ರಮೇಶ್, ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ, ಎಪಿಎಂಸಿ ನಿರ್ದೇಶಕ ಪ್ರದೀಪ್, ಮಹದೇವನಾಯಕ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಶ್ರೀನಿವಾಸನಾಯಕ, ಮುಖಂಡರಾದ ನಾಗವಳ್ಳಿ ನಾಗಯ್ಯ, ದ್ವಾರ್ಕಿ, ನಾಗಣ್ಣೀಗೌಡ, ಮುತ್ತಿಗೆ ದೊರೆ, ಕರಿನಂಜನಪುರ ಸ್ವಾಮಿ, ರವಿಗೌಡ, ಕೋಡಿಮೋಳೆ ಪ್ರಕಾಶ್, ಕಾಂತರಾಜ್, ಪುಟ್ಟಸ್ವಾಮಿಗೌಡ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ಪ್ರಕೃತಿ ಸೌಂದರ್ಯ ಸವಿದ ಮೋದಿ

ಹೊಂದಿಕೊಳ್ಳುವ ವಸ್ತ್ರ ಧರಿಸಿದ್ದು ವಿಶೇಷವಾಗಿತ್ತು ನಂತರ ಹೆಲಿಪ್ಯಾಡ್‌ನಿಂದ ಬಂಡೀಪುರದಲ್ಲಿ ಸುಮಾರು 6ರಿಂದ 7 ಕಿ.ಮೀ. ತೆರಳಿದರು. ಈ ವೇಳೆ ಹುಲಿ ಯೋಜನೆಗೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಹಾಕಲಾಗಿದ್ದ ವಿಶೇಷ ಫಲಕವನ್ನು ವೀಕ್ಷಿಸಿ ಫೋಟೋ ತೆಗೆಸಿಕೊಂಡರು. ನಂತರ ಅಲ್ಲೇ ಇದ್ದ ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಗೌರವ ಸಲ್ಲಿಸಿದರು.

ಬಳಿಕ 7.50ರ ಸುಮಾರಿನಲ್ಲಿ ತೆರೆದ ಜೀಪ್‌ನಲ್ಲಿ (ಬೊಲೆರೊ ಕ್ಯಾಂಪರ್) ಸಫಾರಿಗೆ ತೆರಳಿದ ಅವರು ಎರಡು ಗಂಟೆಗಳ ಕಾಲ ಬಂಡೀಪುರ ಅರಣ್ಯದಲ್ಲಿ ಸಂಚರಿಸಿ, ಅರಣ್ಯ ಸೌಂದರ್ಯ ಸವಿದರು.

ದರ್ಶನ ನೀಡದ ಹುಲಿ: ಎರಡು ಗಂಟೆಗಳ ಅವಧಿಯಲ್ಲಿ ಮೋದಿ ಅವರು, ಅರಣ್ಯದ ಕಚ್ಚಾ ರಸ್ತೆಯಲ್ಲಿ 22 ಕಿ.ಮೀ ಸಂಚರಿಸಿ ಬಂಡೀಪುರದ ಅರಣ್ಯ, ಪ್ರಾಣಿ ಪಕ್ಷಿಗಳನ್ನು ವೀಕ್ಷಿಸಿದರು. ಈ ವೇಳೆ ಆನೆಗಳು, ಜಿಂಕೆಗಳು, ಕಾಟಿಗಳು ಸೇರಿದಂತೆ ಹಲವು ಪ್ರಾಣಿ, ಪಕ್ಷಿಗಳು ಕಂಡು ಪ್ರಧಾನಿ ಖುಷಿಪಟ್ಟರು. ಆದರೆ, ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ಕೀರ್ತಿಗೆ ಪಾತ್ರರಾಗಿರುವ ಬಂಡೀಪುರದಲ್ಲಿ ಪ್ರಧಾನಿಯವರಿಗೆ ಹುಲಿ ದರ್ಶನವಾಗಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸಫಾರಿ ವೇಳೆ ಬಂಡೀಪುರ ಅಭಯಾರಣ್ಯದ ಅತೀ ಎತ್ತರದ ಪ್ರದೇಶ ಬೋಳು ಗುಡ್ಡದಲ್ಲಿರುವ ಕಳ್ಳ ಬೇಟೆ ಶಿಬಿರಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ತೆರಳಿ ಅಭಯಾರಣ್ಯದ ಮಧ್ಯೆ ನಿಂತು ಬೈನಾಕುಲರ್ ಹಿಡಿದು ಕೆಲಹೊತ್ತು ಇಡೀ ಕಾಡನ್ನು ವೀಕ್ಷಣೆ ಮಾಡುವ ಮೂಲಕ ಬಂಡೀಪುರ ಸೌಂದರ್ಯ ಕಂಡು ಪುಳಕಿತರು.

ಬಳಿಕ ಬೆಳಗ್ಗೆ 9.50ರ ಸುಮಾರಿನಲ್ಲಿ ಸಫಾರಿ ಮುಗಿಸಿಕೊಂಡು ಕೆಕ್ಕನಹಳ್ಳ ಚೆಕ್‌ಪೋಸ್ಟ್‌ಗೆ ಬಂದ ಮೋದಿ ಅವರು, ಅಲ್ಲಿಂದ ತಮ್ಮ ವಾಹನದಲ್ಲಿ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ತೆರಳಿದರು.

ಪ್ರಧಾನಿ ಮೋದಿ ಅವರೊಂದಿಗೆ ದೆಹಲಿಯಿಂದ ಬಂದಿದ್ದ ಏಮ್ಸ್ ವೈದ್ಯರ ತಂಡ, ಎಡಿಜಿಪಿ ಅಲೋಕ್ ಕುಮಾರ್, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಎಸ್‌ಪಿ ಪದ್ಮನಿ ಸಾಹು ಸೇರಿದಂತೆ ಜಿಲ್ಲೆಯ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಇಲಾಖೆಯ ವೈದ್ಯರ ತಂಡ, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

ಬಂಡೀಪುರದಿಂದ ತಡವಾಗಿ ಬಂದ ಪ್ರಧಾನಿ

ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ನಡೆದ ಅರಣ್ಯ ಇಲಾಖೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬಳಿಕ 1.45ರ ಸುಮಾರಿಗೆ ಮೈಸೂರಿನಿಂದ ಹೊರಟು, ವಿಶೇಷ ವಿಮಾನದ ಮೂಲಕ ದೆಹಲಿಗೆ ತೆರಳಿದರು.

ಮೋದಿಗಾಗಿ ಕಾತರ: ಪ್ರಧಾನಿ ಮೋದಿ ನೋಡುವ ಅವಕಾಶ ಹೆಚ್ಚಿನ ಜನರಿಗೆ ದೊರೆಯಲಿಲ್ಲ. ಪ್ರಧಾನಿ ಹೆಲಿಕ್ಯಾಪ್ಟರ್‌ನಿಂದ ಬಂದಿಳಿದ ಓವೆಲ್ ಮೈದಾನದ ಬಳಿ ಜನರು ಜಮಾವಣೆಗೊಂಡಿದ್ದರು. ಮೈಸೂರು ವಿವಿ ಫುಟ್ಬಾಲ್ ಮೈದಾನದ ಕಾಂಪೌಂಡ್ ಮೇಲೆ ನಿಂತು ರಸ್ತೆಯಲ್ಲಿ ಸಾಗುತ್ತಿದ್ದ ಮೋದಿಯನ್ನು ವೀಕ್ಷಿಸಿದರು. ಈ ಸ್ಥಳವನ್ನು ಹೊರತು ಪಡಿಸಿದ ಬೇರೆ ಕಡೆ ಪ್ರಧಾನಿ ನೋಡುವ ಅವಕಾಶ ಜನರಿಗೆ ದೊರೆಯಲಿಲ್ಲ. ಬಂದೋಬಸ್ತ್ ಕಾರಣಕ್ಕೆ ಅವರು ಸಾಗುವ ಮಾರ್ಗಗಳನ್ನು ಬಂದ್ ಮಾಡಲಾಗಿತ್ತು.

ಆನೆ ಪಾಲಕರಾದ ಬೊಮ್ಮನ್, ಬೆಳ್ಳಿ ದಂಪತಿ ಭೇಟಿ ಮಾಡಿದ ಮೋದಿ

ಮಾವುತರೊಂದಿಗೆ ಮಾತು: ಬಳಿಕ ಆನೆ ಕ್ಯಾಂಪ್‌ನಲ್ಲಿ ಮಾವುತರಾದ ಕಿರುಮಾರನ್ ಹಾಗೂ ದೇವರಾಜು ಅವರೊಂದಿಗೆ ಸಮಾಲೋಚಿಸಿದರು. ಈ ವೇಳೆ ಮಾವುತರು ಆನೆಗಳ ಪಾಲನೆಯ ಬಗ್ಗೆ ಮಾಹಿತಿ ನೀಡಿದರು.

ಟಿ–23 ಹುಲಿ ಕಾರ್ಯಾಚರಣೆ ಸಿಬ್ಬಂದಿಗಳಿಗೆ ಶ್ಲಾಘನೆ: ಕಳೆದ ಆರು ತಿಂಗಳ ಹಿಂದೆ ಮಧುಮಲೈ ಅರಣ್ಯ ಕಾಡಂಚಿನ ಗ್ರಾಮಗಳ ಉಪಟಳ ನೀಡುತ್ತಿದ್ದ ಟಿ–23 ಸಂಖ್ಯೆಯ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಮುಂಚೂಣಿಯಲ್ಲಿ ಪಾಲ್ಗೊಂಡಿದ್ದ ಮೀನಕಾಳನ್, ಬೊಮ್ಮನ್ ಹಾಗೂ ಕಾಳನ್ ಎಂಬ ಸಿಬ್ಬಂದಿಗಳನ್ನು ಮಾತನಾಡಿ, ಅವರ ಕಾರ್ಯವೈಖರಿ ಬಗ್ಗೆ ಶ್ಲಾಘಿಸಿದರು. ಈ ಮೂವರಿಗೆ ಈಗಾಗಲೇ ಎನ್‌ಟಿಸಿಎ ವತಿಯಿಂದ ತಲಾ ಒಂದು ಲಕ್ಷ ರೂ. ಮೊತ್ತದ ನಗದು ಬಹುಮಾನ ನೀಡಲಾಗಿದೆ.

ಬಟ್ಟೆ ಬದಲಿಸಿದ ಮೋದಿ: ಬಂಡೀಪುರದಲ್ಲಿ ಸಫಾರಿ ನಡೆಸುವಾಗ ಮತ್ತು ಆನೆ ಶಿಬಿರಕ್ಕೆ ಭೇಟಿ ನೀಡಿದ್ದಾಗ ಕ್ಯಾಮಾಫ್ಲೈಸ್ ಧಿರಿಸು ಧರಿಸಿದ್ದ ಪ್ರಧಾನಿ ಮೋದಿ, ಮೈಸೂರಿಗೆ ವಾಪಸ್ಸಾಗುವ ವೇಳೆ ಉಡುಪು ಬದಲಿಸಿದರು. ತೆಪ್ಪಕಾಡು ಬಳಿ ವಿಶ್ರಾಂತಿ ಪಡೆಯಲೆಂದು ಮಾಡಿದ್ದ ರೆಸ್ಟ್ ರೂಮ್‌ನಲ್ಲಿ ಮೋದಿ ಬಿಳಿ ಬಣ್ಣದ ಜುಬ್ಬಾ, ಕುರ್ತಾ, ಕಪ್ಪು ವಾಸ್‌ಕೋಟ್ ಧರಿಸಿದರು. ಬಳಿಕ ಮಸಣಗುಡಿ ಹೆಲಿಪ್ಯಾಡ್‌ನಿಂದ ಹೆಲಿಕಾಪ್ಟರ್ ಮೂಲಕ ಮೈಸೂರು ವಿವಿಯ ಓವೆಲ್ ಮೈದಾನದ ಹೆಲಿಪ್ಯಾಡ್‌ಗೆ ಬಂದಿಳಿದರು.


> ನಮ್ಮಿಬ್ಬರ ಹೆಗಲ ಮೇಲೆ ಪ್ರಧಾನಮಂತ್ರಿಗಳು ಕೈ ಹಾಕಿದ್ದು ನಮಗೆ ಬಹಳ ಖುಷಿ ತರಿಸಿತು. ದೇಶದ ಪ್ರಧಾನಿಯೊಬ್ಬರು ತಮ್ಮ ಬಳಿಗೆ ಕಾಡಿಗೆ ಬಂದು ಕಾಡು ಕುರುಬರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ನಮ್ಮನ್ನು ಅಭಿನಂದಿಸಿದ್ದು ನಮಗೆ ಹೇಳಿಕೊಳ್ಳಲು ಆಗದಷ್ಟು ಖುಷಿ ತರಿಸಿದೆ. ನಮ್ಮ ಜನರಿಗೆ ವಾಸ ಮಾಡಲು ಒಳ್ಳೆಯ ಮನೆ ಬೇಕು. ಶಾಲಾ ಮಕ್ಕಳಿಗೆ ಲ್ಯಾಪ್‌ಟಾಪ್ ಕೊಡುವಂತೆ ಒಳ್ಳೆಯ ವಿದ್ಯಾಭ್ಯಾಸ ಕೊಡುವಂತೆ ಮನವಿ ಮಾಡಿಕೊಂಡೆವು. ಇದಕ್ಕೆ ಪ್ರಧಾನಿಗಳು ಆಯಿತು ಎಂದರು.
> -ಬೆಳ್ಳಿ, ಬೊಮ್ಮ ದಂಪತಿ, ಅಭಿನಂದನೆಗೊಳಗಾದವರು.

ಮೋದಿಯನ್ನು ಹೀರೋ ಎಂದು ಬಣ್ಣಿಸಿದ ಕೆವಿನ್



ಆರ್‌ಸಿಬಿ ಮಾಜಿ ಆಟಗಾರ, ಇಂಗ್ಲೆಂಡ್‌ನ ಕೆವಿನ್ ಪೀಟರ್ಸನ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆದು ಸಾಗುತ್ತಿರುವ ಪ್ರಧಾನಿ ಮೋದಿ ಅವರ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡು 'ಹೀರೋ', 'ವಿಶ್ವನಾಯಕ' ಎಂದು ಬಣ್ಣಿಸಿದ್ದಾರೆ. 'ಕಾಡು ಪ್ರಾಣಿಗಳನ್ನು ಆರಾಧಿಸುವ ವಿಶ್ವ ನಾಯಕ ಮತ್ತು ಅವುಗಳ ನೈಸರ್ಗಿಕ ಆವಾಸ ಸ್ಥಾನದಲ್ಲಿ ಸಮಯ ಕಳೆಯುವಾಗ ತುಂಬಾ ಉತ್ಸುಕನಾಗಿದ್ದಾರೆ. ಅವರ ಕಳೆದ ಜನ್ಮದಿನದಂದು ಚಿರತೆಗಳನ್ನು ಕಾಡಿನಲ್ಲಿ ಬಿಡುಗಡೆ ಮಾಡಿದರು. ಹೀರೋ ನರೇಂದ್ರ ಮೋದಿ' ಎಂದು ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿ ಕ್ಯಾಮೆರಾ ಕಣ್ಣಿನಲ್ಲಿ ವನ್ಯಮೃಗಗಳು



ತೇಲಿದ ದೋಣಿ ಕಾದಂಬರಿ ಬಿಡುಗಡೆ

ಕೆಟ್ಟ ಧಾರಾವಾಹಿಗಳು ಕಾದಂಬರಿ ಓದುವ ಸಂಸ್ಕೃತಿ ಮೆಟ್ಟಿ ಮುನ್ನೆಲೆಗೆ ಬಂದಿವೆ

ಹೃದ್ರೋಗ ತಜ್ಞೆ ಡಾ.ವಿಜಯಲಕ್ಷ್ಮೀ ಐ.ಬಾಳೇಕುಂದ್ರಿ ಬೇಸರ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಭಾನುವಾರ ಡಾ.ಟಿ.ಪಿ.ಸತೀಶ್ ಅವರ 'ತೇಲಿದ ದೋಣಿ' ಕಾದಂಬರಿ ಬಿಡುಗಡೆ ಮಾಡಲಾಯಿತು.

ಮೈಸೂರು,ಏ.9(ಪಿಎಂ)– ಒಂದು ಕಾಲದಲ್ಲಿ ಕಾದಂಬರಿ ಓದುವುದರಲ್ಲಿ ಜನ ಮುಳುಗುತ್ತಿದ್ದರು. ಆದರೆ ಇಂದು ಕೆಟ್ಟ ಧಾರಾವಾಹಿಗಳು ಕಾದಂಬರಿ ಓದುವ ಸಂಸ್ಕೃತಿಯನ್ನು ಮೆಟ್ಟಿ ಮುನ್ನೆಲೆಗೆ ಬಂದಿವೆ ಎಂದು ಹೃದ್ರೋಗ ತಜ್ಞೆ ಡಾ.ವಿಜಯಲಕ್ಷ್ಮೀ ಐ.ಬಾಳೇಕುಂದ್ರಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸೀತಾ ಸತೀಶ್ (ಡಾ.ಟಿ.ಪಿ.ಸತೀಶ್) ಅವರ 'ತೇಲಿದ ದೋಣಿ' ಕಾದಂಬರಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕನ್ನಡದ ಪ್ರಥಮ ಕಾದಂಬರಿ. ಒಂದು ಕಾಲದಲ್ಲಿ ಕಾದಂಬರಿ ಓದುವುದೇ ಒಂದು ರೋಚಕ ಸಂಗತಿಯಾಗಿತ್ತು. ಆದರೆ ಇಂದು ಕೆಟ್ಟ ಧಾರಾವಾಹಿಗಳು ಕಾದಂಬರಿ ಸಂಸ್ಕೃತಿಯನ್ನು ಮೆಟ್ಟಿ ಮೇಲಕ್ಕೆ ಬಂದಿವೆ. ಮಹಿಳೆಯರ ಸಿಟ್ಟು, ಸೊಕ್ಕು, ಸೇಡು ತೋರಿಸುವ ಧಾರಾವಾಹಿಗಳು ಮುಗಿಯುವುದೇ ಇಲ್ಲ. ಇಂತಹ ಕೆಟ್ಟ ಧಾರಾವಾಹಿಗಳಿಂದ ಸಮಾಜದಲ್ಲಿ ಬೆಂಕಿ ಹತ್ತಿ ಉರಿಯುವಂತಾಗಿದೆ. ಸಿಟ್ಟು, ಸೊಕ್ಕು, ಸೇಡು ತೋರಿಸಿ ಮನಸ್ಸನ್ನು ವಿಕಾರಗೊಳಿಸುವಂತಹ ಕೆಟ್ಟ ಧಾರಾವಾಹಿಗಳನ್ನು ನೋಡುವುದನ್ನು ಬಿಟ್ಟು ಸಾಕಷ್ಟು ಜನ ಇಲ್ಲಿ ಸೇರಿರುವುದು ಸಂತಸದ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.

ಸಂಸಾರ ಸಾಗರದಲ್ಲಿ ಮುಳುಗಿ ಹೋಗುವವರೇ ಹೆಚ್ಚು. ಹೀಗೆ ಮುಳುಗದೇ ಬದುಕಬೇಕೆಂಬ ಸಂದೇಶವನ್ನು 'ತೇಲಿದ ದೋಣಿ' ನೀಡುತ್ತದೆ. ಈ ಕಾದಂಬರಿಯಲ್ಲಿ ನಾಯಕ–ನಾಯಕಿ ಇಬ್ಬರೂ ಕಾಯಿಲೆಯಿಂದ ಬಳಲುತ್ತಿದ್ದರೂ ಧೈರ್ಯವಾಗಿ ಬದುಕುತ್ತಾರೆ. ಎಷ್ಟೋ ಜನ ಯಾವುದೇ ರೀತಿಯ ಕಾಯಿಲೆ ಬಂತೆಂದರೆ ಮಾನಸಿಕವಾಗಿ ಕುಗ್ಗುತ್ತಾರೆ. ಎಷ್ಟೇ ಕಾಯಿಲೆ ದೇಹಕ್ಕೆ ಬಂದರೂ ಮನಸ್ಸನ್ನು ಗಟ್ಟಿಯಾಗಿ ಇಟ್ಟುಕೊಳ್ಳಬೇಕೆಂಬ ಸಂದೇಶ ನೀಡುವ ಈ ಕಾದಂಬರಿ, ನಕಾರಾತ್ಮಕ ಚಿಂತನೆ ತೊಡೆದು ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳುವುದು ಎಷ್ಟು ಮುಖ್ಯ ಎಂಬುದನ್ನು ಅನಾವರಣ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾನು ಕೆನಾಡದಲ್ಲಿ ಹೃದ್ರೋಗ ಸಂಬಂಧ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿದಾಗ, ಭಾರೀ ಪ್ರಶಂಸೆ ವ್ಯಕ್ತವಾಗಿತ್ತು. ಇದರಿಂದ ಸಂತಸಗೊಂಡ ನಾನು, ನಮ್ಮ ಅಪ್ಪನಿಗೆ ಕರೆ ಮಾಡಿ ಈ ಸಂತಸದ ಸುದ್ದಿ ಹಂಚಿಕೊಂಡೆ. ಅದಕ್ಕವರು ಅದರಿಂದ ನಮ್ಮ ದೇಶದ ಜನತೆಗೇನು ಪ್ರಯೋಜನ ಎಂದು ಪ್ರಶ್ನಿಸಿದರಲ್ಲದೆ, ಕನ್ನಡದಲ್ಲಿ ಮಾತನಾಡಬೇಕು. ಕನ್ನಡದಲ್ಲಿ ಬರೆಯ ಬೇಕು. ನಿನ್ನ ವಿಚಾರ–ಜ್ಞಾನ ನಮ್ಮ ಜನತೆಗೆ ತಲುಪಬೇಕು ಎಂದಿದ್ದರು. ಹಾಗಾಗಿ ನಾನು ವೃತ್ತಿಯಲ್ಲಿ ವೈದ್ಯೆಯಾದರೂ ಪ್ರವೃತ್ತಿಯಲ್ಲಿ ಲೇಖಕಿಯಾಗಲು ಪ್ರೇರಣೆ ಸಿಕ್ಕಿತು ಎಂದು ಹೇಳಿದರು.

ಯಾವುದೇ ಒಳ್ಳೆಯ ಕಾರ್ಯಕ್ರಮಕ್ಕೆ ಜನ ಕಡಿಮೆ ಇದ್ದರೆ ಅದಕ್ಕೆ ಬೇಸರ ಮಾಡಿಕೊಳ್ಳುವ ಅಗತ್ಯವಿಲ್ಲ. ಒಮ್ಮೆ ದ.ರಾ.ಬೇಂದ್ರೆಯವರು ಮಾಧ್ಯಮದವರಿಗೆ ನೀಡಿದ್ದ ಪ್ರಕ್ರಿಯೆ ಈಗ ನೆನಪಿಸಿಕೊಳ್ಳುವುದು ಸೂಕ್ತ. ದ.ರಾ.ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಸಂದ ಪ್ರಯುಕ್ತ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಬೇಕೆಂದೇ ಮಾಧ್ಯಮದವರು, ನಿಮಗೆ ಎಷ್ಟು ದೊಡ್ಡ ಪ್ರಶಸ್ತಿ ಬಂದ ಹಿನ್ನೆಲೆಯಲ್ಲಿ ಸನ್ಮಾನ ಮಾಡಲಾಗುತ್ತಿದೆ. ಆದರೆ ಇಲ್ಲಿ ಜನರೇ ಇಲ್ಲವಲ್ಲ ಎಂದಿದ್ದರು. ಅದಕ್ಕೆ ಬೇಂದ್ರೆ ಅವರು, ಎಷ್ಟು ಲಕ್ಷ ಜನ ಬಂದಿದ್ದಾರೆ ಎಂಬುದು ಮುಖ್ಯವಲ್ಲ ಎಷ್ಟು ಜನ ಲಕ್ಷ್ಯ ಕೊಟ್ಟು ಕೇಳುತ್ತಾರೆ ಎಂಬುದೇ ಮುಖ್ಯ ಎಂದು ದಿಟ್ಟ ಉತ್ತರ ಕೊಟ್ಟಿದ್ದರು ಎಂದು ಸ್ಮರಿಸಿದರು.

ಕಾದಂಬರಿ ಕುರಿತು ಮಾತನಾಡಿದ ಅಂಕಣಕಾರ ಜಿ.ಎಲ್.ತ್ರಿಪುರಾಂತಕ, 470 ಪುಟಗಳನ್ನು ಹೊಂದಿರುವ ಈ ಕಾದಂಬರಿಯು ಸಿನಿಮಾ ಅಥವಾ ಧಾರಾವಾಹಿಗೆ ಅಗತ್ಯವಿರುವ ಕಥಾಹಂದರ ಒಳಗೊಂಡಿದೆ. ಇದೊಂದು ಜ್ಞಾನ ಭಂಡಾರ. ಇಲ್ಲಿ ಪ್ರೇಮ, ವಿಜ್ಞಾನ, ಮನೋವಿಜ್ಞಾನ ಪ್ರಮುಖವಾಗಿ ತೆರೆದುಕೊಳ್ಳಲಿವೆ. ಇದೊಂದು ವಿಭಿನ್ನ ಪ್ರಯೋಗದಲ್ಲಿ ಮೂಡಿಬಂದಿರುವ ಕೃತಿ ಎಂದು ತಿಳಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ವೈದ್ಯ ಡಾ.ಗುರು ಬಸವರಾಜು, ಕೃತಿಕರ್ತೃ ಡಾ.ಟಿ.ಪಿ. ಸತೀಶ್, ಪ್ರಕಾಶಕ ಡಿ.ಎನ್. ಲೋಕಪ್ಪ ಮತ್ತಿತರರು ಹಾಜರಿದ್ದರು.

> **ಪುಸ್ತಕ ಪ್ರಕಾಶನ ಉದ್ಯಮ ಸಂಕಷ್ಟದಲ್ಲಿದೆ...**
> ಪುಸ್ತಕ ಪ್ರಕಾಶನ ಉದ್ಯಮ ಇಂದು ಸಂಕಷ್ಟ ಸ್ಥಿತಿಯಲ್ಲಿದ್ದು, ಇತ್ತೀಚಿನ ದಿನಗಳಲ್ಲಿ ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗಿದೆ. ಜೊತೆಗೆ ಸರ್ಕಾರದಿಂದಲೂ ಸಮರ್ಪಕ ಉತ್ತೇಜನ ದೊರೆಯುತ್ತಿಲ್ಲ. ಸುಮಾರು 40 ವರ್ಷಗಳಿಂದ ಆಯ್ದ ಪುಸ್ತಕಗಳನ್ನು ಪ್ರಕಾಶಕರಿಂದ ಸಗಟು ಖರೀದಿ ಮಾಡುವ ಯೋಜನೆ ಸರ್ಕಾರದಲ್ಲಿದೆ. ಆದರೆ ಈ ವರ್ಷ ಸದರಿ ಯೋಜನೆಯಡಿ ಸರ್ಕಾರ ಪುಸ್ತಕ ಖರೀದಿಗೆ ಆದೇಶವನ್ನೇ ಮಾಡಿಲ್ಲ. ಆಯ್ಕೆ ಸಮಿತಿಯು 21 ಪುಸ್ತಕಗಳನ್ನು ಖರೀದಿಸಲು ಶಿಫಾರಸ್ಸು ಮಾಡಿದ್ದರೂ ಸರ್ಕಾರ ಕ್ರಮ ಕೈಗೊಳ್ಳಲಿಲ್ಲ.
> -ಡಿ.ಎನ್.ಲೋಕಪ್ಪ, ಪ್ರಕಾಶಕರು



ಹಾರ್ಟ್‌ಫುಲ್‌ನೆಸ್ ಇನ್‌ಸ್ಟಿಟ್ಯೂಟ್, ಶ್ರೀ ರಾಮಚಂದ್ರ ಮಿಷನ್ ಮತ್ತು ಸಂಸ್ಕೃತಿ ಸಚಿವಾಲಯದ ಆಶ್ರಯದಲ್ಲಿ ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ಗುಜರಾತಿ ಸಮಾಜ ಭವನದಲ್ಲಿ 'ಹರ್ ದಿಲ್ ಧ್ಯಾನ್, ಹರ್ ದಿನ್ ಧ್ಯಾನ್' ಯೋಗ ಮಹೋತ್ಸವದ ಅಂಗವಾಗಿ 3 ದಿನಗಳ ಕಾಲ ಉಚಿತ ಯೋಗ–ಸ್ವಾಸ್ಥ್ಯ ತರಬೇತಿ ಕಾರ್ಯಕ್ರಮ ನಡೆಯಿತು. ಉಪ ಮೇಯರ್ ಡಾ. ಜಿ. ರೂಪಾ, ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಸ್ಥಾಪಕ ಜೈಪ್ರಕಾಶ್, ಗುಜರಾತಿ ಸಮಾಜದ ಉಪಾಧ್ಯಕ್ಷ ಮೇಹುಲ್ ಜೆ. ಪಟೇಲ್, ಸತ್ಯನಾರಾಯಣ, ಕಮಲಾ ಸುಬ್ರಮಣಿ, ಲಲಿತಾ ಸುಮಂತ್ ಸೇರಿದಂತೆ ಹಲವರು ಭಾಗವಹಿಸಿದ್ದರು. ನೂರಾರು ಮಂದಿ ಈ ಕಾರ್ಯಕ್ರಮದ ಪ್ರಯೋಜನ ಪಡೆದರು.

ಧ್ರುವನಾರಾಯಣ್ ನಿಧನದ ನಂತರ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಬಿ.ಎನ್. ಚಂದ್ರಪ್ಪ ನೇಮಕ



ಬೆಂಗಳೂರು: ಮೇ 10 ರಂದು ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪರಿಶಿಷ್ಟ ಎಡ ಸಮುದಾಯದ ಒಲೈಸುವ ನಿಟ್ಟಿನಲ್ಲಿ ಚಿತ್ರದುರ್ಗದ ಮಾಜಿ ಲೋಕಸಭಾ ಸದಸ್ಯ ಬಿಎನ್ ಚಂದ್ರಪ್ಪ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಕಾಂಗ್ರೆಸ್ ನೇಮಕ ಮಾಡಿದೆ.

ಕೆಪಿಸಿಸಿಯಲ್ಲಿ ಎಡ ಸಮುದಾಯದ ದಲಿತ ಮುಖಂಡರು ಇಲ್ಲದಿರುವುದನ್ನು ಪರಿಗಣಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಈ ಕ್ರಮ ಕೈಗೊಂಡಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್. ಧ್ರುವನಾರಾಯಣ್ ನಿಧನದ ನಂತರ ಕೂಡಲೇ ಜಾರಿಗೆ ಬರುವಂತೆ ಚಂದ್ರಪ್ಪ ನೇಮಕದ ನಿರ್ಧಾರ ಕೈಗೊಳ್ಳಲಾಗಿದೆ.

ವಾಸ್ತವವಾಗಿ ಚಂದ್ರಪ್ಪ ಕೂಡಾ ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪಾವಗಡದಿಂದ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಬಯಸಿದ್ದಾರೆ. ಇವರು 2014 –2019ರವರೆಗೂ ಲೋಕಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೇ ಸಂಸತ್ತಿನ ರಾಸಾಯನಿಕ ಮತ್ತು ರಸಗೊಬ್ಬರದ ಸ್ಥಾಯಿ ಸಮಿತಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಮೂಲತಃ ಚಿಕ್ಕಮಗಳೂರು ಜಿಲ್ಲೆಯವರಾದ ಚಂದ್ರಪ್ಪ ಎಂಬತ್ತರ ದಶಕದಲ್ಲಿ ಹಿಂದಿನ ಜಿಲ್ಲಾ ಪರಿಷತ್ತಿಗೆ ಆಯ್ಕೆಯಾಗಿದ್ದರು. ಮಲ್ಲಿಕಾರ್ಜುನ ಖರ್ಗೆಯವರಂತೆ ಚಂದ್ರಪ್ಪ ಕೂಡ ರಾಜ್ಯದ ಚರ್ಮೋದ್ಯಮದ ಅಂಗಸಂಸ್ಥೆಯಾದ ಲಿಡ್ಕರ್‌ನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು.

ಕಾಂಗ್ರೆಸ್ ವಿರುದ್ಧ ಸ್ವಾಭಿಮಾನಿ ಕಹಳೆ ಮೊಳಗಿಸಿದ ವೈಎಸ್‌ವಿ ದತ್ತಾ

ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ




ಚಿಕ್ಕಮಗಳೂರು: ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ನಂತರ ಪಕ್ಷದ ವಿರುದ್ಧ ಸ್ವಾಭಿಮಾನಿ ಕಹಳೆ ಮೊಳಗಿಸಿದ ಕಡೂರು ಮಾಜಿ ಶಾಸಕ ವೈಎಸ್‌ವಿ ದತ್ತಾ ಅವರು, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಭಾನುವಾರ ಘೋಷಿಸಿದ್ದಾರೆ. ಇತ್ತೀಚೆಗಷ್ಟೇ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದ ದತ್ತಾ ಅವರಿಗೆ ಟಿಕೆಟ್ ಕೈತಪ್ಪಿದ್ದರಿಂದ ಇಂದು ಕಡೂರಿನಲ್ಲಿ ಸ್ವಾಭಿಮಾನಿ ಸಮಾವೇಶ ನಡೆಸಿ, ತಮ್ಮ ಅಭಿಮಾನಿಗಳ ಜೊತೆ ಚರ್ಚಿಸಿದರು.

ಅಭಿಮಾನಿಗಳ ಅಭಿಪ್ರಾಯದಂತೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದು, ಟವಲ್ ಗುರುತಿನಿಂದ ಸ್ಪರ್ಧೆ ಮಾಡುವುದಾಗಿ ವೈಎಸ್ ವಿ ದತ್ತಾ ಅವರು ಹೇಳಿದ್ದಾರೆ. ಈ ಮೂಲಕ ಕಾಂಗ್ರೆಸ್ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದಾರೆ.

ಇಂದು ಕಡೂರಿನ ಲಕ್ಷ್ಮೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಸ್ವಾಭಿಮಾನಿ ಸಮಾವೇಶದಲ್ಲಿ ಚುನಾವಣಾ ಸ್ಪರ್ಧೆ ಬಗ್ಗೆ ಅಭಿಮಾನಿಗಳ ಸಮ್ಮುಖದಲ್ಲಿ ಕಡೂರು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಣೆ ಮಾಡಿದರು. ಅಲ್ಲದೇ ಚುನಾವಣಾ ಖರ್ಚಿಗೆ ಹಣ ಸಂಗ್ರಹಕ್ಕೆ ಮುಂದಾಗಿದ್ದು, ಸಮಾವೇಶದಲ್ಲೇ ಟವಲ್ ಹಾಸಿ ಹಣ ಸಂಗ್ರಹಿಸಿದರು.


ಈ ವೇಳೆ ಮಾತನಾಡಿದ ದತ್ತಾ, ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದು ಮುಗಿದ ಕಥೆ. ಹಣ ಮತ್ತು ಜಾತಿ ಮೇಲೆ ಅಭ್ಯರ್ಥಿ ಆಯ್ಕೆ ಮಾಡುತ್ತಾರೆ. ಜಾತಿ ಬಲವಿಲ್ಲ, ಮೈ ತುಂಬಾ ಸಾಲ ಮಾಡಿದವನು ನಾನು. ನನಗೆ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದ್ರೆ ಕಡೂರು ಬಿಜೆಪಿ ಕಚೇರಿ ಮುಂದೆ ಪಟಾಕಿ ಹೊಡೆದರು. ಇದರ ಇಂದಿನ ಅರ್ಥ ಕ್ಷೇತ್ರದ ಜನತೆಗೆ ಅರ್ಥವಾಗಿದೆ ಎಂದು ಭಾವನಾತ್ಮಕವಾಗಿ ಮಾತನಾಡಿದರು.



ಕೆಎಂಎಫ್–ಅಮುಲ್ ವಿಲೀನವಿಲ್ಲ, ವದಂತಿಗಳಿಗೆ ಕಿವಿಗೊಡಬೇಡಿ: ಕೆಎಂಎಫ್ ಎಂಡಿ ಬಿ.ಸಿ. ಸತೀಶ್

ಬೆಂಗಳೂರು: ಕರ್ನಾಟಕದ ಕೆಎಂಎಫ್ ಮತ್ತು ಗುಜರಾತ್‌ನ ಅಮುಲ್ ಸಂಸ್ಥೆಗಳ ವಿಲೀನವಿಲ್ಲ. ವದಂತಿಗಳಿಗೆ ಕಿವಿಗೊಡಬೇಡಿ ಎಂದು ಕೆಎಂಎಫ್ ಎಂಡಿ ಬಿ.ಸಿ. ಸತೀಶ್ ಸ್ಪಷ್ಟನೆ ನೀಡಿದ್ದಾರೆ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಲವು ದೇಶದ ಎರಡನೇ ಅತಿ ದೊಡ್ಡ ಸರ್ಕಾರಿ ಹಾಲು ಮಹಾಮಂಡಲ ಸಂಸ್ಥೆಯಾಗಿದ್ದು, 26 ಲಕ್ಷ ರೈತ ಕುಟುಂಬ ಹಾಗೂ ಕೋಟ್ಯಂತರ ಗ್ರಾಹಕರಿಂದ ಗಟ್ಟಿಯಾಗಿ ನೆಲೆಯೂರಿದ್ದು, ಮತ್ತೊಂದು ಸಹಕಾರ ಮಂಡಲದೊಂದಿಗೆ ವಿಲೀನ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಯಾರೂ ಆತಂಕ ಪಡುವಂತಿಲ್ಲ ಎಂದು ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ತಿಳಿಸಿದ್ದಾರೆ.



ನಂದಿನಿ ಬ್ರ್ಯಾಂಡ್ ಬಗ್ಗೆ ಹರಿದಾಡುತ್ತಿರುವ ವದಂತಿಗಳ ಕುರಿತು ಸ್ಪಷ್ಟನೆ ನೀಡಿದ ಅವರು ಗ್ರಾಮೀಣ ರೈತರಿಂದ ಪ್ರತಿ ದಿನ ಸರಾಸರಿ 85 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸಿ ಸುಮಾರು 160ಕ್ಕೂ ಹೆಚ್ಚು ವಿವಿಧ ನಂದಿನಿ ಮತ್ತು ಹಾಲಿನ ಉತ್ಪನ್ನಗಳನ್ನು ರಾಜ್ಯದ ಜನತೆಗೆ ನಾಲ್ಕು ವರ್ಷಗಳಿಂದಲೂ ಒದಗಿಸುತ್ತಾ ಬಂದಿದೆ. ಹಾಲಿನ ಶೇಖರಣೆಯಲ್ಲಿ ಮುಂದಿನ ದಿನಗಳಲ್ಲಿ ಪ್ರತಿನಿತ್ಯ ಒಂದು ಕೋಟಿಗೂ ಹೆಚ್ಚು ಲೀಟರ್ ಸಂಗ್ರಹಿಸುವ ಗುರಿ ಹೊಂದಲಾಗಿದೆ.ಕಳೆದ ಐದು ವರ್ಷಗಳ ಅವಧಿಯಲ್ಲಿ ಹಾಲಿನ ಸರಾಸರಿ ಶೇಖರಣೆ ಶೇ. 6ರಿಂದ ಶೇ. 7ರಷ್ಟು ಪ್ರಗತಿಯಲ್ಲಿದೆ. ಮಾರಾಟದಲ್ಲಿ ಶೇ. 25ರಷ್ಟು ಅಭಿವೃದ್ಧಿ ಸಾಧಿಸುತ್ತಾ ಬಂದಿದೆ. ದೇಶದ ವಿವಿಧ ರಾಜ್ಯಗಳಿಗೂ ತನ್ನ ಮಾರಾಟ ಜಾಲವನ್ನು ವಿಸ್ತರಿಸುತ್ತಾ ಗ್ರಾಹಕರ ನೆಚ್ಚಿನ ಬ್ರಾಂಡ್ ಆಗಿದ್ದು, ಹೀಗಿರುವಾಗ ನಮಗೆ ವಿಲೀನದ ಆವಶ್ಯಕತೆಯೇ ಇಲ್ಲ. ಗಾಳಿ ಸುದ್ದಿಗಳಿಗೆ ಕಿವಿ ಕೊಡಬೇಡಿ ಎಂದು ಸತೀಶ್ ತಿಳಿಸಿದರು.

ಕೆಎಂಎಫ್ ಹೆಚ್ಚುವರಿಯಾಗಿ ಹಾಲು ಉತ್ಪಾದನೆ ಮಾಡುವುದಕ್ಕಾಗಲಿ, ವ್ಯಾಪಾರ ವೃದ್ಧಿಗಾಗಲೀ ದೇಶದ ಯಾವುದೇ ಸಹಕಾರ ಸಂಸ್ಥೆ ಅಥವಾ ಹಾಲು ಉತ್ಪಾದನಾ ಮಹಾಮಂಡಲದೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ. ಗುಣಮಟ್ಟ ಮತ್ತು ಸ್ಪರ್ಧಾತ್ಮಕ ಬೆಲೆಯ ಮೂಲಕವೇ ಮನೆ ಮಾತಾಗಿರುವ ನಂದಿನಿ ಮತ್ತು ಹಾಲು ಇತರ ಹಾಲಿನ ಬ್ರ್ಯಾಂಡ್‌ಗಳೊಂದಿಗೆ ಪೈಪೋಟಿ ನೀಡುತ್ತಾ ಮಾರುಕಟ್ಟೆಯನ್ನು ವಿಸ್ತರಿಸಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಉತ್ಪನ್ನಗಳು ಮಹಾರಾಷ್ಟ್ರ, ಮುಂಬೈ, ಪುಣೆ, ಸೊಲ್ಲಾಪುರ ದೇಶದ ಮಧ್ಯ ಭಾಗವಾಗಿರುವ ವಿದರ್ಭ, ಹೈದ್ರಾಬಾದ್, ಚೆನ್ನೈ, ಕೇರಳ, ಗೋವಾದಲ್ಲಿ ಪ್ರತಿನಿತ್ಯ ಏಳು ಲಕ್ಷಕ್ಕೂ ಅಕ ಲೀಟರ್ ಹಾಲು ಮತ್ತು ಮೊಸರನ್ನು ಸ್ಥಳೀಯವಾಗಿ ಅಲ್ಲಿನ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ ಎಂದಿದ್ದಾರೆ.

ನಂದಿನಿ ಬ್ರ್ಯಾಂಡ್ ಅನ್ನು ದೇಶವ್ಯಾಪಿ ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ ಮಾರುಕಟ್ಟೆ ವಿಸ್ತೀರ್ಣದ ಬಗ್ಗೆ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. 26 ಲಕ್ಷ ರೈತರು 2 ಲಕ್ಷಕ್ಕೂ ಅಧಿಕ ಕಾರ್ಮಿಕರ ದುಡಿಮೆ, 6 ಕೋಟಿಗೂ ಅಕ ಗ್ರಾಹಕರ ಆರೈಕೆಯಿಂದ ಸಂಸ್ಥೆಯು ದೇಶದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ಹಾಲು ಉತ್ಪಾದನಾ ಸಂಸ್ಥೆಯಾಗಿ ಹೊರಹೊಮ್ಮಿದೆ. ಇಂತಹ ಸಂಸ್ಥೆಯ ಬಗ್ಗೆ ಪ್ರಸ್ತುತದಲ್ಲಿ ಹರಿದಾಡುತ್ತಿರುವ ಸುದ್ದಿಗಳು ಸುಳ್ಳಾಗಿದ್ದು, ಗ್ರಾಹಕರು ಆತಂಕ ಪಡುವ ಆವಶ್ಯಕತೆ ಇಲ್ಲ. ಎಂದಿನಂತೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಖರೀದಿಸಿ ಪ್ರೋತ್ಸಾಹಿಸುವಂತೆ ಜನತೆಯಲ್ಲಿ ಮನವಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಅಮುಲ್ ಜತೆ ನಂದಿನಿ ಉತ್ಪನ್ನಗಳ ತಯಾರಿಕೆ ಇಲ್ಲ: ಸಚಿವ ಎಸ್.ಟಿ.ಸೋಮಶೇಖರ್

ಬೆಂಗಳೂರು: ಅಮುಲ್ ಜತೆ ನಂದಿನಿ ಉತ್ಪನ್ನಗಳನ್ನು ತಯಾರಿಸುವುದೂ ಇಲ್ಲ. ಅಮೂಲ್ ಮತ್ತು ಕೆಎಂಎಫ್ ವಿಲೀನದ ಪ್ರಸ್ತಾಪವೇ ಇಲ್ಲ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ರಾಜಕಾರಣಕ್ಕಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ನಂದಿನಿ, ಅಮುಲ್ ವಿಷಯವನ್ನು ಕೈಗೆತ್ತಿಕೊಂಡಿದ್ದಾರೆ.

ಬೇಸಿಗೆಯಲ್ಲಿ ಹಾಲಿನ ಉತ್ಪಾದನೆ ಕಡಿಮೆ ಆಗಿದೆ. ಇದನ್ನು ಕೊರತೆ ಕಾಲ ಎನ್ನುತ್ತಾರೆ. ಪ್ರತಿ ವರ್ಷವೂ ಬೇಸಿಗೆಯಲ್ಲಿ ಹಾಲು ಉತ್ಪಾದನೆ ಕಡಿಮೆ ಆಗುತ್ತದೆ. ಕರ್ನಾಟಕದಲ್ಲಿ 15 ಹಾಲು ಒಕ್ಕೂಟಗಳಿವೆ. ಎಲ್ಲವೂ ಲಾಭದಲ್ಲಿವೆ. ಕೋವಿಡ್ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಹಾಲಿನ ಪುಡಿಯನ್ನು ಶಾಲಾ ಮಕ್ಕಳಿಗೆ ಉಚಿತವಾಗಿ ಕೊಡಲು ಏರ್ಪಾಡು ಮಾಡಿದ್ದರು. ಮಿಗತೆ ಹಾಲನ್ನು ಕೂಲಿ ಕಾರ್ಮಿಕರಿಗೆ ಉಚಿತವಾಗಿ ಕೊಡಲು ಆದೇಶ ಮಾಡಿದ್ದರು ಎಂದು ಸಚಿವ ಸೋಮಶೇಖರ್ ಹೇಳಿದರು.



ಕೆಎಂಎಫ್‌ನ ನಂದಿನಿ ವಿಶ್ವಾದ್ಯಂತ ವಹಿವಾಟು ಹೊಂದಿದೆ. ಕಳೆದ ವರ್ಷ ಡಿಸೆಂಬರ್ 30ರಂದು ಮಂಡ್ಯ ಜಿಲ್ಲೆ ಮದ್ದೂರಿನ ಗೆಜ್ಜಲಗೆರೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಂದಿನಿ ಮಾರುಕಟ್ಟೆ ವಿಸ್ತರಣೆ, ತಂತ್ರಜ್ಞಾನ ನೆರವು ಪಡೆಯಲು ಅಮುಲ್ ಜತೆ ಚರ್ಚಿಸಲು ಸಲಹೆ ನೀಡಿದ್ದರು ಎಂದು ಅವರು ತಿಳಿಸಿದರು.

ಅಮುಲ್ ಹಾಲು ಆನ್‌ಲೈನ್‌ನಲ್ಲಿ ರೂ. 57ಕ್ಕೆ ಮಾರಾಟ ಆಗುತ್ತದೆ. ನಾವು ನಂದಿನಿ ಹಾಲು ಲೀಟರ್‌ಗೆ ರೂ. 39ಕ್ಕೆ ಮಾರಾಟ ಮಾಡುತ್ತೇವೆ. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಿಗೆ ಕಳಿಸುತ್ತೇವೆ. ನಂದಿನಿ ಬ್ರ್ಯಾಂಡ್ ಸದೃಢವಾಗಿದ್ದು, ಅದನ್ನು ಅಳಿಸಲು ಅಸಾಧ್ಯ ಗುಜರಾತ್ ಅಮೂಲ್ ಅನ್ನು ಬೆಳೆಸಿದ ಮಾದರಿಯಲ್ಲಿ ನಾವೂ ನಂದಿನಿಯನ್ನು ಬೆಳೆಸಿದರೆ ಇನ್ನಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯ ಎಂದು ವಿವರಿಸಿದರು.

ಕೆಎಂಎಫ್ ಬಗ್ಗೆ ತಿಳಿಯದವರು ಮಾತ್ರ ತಪ್ಪಾಗಿ ಮಾತನಾಡಲು ಸಾಧ್ಯ. ಅಮುಲ್ ಸೇರಿ ಯಾವುದೇ ಉತ್ಪನ್ನಗಳನ್ನು ಎದುರಿಸಲು ನಂದಿನಿ ಉತ್ಪನ್ನಗಳು ಅತ್ಯಂತ ಸಮರ್ಥವಾಗಿವೆ. ಕೆಎಂಎಫ್‌ಗೆ ಅಭದ್ರತೆಯ ಪ್ರಶ್ನೆಯೇ ಇಲ್ಲ. ಎಸ್.ಎಂ.ಕೃಷ್ಣ ಅವರ ಅವಧಿಯಿಂದಲೂ ಕೆಎಂಎಫ್ ಸುಭದ್ರವಾಗಿದೆ ಮತ್ತು ಲಾಭದಲ್ಲಿದೆ. ಹಾಲಿನ ಕೃತಕ ಅಭಾವ ಸೃಷ್ಟಿ ಆಗಿಲ್ಲ. ಚುನಾವಣಾ ರಾಜಕಾರಣಕ್ಕಾಗಿ ಸುಳ್ಳು ವದಂತಿ ಹಬ್ಬಿಸುವ ಕೆಲಸ ಮಾಡಲಾಗುತ್ತಿದೆ ಎಂದು ಸೋಮಶೇಖರ್ ದೂರಿದರು.

ಅಮುಲ್ ದಾಳಿ ಹಿಂದೆ ರಾಜ್ಯದ ಸಣ್ಣ ರೈತರ ಬದುಕನ್ನು ನಾಶಗೊಳಿಸುವ ಹುನ್ನಾರ


ಕಾಂಗ್ರೆಸ್ ಆಕ್ರೋಶ

ಬೆಂಗಳೂರು: ಗುಜರಾತಿನ ಅಮುಲ್ ದಾಳಿ ಹಿಂದೆ ರಾಜ್ಯದ ಸಹಕಾರ ವ್ಯವಸ್ಥೆ, ಸಣ್ಣ ರೈತರ ಬದುಕನ್ನು ನಾಶಗೊಳಿಸುವ ಹುನ್ನಾರ ಅಡಗಿದೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. ಈ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್, ನಂದಿನಿಯಾಗಲಿ, ಅಮುಲ್ ಆಗಲಿ ಎರಡೂ ಕೋ ಆಪರೇಟಿವ್ ತತ್ವದಲ್ಲಿ ಹುಟ್ಟಿದವು ಹಾಗೂ ಅದೇ ತತ್ವದಲ್ಲಿ ಕಾರ್ಯಚರಿಸುತ್ತವೆಯೇ ಹೊರತು ಕಾರ್ಪೊರೇಟ್ ತತ್ವದಲ್ಲಿ ಅಲ್ಲ. ಆದರೆ ಕಾರ್ಪೊರೇಟ್ ಕಂಪೆನಿಯ ರೀತಿ ಅಮುಲ್ ದಾಳಿ ಮಾಡುತ್ತಿರುವ ಹಿಂದೆ ಕರ್ನಾಟಕದ ಕೋ–ಆಪರೇಟಿವ್ ವ್ಯವಸ್ಥೆಯನ್ನು, ಸಣ್ಣ ರೈತರ ಬದುಕನ್ನು ನಾಶಗೊಳಿಸುವ ಹುನ್ನಾರ ಅಡಗಿದೆ ಎಂದು ಆರೋಪಿಸಿದೆ.

ಮತ್ತೊಂದು ಟ್ವೀಟ್ ನಲ್ಲಿ "ನಂದಿನಿ" ಎಂದರೆ ಬರೀ ಹಾಲಲ್ಲ, ರಾಜ್ಯದ ರೈತರ ಬೆವರು, ಬದುಕು, ಭವಿಷ್ಯ. ನಂದಿನಿಯನ್ನು ನಂಬಿ ಬದುಕುವ ಕೋಟ್ಯಂತರ ರೈತರ ಬೆನ್ನಿಗೆ ಚೂರಿ ಹಾಕಲು ಈ ರಾಜ್ಯದ ಮುಖ್ಯಮಂತ್ರಿ ಹೊರಟಿದ್ದಾರೆ. ಬೊಮ್ಮಾಯಿ ಅವರೇ, ನೀವೆಷ್ಟೇ ಗುಲಾಮಗಿರಿ ಮಾಡಿದರೂ ನಿಮಗೆ ಮಣೆ ಹಾಕುವುದಿಲ್ಲ.ರಾಜ್ಯದ ರೈತರ ಹಿತ ಬಲಿ ಕೊಡುತ್ತಿರುವುದು ಅಕ್ಷಮ್ಯ ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ಕಾಂಗ್ರೆಸ್‌ಗೆ ಅಧಿಕಾರ ತಪ್ಪಿಸಲು ಜೆಡಿಎಸ್, ಬಿಜೆಪಿ ಒಳ ಒಪ್ಪಂದ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪ



ತಿ.ನರಸೀಪುರ, ಏ.9– ರಾಜ್ಯದಲ್ಲಿ ಕಾಂಗ್ರೆಸ್‌ಗೆ ಅಧಿಕಾರ ತಪ್ಪಿಸಲು ಈಗಾಗಲೇ ಜೆಡಿಎಸ್, ಬಿಜೆಪಿ ಪಕ್ಷಗಳು ಒಳ ಒಪ್ಪಂದ ಮಾಡಿಕೊಂಡಿವೆ ಎಂದು ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯೂ ಆದ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪಿಸಿದರು.

ತಾಲೂಕಿನ ಸೋಸಲೆ ಗ್ರಾಮದಲ್ಲಿ ನಡೆದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ವಿವಿಧ ಪಕ್ಷಗಳ ಹಲವು ಮುಖಂಡರು ಹಾಗೂ ನೂರಾರು ಯುವಕರನ್ನು ಕಾಂಗ್ರೆಸ್ ಬರಮಾಡಿಕೊಂಡು ಮಾತನಾಡಿದ ಅವರು, ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸೋಲಿಸಲು ಕೈ ಅಭ್ಯರ್ಥಿಗಳು ಪ್ರಾಬಲ್ಯವಿರುವ ಕಡೆ ಪರಸ್ಪರ ಬೆಂಬಲಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಈಗಾಗಲೇ ಮಾತುಕತೆ ನಡೆಸಿದ್ದಾರೆ ಎಂದು ದೂರಿದರು.

ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆ ತರುವ ಬಿಜೆಪಿ ಹುನ್ನಾರ ಅರಿತು ಜನರು ಕೋಮುವಾದಕ್ಕೆ ಕಡಿವಾಣ ಹಾಕಬೇಕು. ಬಿಜೆಪಿ ವಿರುದ್ಧ ವಿಪಕ್ಷಗಳನ್ನು ಸಂಘಟಿಸಿ, ಒಗ್ಗೂಡಿಸಲು ಹಿರಿಯ ಮುತ್ಸದ್ದಿ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ ಅವರ ಕೈಗೆ ಎಐಸಿಸಿ ಸಾರಥ್ಯ ನೀಡಲಾಗಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಕಿತ್ತೊಗೆಯಲು ವಿಧಾನಸಭಾ ಚುನಾವಣೆ ಮುನ್ನುಡಿಯಾಗಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಮಹೇಶ್, ಸೋಮನಾಥಪುರ ಗ್ರಾಪಂ ಉಪಾಧ್ಯಕ್ಷ ಸಿದ್ದಪ್ಪ, ನಿವೃತ್ತ ಶಿಕ್ಷಕರಾದ ವೆಂಕಟರಮಣಸ್ವಾಮಿ, ಚಂದ್ರಶೇಖರಸ್ವಾಮಿ, ರಾಮಣ್ಣ, ಮುಖಂಡ ಸೋಸಲೆ ಮಹದೇವಸ್ವಾಮಿ ಇನ್ನಿತರರು ಮಾತನಾಡಿದರು. ನಂತರ ಎಸ್‌ಕೆಪಿ ಅಗ್ರಹಾರದಲ್ಲಿರುವ ಯುವ ಮುಖಂಡ ಇಂದ್ರೇಶ್ ನಿವಾಸಕ್ಕೆ ತೆರಳಿದ ಮಹದೇವಪ್ಪ ಚುನಾವಣೆಯಲ್ಲಿ ಬೆಂಬಲಿಸುವಂತೆ ಮನವಿ ಮಾಡಿದರು. ಇದೇ ವೇಳೆ ಬಿಜೆಪಿ ಮುಖಂಡ ಪಿಎಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ಜೆಡಿಎಸ್ ಮುಖಂಡ ಪುರಿಬಟ್ಟಿ ಸೋಮಣ್ಣ, ಪುರಸಭೆ ನಾಮಿನಿ ಸದಸ್ಯ ಕೆ.ನಂಜುಂಡಸ್ವಾಮಿ, ಎಂ.ನಾಗರಾಜು ಸೇರಿದಂತೆ ಗ್ರಾಪಂ ಮಾಜಿ ಅಧ್ಯಕ್ಷರಾದ ಸುವರ್ಣ ನಿಂಗಯ್ಯ, ಕಾಂತಮ್ಮ, ಮಾಜಿ ಸದಸ್ಯರಾದ ಮಹದೇವಮ್ಮ, ಶಿವಮ್ಮ, ವಿ.ಓ.ಹುಂಡಿ ಎಸ್.ಕುಮಾರ್, ಗುರುಮಲ್ಲಪ್ಪ, ಅಂಗಡಿ ಪುಟ್ಟಣ್ಣ, ಪುರಿಬಟ್ಟಿ ನಾಗರಾಜು, ತಮ್ಮಯ್ಯ, ದೇವರಾಜು, ಸುಶಾಂತ್, ಸಾಗರ್, ಜಯಣ್ಣ ಕೇಬಲ್ ಮಂಜು, ನಾಗರಾಜು, ಕೆಂಪಸ್ವಾಮಿ ಸಿದ್ದರಾಜು, ನಾಗರಾಜು, ಚಂದ್ರು ಸೇರಿದಂತೆ ಹಲವು ಮುಖಂಡರು ಮತ್ತು ನೂರಾರು ಯುವಕರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಸಭೆಯಲ್ಲಿ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಜಿ.ಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕೆಪಿಸಿಸಿ ಹಿಂ.ವರ್ಗಗಳ ಪ್ರಧಾನ ಕಾರ್ಯದರ್ಶಿ ಉಕ್ಕಲಗೆರೆ ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಮಹಿಳಾ ಅಧ್ಯಕ್ಷೆ ವೀಣಾ ಶಿವಕುಮಾರ್, ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿಯ ಸದಸ್ಯ ಮಹದೇವಸ್ವಾಮಿ, ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ಗ್ರಾಪಂ ಅಧ್ಯಕ್ಷರಾದ ಎಂ.ಮಹೇಶ್, ಡಾ.ಡಿ.ಮಹದೇವ ಸ್ವಾಮಿ, ಮಾಜಿ ಅಧ್ಯಕ್ಷ ಎಸ್.ವಿ.ಮಹೇಶ್ ಕುಮಾರ್, ಸುಂದರ, ಮಾಜಿ ಸದಸ್ಯರಾದ ಎನ್.ನಿಂಗಯ್ಯ, ಸಿದ್ದನಹುಂಡಿ ಸೋಮಣ್ಣ, ಸುರೇಶ್, ಮುಖಂಡರಾದ ಹರೀಶ್, ಬಿ.ಎಸ್.ಮಹೇಶ್, ಗದ್ದೇಮೊಳೆ ಸಿದ್ದರಾಜು, ಉಕ್ಕಲಗೆರೆ ರಾಜು ಇನ್ನಿತರರಿದ್ದರು.

ತಿ.ನರಸೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್, ಜೆಡಿಎಸ್ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದ್ದು, ಇಲ್ಲಿ ಬಿಜೆಪಿ ಸ್ಪರ್ಧಿಸಿದರೂ ಯಾವುದೇ ಪರಿಣಾಮ ಬೀರಲ್ಲ. ಹಿಂದಿನ ಚುನಾವಣೆಯಲ್ಲಿ ಜೆಡಿಎಸ್ ಜೊತೆ ನಮ್ಮವರು ಶಾಮೀಲಾಗಿದ್ದರಿಂದ ನಮಗೆ ಸೋಲಾಯಿತು. ಇದೀಗ 5 ವರ್ಷಗಳ ಬಳಿಕ ಈಗಿನ ಶಾಸಕರ ಕಾರ್ಯ ವೈಖರಿ ಗಮನಿಸಿ, ತಪ್ಪು ಮಾಡಿದ್ದೇವೆ ಎಂದು ವಿಷಾದ ವ್ಯಕ್ತಪಡಿಸುತ್ತಿದ್ದಾರೆ. ಯುವ ಸಮೂಹಕ್ಕೆ ಕೌಶಲ್ಯಾಧರಿತ ಶಿಕ್ಷಣ ನೀಡಲು ನಮ್ಮ ಸರ್ಕಾರದಲ್ಲಿ ಮಂಜೂರಾಗಿದ್ದ ಪಾಲಿಟೆಕ್ನಿಕ್ ಕಾಲೇಜನ್ನು ಈಗಿನ ಶಾಸಕರು ಉಳಿಸಿಕೊಳ್ಳಲಿಲ್ಲ. ನಾವೇ ಕೊಟ್ಟಿದ್ದ ನೂರಾರು ಕೋಟಿ ಅನುದಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗದ ಆತನಿಂದ ಮತ್ತೇನನ್ನೂ ಜನರು ನಿರೀಕ್ಷಿಸಲು ಸಾಧ್ಯವಿಲ್ಲ. ಜಾಗೃತರಾಗಿರುವ ಜನರು ಈ ಬಾರಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ಮೂಲಕ ಬಾಕಿ ಉಳಿದ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಲು ಮತ್ತೆ ನಮ್ಮ ಕೈಗೆ ಅಧಿಕಾರ ನೀಡಬೇಕು.
–ಹೆಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಅಭ್ಯರ್ಥಿ.

ಚುನಾವಣಾ ಪ್ರಚಾರಕ್ಕೆ ಶಾಸಕ ಹೆಚ್‌ಪಿಎಂ ಚಾಲನೆ



ಹುಣಸೂರು, ಏ.9– ತಾಲೂಕಿನ ದೊಡ್ಡ ಹೆಜ್ಜೂರಿನ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ವಿಶೇಷ ಪೂಜೆ ಸಲ್ಲಿಸಿ, ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದ ಶಿಕ್ಷಣ, ನೀರಾವರಿ, ಆರೋಗ್ಯ ಸೇರಿದಂತೆ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಮುಂದೆಯೂ ನಿಮ್ಮ ಸೇವೆ ಮಾಡಲು, ತಾಲೂಕಿನ ಅಭಿವೃದ್ಧಿಗಾಗಿ ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಯಾದ ನನ್ನನ್ನು ಜಯಶೀಲರನ್ನಾಗಿ ಮಾಡಬೇಕೆಂದು ವಿನಂತಿಸಿದರು.

ಈ ವೇಳೆ ದೊಡ್ಡಹೆಜ್ಜೂರು ಗ್ರಾಮದ ಮುಖಂಡ ಅಜ್ಬಲ್ ಪಾಷ ವೈಯಕ್ತಿಕವಾಗಿ 5001 ರೂ.ಗಳನ್ನು ಚುನಾವಣಾ ಖರ್ಚಿಗಾಗಿ ದೇಣಿಗೆ ನೀಡಿದರು. ಈ ಸಂದರ್ಭ ಗ್ರಾಮದ ಹಲವು ಮುಖಂಡರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ಸೋಮಶೇಖರ್, ಹುಣಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಿ. ನಾರಾಯಣ್, ಕಾರ್ಯಾಧ್ಯಕ್ಷ ಬಸವರಾಜಪ್ಪ ಸೇರಿದಂತೆ ದೊಡ್ಡಹೆಜ್ಜೂರು ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಕಾಂಗ್ರೆಸ್‌ಗೆ ಮತ ನೀಡಿ: ಡಾ.ಯತೀಂದ್ರ ಮನವಿ



ನಂಜನಗೂಡು, ಏ.9– ರಾಜ್ಯವನ್ನು ಭ್ರಷ್ಟಾಚಾರದಿಂದ ಮುಕ್ತಿಗೊಳಿಸಲು ಕಾಂಗ್ರೆಸ್‌ಗೆ ಮತ ನೀಡಿ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದರು.

ತಾಲೂಕಿನ ತಾಯೂರು, ವಡ್ಡರಹುಂಡಿ, ಹಾರೋಪುರ, ಸಾಲುಂಡಿ, ಗೆಜ್ಜಗನಹಳ್ಳಿ, ಕಾಹಳ್ಳಿ ಗ್ರಾಮಗಳಲ್ಲಿ ವರುಣಾ ಕ್ಷೇತ್ರದ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಪ್ರಚಾರ ನಡೆಸಿ ಅವರು ಮಾತನಾಡಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಅನ್ನಭಾಗ್ಯ, ಕ್ಷೀರಭಾಗ್ಯ, ಕೃಷಿಭಾಗ್ಯ, ಪಶುಭಾಗ್ಯ, ಮಾತೃಪೂರ್ಣ ಯೋಜನೆಗಳ ಮೂಲಕ ಕೊಟ್ಟಿದ್ದ 165 ಭರವಸೆಗಳನ್ನೂ ಈಡೇರಿಸಿದ್ದಾರೆ. ಅನ್ನಭಾಗ್ಯ ನೀಡಿ ಜನರನ್ನು ಸೋಮಾರಿಗಳನ್ನಾಗಿಸಿದ್ದಾರೆ ಎಂದು ಮತ್ತು ಸಾಲಮನ್ನಾ ಮಾಡಿದ್ದ ವೇಳೆ ಬಿಜೆಪಿಯವರು ಆರ್ಥಿಕ ಹೊರೆ ಹೆಚ್ಚಾಗಿದೆ ಎಂದು ಟೀಕಿಸಿದ್ದರು. ಆದರೆ ಇದೀಗ ಬಿಜೆಪಿ ಸರ್ಕಾರ ಅಂಬಾನಿ, ಅದಾನಿ, ನೀರವ್ ಮೋದಿ ಎಲ್ಲರೂ ಬ್ಯಾಂಕ್‌ಗೆ ವಂಚಿಸಿದ್ದರೂ ಸಹ ಅವರ ಸಾವಿರಾರು ಕೋಟಿ ರೂ. ಸಾಲ ಮನ್ನಾ ಮಾಡಿ ತೆರಿಗೆಯಲ್ಲಿ ಶೇ.10ರಷ್ಟು ಕಡಿತಗೊಳಿಸಿದ್ದಾರೆ. ಬಿಜೆಪಿ ಸರ್ಕಾರ ಬಡವರ ಪರವಾಗಿಲ್ಲ, ಶ್ರೀಮಂತರಪರವಾಗಿದೆ. ಇನ್ನು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪಿಎಚ್‌ಡಿ ವಿದ್ಯಾರ್ಥಿ ವೇತನ ಕಡಿತಗೊಳಿಸಿ, ಎಸ್‌ಇಪಿ ಅನುದಾನವನ್ನೂ ಕಡಿತಗೊಳಿಸಿ ದಲಿತ ವಿರೋಧಿ ನೀತಿ ಅನುಸರಿ ಆ ವರ್ಗಕ್ಕೆ ಅನ್ಯಾಯವೆಸಗುತ್ತಿದೆ. ಅಲ್ಲದೆ ಪಿಎಸ್ಐ ಹಗರಣ, ಮೊಟ್ಟೆಹಗರಣ, ಉಪನ್ಯಾಸಕರ ಹಗರಣ ಮತ್ತು ಮಿತಿ ಮೀರಿದ ಭ್ರಷ್ಟಾಚಾರ, ಬೆಲೆ ಏರಿಕೆಯಿಂದ ಜನರು ಜೀವಿಸುವುದೇ ಕಷ್ಟವಾಗಿದೆ ಎಂದು ಆರೋಪಿಸಿದರು.

ಈ ವೇಳೆ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮಹಿಳಾ ಅಧ್ಯಕ್ಷೆ ಲಲಿತಾಂಬ, ಯುವ ಕಾಂಗ್ರೆಸ್ ಅಧ್ಯಕ್ಷ ಗಿರೀಶ್, ಮಹದೇವಸ್ವಾಮಿ, ಮುಖಂಡರಾದ ರಂಗಸ್ವಾಮಿ, ಬಸವರಾಜು, ರಾಜು, ಜಗದೀಶ್, ಸೋಮಣ್ಣ, ಪ್ರಕಾಶ್, ಕುಮಾರ, ಸಿದ್ದೇಶ್, ಮಹದೇವಪ್ರಸಾದ್, ಅಶೋಕ್, ತಾಯೂರು ಗ್ರಾಪಂ ಅಧ್ಯಕ್ಷ ಬಸವರಾಜು ಸೇರಿದಂತೆ ಇತರರಿದ್ದರು.

ನೂರಾರು ಮುಸ್ಲಿಂ ಮುಖಂಡರು ಜೆಡಿಎಸ್‌ಗೆ ಸೇರ್ಪಡೆ

ಸಮುದಾಯದ ಆಶಯಕ್ಕೆ ಪೂರಕವಾಗಿ ಕೆಲಸ ಮಾಡುವೆ: ಶಾಸಕ ಅಶ್ವಿನ್ ಕುಮಾರ್



ತಿ.ನರಸೀಪುರ, ಏ.9– ಜೆಡಿಎಸ್ ತತ್ವ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಸೇರ್ಪಡೆಗೊಂಡಿರುವ ಮುಸ್ಲಿಂ ಸಮುದಾಯದ ಮುಖಂಡರ ಆಶಯಕ್ಕೆ ಪೂರಕವಾಗಿ ಕೆಲಸ ಮಾಡುತ್ತೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಮುಸ್ಲಿಂ ಬಡಾವಣೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ಮುಸ್ಲಿಂ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮೇಲೆ ನಂಬಿಕೆ ಇಟ್ಟು ರಾಜ್ಯಾದ್ಯಂತ ಮುಸ್ಲಿಂ ಸಮುದಾಯದ ಸಾವಿರಾರು ಮುಖಂಡರು ಜೆಡಿಎಸ್‌ಗೆ ಸೇರ್ಪಡೆಯಾಗುತ್ತಿದ್ದಾರೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಮುಸಲ್ಮಾನರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದ್ದರು. ಈಗ ಸಿ.ಎಂ.ಇಬ್ರಾಹಿಂ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದ್ದಾರೆ. ಅಲ್ಲದೇ ಮೈಸೂರು ಭಾಗದಲ್ಲಿ ಮುಸ್ಲಿಂ ಸಮುದಾಯಕ್ಕೆ ಮೇಯರ್ ಸೇರಿದಂತೆ ಮತ್ತಿತರ ರಾಜಕೀಯ ಸ್ಥಾನಮಾನ ಕಲ್ಪಿಸಿ ಕೊಟ್ಟಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಸಮುದಾಯದವರು ಬೆಂಬಲಿಸಿದ್ದೇ ಆದಲ್ಲಿ ಕುಮಾರಣ್ಣರವರು ನಿಮ್ಮ ಸಮಾಜಕ್ಕೆ ಆದ್ಯತೆ ಮೇರೆಗೆ ಉತ್ತಮ ಯೋಜನೆ ರೂಪಿಸಲು ಸಿದ್ಧತೆ ಕೈಗೊಂಡಿದ್ದಾರೆ. ಹಾಗಾಗಿ ಚುನಾವಣೆಯಲ್ಲಿ ಸಮುದಾಯದವರು ಜೆಡಿಎಸ್ ಬೆಂಬಲಿಸುವ ಮೂಲಕ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಇದಕ್ಕೂ ಮುನ್ನಾ ಶಾಸಕರು ಪಟ್ಟಣದ ಪೇಟೆಗೇರಿ, ಚಿಕ್ಕ ಅಂಗಡಿ ಬೀದಿ, ಕೆನರಾ ಬ್ಯಾಂಕ್ ಹಾಗೂ ಕಡ್ಲೆ ರಂಗಮ್ಮನ ಬೀದಿಗಳಲ್ಲಿ ಪಾದಯಾತ್ರೆ ಮೂಲಕ ಮತದಾರರನ್ನು ಭೇಟಿ ಮಾಡಿ ಮತ ಯಾಚಿಸಿದರು. ಮುಸ್ಲಿಂ ಬಡಾವಣೆಗೆ ಬೈಕ್ ಏರಿ ಬಂದ ಶಾಸಕರಿಗೆ ಪಟಾಕಿ ಸಿಡಿಸಿ, ಪುಷ್ಪ ವೃಷ್ಟಿಗೈದು ಅದ್ದೂರಿಯಾಗಿ ಸ್ವಾಗತ ಕೋರಲಾಯಿತು.

ಈ ವೇಳೆ ಮುಸ್ಲಿಂ ಯುವ ಮುಖಂಡರಾದ ಅಸ್ಗರ್ ರಝಾ, ಕೌಸರ್ ರಝಾ, ಕೈಸರ್ ರಜಾ, ಸಿಕಂದರ್ ಪಾಷ, ಜಾಫರ್ ಸಾದಿಕ್, ಅಬ್ದುಲ್ ರೆಹಮಾನ್, ನಸೀರ್ ಅಹ್ಮದ್, ಅಸ್ಲಂಪಾಷ, ಆಲಂ ಷರೀಫ್, ಕುರ್ರಂ ಷರೀಫ್, ಮಹ್ಮದ್ ಅನೀಫ್, ಸದ್ದಾಂ ಹುಸೇನ್, ಮಹಮ್ಮದ್ ಸಮೀವುಲ್ಲಾ, ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಶಂಭುದೇವನಪುರ ರಮೇಶ್, ವಿಪಿ ಹುಂಡಿ ಸಂತೋಷ್ ಕುಮಾರ್, ಗೋಪಿ ಬೋರೇಗೌಡ, ಕಟ್ಟೇಪುರ ಸಿದ್ದಪ್ಪ, ಬಾಳೆ ಎಲೆ ಕುಮಾರ್, ಅಂದಾನಿ ಗೌಡ, ಮಾವಿನ ಹಳ್ಳಿ ರಾಜೇಶ್, ಸೋಸಲೆ ರಾಜೇಶ್ ಸೇರಿದಂತೆ ಅನೇಕ ಮುಸ್ಲಿಂ ಮುಖಂಡರು ಇದ್ದರು.

ಶರಣ ಸಂಗಮ ಮಠಕ್ಕೆ ಶಾಸಕ ಹರ್ಷವರ್ಧನ್ ಭೇಟಿ



ನಂಜನಗೂಡು, ಏ.9– ನಗರದ ಸುತ್ತ ಮುತ್ತಲ ಗ್ರಾಪಂ ವ್ಯಾಪ್ತಿಯ ಬಡಾವಣೆಗಳನ್ನು ನಗರಸಭೆ ವ್ಯಾಪ್ತಿಗೆ ತರುವ ಮೂಲಕ ಮೂಲ ಸೌಕರ್ಯ ಒದಗಿಸಲು ಅಗತ್ಯ ಅನುದಾನ ಬಿಡುಗಡೆಗೆ ನನ್ನ ಅಧಿಕಾರಾವಧಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ದೇವೀರಮ್ಮನಹಳ್ಳಿ ಬಡಾವಣೆಯ ಶರಣ ಸಂಗಮ ಮಠಕ್ಕೆ ಭಾನುವಾರ ಭೇಟಿ ನೀಡಿ, ಮಠಾಧ್ಯಕ್ಷ ನಾಗರಾಜೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದು ಮಾತನಾಡಿದ ಅವರು, ನಂ.ಗೂಡನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸಿ ದೇವೀರಮ್ಮನಹಳ್ಳಿ ಹಾಗೂ ದೇಬೂರು ಗ್ರಾಪಂ ಬಡಾವಣೆಗಳನ್ನು ನಗರಸಭೆ ವ್ಯಾಪ್ತಿಗೆ ತಂದ ಬಳಿಕ ಸಿಟಿಜನ್ ಶಾಲೆ ಹಿಂಭಾಗದ ರಸ್ತೆ ಹಾಗೂ ಹಂಡುವಿನಹಳ್ಳಿ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಪಡಿಸಿ ಜನರ ಬೇಡಿಕೆ ಸಾಕಾರಗೊಳಿಸಿದ್ದೇನೆ ಎಂದರು.

ನಗರಸಭೆ ಹಾಗೂ ಮುಡಾದಿಂದ ಅನುದಾನ ತರುವ ಮೂಲಕ ಹಲವಾರು ವರ್ಷಗಳಿಂದ ರಸ್ತೆ, ಚರಂಡಿ ಕಾಣದೇ ಇದ್ದ ಹೊಸ ಬಡಾವಣೆಗಳಲ್ಲಿ ಅಭಿವೃದ್ಧಿಗೆ ಒತ್ತು ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಮತ್ತೆ ನಾನು ಶಾಸಕನಾಗುವ ವಿಶ್ವಾಸವಿದ್ದು, ಎಲ್ಲಾ ಬಡಾವಣೆಗಳ ಜನರ ಆಶೋತ್ತರಗಳಿಗೆ ಪೂರಕವಾಗಿ ಅಭಿವೃದ್ಧಿಗೆ ಒತ್ತು ನೀಡುವುದಾಗಿ ಭರವಸೆ ನೀಡಿದರು.

ದೇವಿರಮ್ಮನಹಳ್ಳಿ, ವಿದ್ಯಾನಗರ, ರಾಮಸ್ವಾಮಿ ಲೇಔಟ್, ಜುಬ್ಲಿಯಂಟ್ ಲೇಔಟ್, ತಮ್ಮಡಗೇರಿ, ಮಹದೇಶ್ವರ ಲೇಔಟ್ ಸೇರಿದಂತೆ ಹಲವು ಬಡಾವಣೆಗಳಿಗೆ ತೆರಳಿದ ಶಾಸಕ ಬಿ.ಹರ್ಷವರ್ಧನ್ ಮತಯಾಚಿಸಿದರು.

ಈ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ನಗರಸಭಾ ಸದಸ್ಯರಾದ ಕಪಿಲೇಶ್, ಮಹದೇವ ಪ್ರಸಾದ್, ಮುಖಂಡರಾದ ಜಿ.ಬಸವರಾಜು, ಕೋಮಲ, ನಂದಿನಿ, ಸಂಜಯ್ ಶರ್ಮಾ, ಖಾದಿ ಗ್ರಾಮದ್ಯೋಗ ಮಂಡಳಿ ನಿಗಮದ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ ಸೇರಿದಂತೆ ಕಾರ್ಯಕರ್ತರು ಇದ್ದರು.

ಬಿಜೆಪಿ ಸರ್ಕಾರದಿಂದ ರಾಜ್ಯ ಲೂಟಿ: ಆರೋಪ



ತಿ.ನರಸೀಪುರ, ಏ.9– ಬಿಜೆಪಿ ಸರ್ಕಾರ ಹಲವು ಹಗರಣಗಳ ಮೂಲಕ ರಾಜ್ಯವನ್ನು ಲೂಟಿ ಮಾಡುತ್ತಿದೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಈಶ್ವರಗೌಡನಹಳ್ಳಿಯಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ಪಿಎಸ್‌ಐ, ಬಿಟ್ ಕಾಯಿನ್, ಸ್ಯಾಂಟ್ರೋ ರವಿ ಹಗರಣಗಳ ಮೂಲಕ ರಾಜ್ಯವನ್ನು ಲೂಟಿ ಮಾಡಿ ಶೇ.40% ಕಮಿಷನ್ ಸರ್ಕಾರ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ದೊಡ್ಡ ದೊಡ್ಡ ಶ್ರೀಮಂತರು ಕಟ್ಟುವ ಕಾರ್ಪೋರೇಟ್ ಟ್ಯಾಕ್ಸ್‌ನಲ್ಲಿ ಶೇ.10 ರಷ್ಟು ಕಡಿಮೆ ಮಾಡಿದ್ದರಿಂದ ಕೇಂದ್ರ ಸರ್ಕಾರಕ್ಕೆ ಲಕ್ಷ ಕೋಟಿ ರೂ. ನಷ್ಟವಾಗುತ್ತಿದೆ. ಆದರೆ ಜನ ಸಾಮಾನ್ಯರ ತೆರಿಗೆ ಹೆಚ್ಚಿಸಲಾಗಿದೆ. ಜನ ಸಾಮಾನ್ಯರು ಬಳಸುವ ದೈನಂದಿನ ಪದಾರ್ಥಗಳ ಬೆಲೆ ಗಗನಕ್ಕೇರಿದ್ದು, ಬಿಜೆಪಿ ಆಡಳಿತದಲ್ಲಿ ಜನ ಸಾಮಾನ್ಯರು ಬದುಕುವುದೇ ಕಷ್ಟವಾಗಿದೆ ಎಂದು ದೂರಿದರು.

ಹಿಂದುಳಿದವರು, ದಲಿತರು, ಶೋಷಿತ ವರ್ಗವನ್ನು ಸರ್ಕಾರ ಕಡೆಗಣಿಸಿದೆ ಎಂದು ಆರೋಪಿಸಿದ ಯತೀಂದ್ರ ವಿದ್ಯಾಸಿರಿ ಯೋಜನೆ ಮೂಲಕ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ 1200 ರೂ.ಗಳ ಕಾರ್ಯಕ್ರಮವನ್ನು ಬಿಜೆಪಿ ಸರ್ಕಾರ ರದ್ದು ಮಾಡಿದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ 2 ವರ್ಷಗಳಿಂದ ಸರಿಯಾಗಿ ವಿದ್ಯಾರ್ಥಿ ವೇತನ ನೀಡಿಲ್ಲ. ಪಿಎಚ್‌ಡಿ ಮಾಡುವ ದಲಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿಲ್ಲ. ಅನುಗ್ರಹ ಯೋಜನೆಯಡಿ ಕುರಿ ಸತ್ತರೆ ನೀಡುತ್ತಿದ್ದ 5 ಸಾವಿರ ರೂ. ಯೋಜನೆ, ಕೃಷಿಹೊಂಡ ಸೇರಿದಂತೆ ಇನ್ನಿತರೆ ಹಿಂದುಳಿದ ವರ್ಗದ ಅನುಕೂಲಕ್ಕಾಗಿ ಸಿದ್ದರಾಮಯ್ಯ ಜಾರಿಗೆ ತಂದಿದ್ದ ಜನಪ್ರಿಯ ಯೋಜನೆಗಳನ್ನು ರದ್ದು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣೆ ಹಿನ್ನಲೆಯಲ್ಲಿ ಮೀಸಲಾತಿ ಘೋಷಿಸಿರುವ ಸರ್ಕಾರ ಗೊಂದಲ ಸೃಷ್ಟಿಸಿದೆ. ಮೀಸಲಾತಿಯನ್ನು ಕಾನೂನು ಪ್ರಕಾರ ಜಾರಿ ಮಾಡದೇ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ. ರಾಜ್ಯದಲ್ಲಿ ಮತ್ತೆ ಭ್ರಷ್ಟಾಚಾರ ಮುಕ್ತ ಸರ್ಕಾರ ಬೇಕೆಂದರೆ, ಹಿಂದುಳಿದ ವರ್ಗದವರು, ದಲಿತರು, ಶೋಷಿತರ ಹಕ್ಕನ್ನು ರಕ್ಷಣೆ ಮಾಡಬೇಕೆಂದರೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕೆಂದು ಮನವಿ ಮಾಡಿದರು.

ಈ ವೇಳೆ ಹಾರೋಪುರ ಶಿವಣ್ಣ, ಲಾರಿ ಸ್ವಾಮಿ ಸೇರಿದಂತೆ ಮತ್ತಿತರರಿದ್ದರು.



ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಕೆ.ನಾಗರತ್ನಮ್ಮ ಅವರು ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು. ನಗರ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ರಮೇಶ್ ಇದ್ದರು.

ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹೆಸರು ಉಳಿವಿಗಾಗಿ

ಈ ಬಾರಿ ಕೋಟೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸಿ

ಶಾಸಕ ಅನಿಲ್ ಚಿಕ್ಕಮಾದು ಮನವಿ



ಹೆಚ್.ಡಿ.ಕೋಟೆ, ಏ.9– ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿರುವ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹೆಸರು ಉಳಿವಿಗಾಗಿ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸುವಂತೆ ಕಾರ್ಯಕರ್ತರಿಗೆ ಶಾಸಕ ಅನಿಲ್ ಚಿಕ್ಕಮಾದು ಮನವಿ ಮಾಡಿದರು.

ಪಟ್ಟಣದ ತಮ್ಮ ನಿವಾಸದ ಎದುರು ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಧ್ರುವನಾರಾಯಣ್ ಅವರು ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸುವ ಮೂಲಕ 2ನೇ ಬಾರಿಗೆ ಶಾಸಕನನ್ನಾಗಿ ಮಾಡಿ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯ ಮಾಡುವ ಮಹದಾಸೆ ಹೊಂದಿದ್ದರು. ಆದರೆ ಅವರ ನಿಧನ ಕ್ಷೇತ್ರಕ್ಕೆ ಮಾತ್ರವಲ್ಲದೇ ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಹೀಗಾಗಿ ಅವರ ಹೆಸರು ಉಳಿಸಲು ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಅಭ್ಯರ್ಥಿಯಾದ ನನ್ನ ಗೆಲುವಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಸಂಸದ ಧ್ರುವನಾರಾಯಣ್ ನಿಧನದಿಂದ ತೀವ್ರ ಆಘಾತಕ್ಕೊಳಗಾದ ನಾನು ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸುವುದೇ ಬೇಡ ಎಂದು ನಿರ್ಧರಿಸಿದ್ದೆ. ಆದರೆ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಒತ್ತಾಯದ ಮೇರೆಗೆ ಹಾಗೂ ಧ್ರುವನಾರಾಯಣ್ ಆಸೆಯಂತೆ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಗೊಳಿಸಲು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ ಎಂದರು.

ನನ್ನ ತಂದೆ ದಿ.ಚಿಕ್ಕಮಾದು ಅವರು ನಿಧನರಾದ ವೇಳೆ ಧ್ರುವನಾರಾಯಣ್ ಅವರು ನನ್ನನ್ನು ಕಾಂಗ್ರೆಸ್ ಕರೆತಂದು ಶಾಸಕನನ್ನಾಗಿ ಮಾಡಿದರು. ಬಳಿಕ ಅವರ ಮಾರ್ಗದರ್ಶನದಲ್ಲಿ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ಹೀಗಾಗಿ ಈ ಬಾರಿಯ ಚುನಾವಣೆ ಗೆಲುವಿಗೆ ನನ್ನ ಅಭಿವೃದ್ಧಿ ಕಾರ್ಯಗಳು ಹಾಗೂ ಧ್ರುವನಾರಾಯಣ್ ಅವರ ಆಶೀರ್ವಾದ ಶ್ರೀರಕ್ಷೆಯಾಗಲಿದೆ ಎಂದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತವಾಗಿದ್ದು, ಕ್ಷೇತ್ರದ ಮತದಾರರು ನನ್ನನ್ನು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಕಾರ್ಯಕರ್ತರು, ಮುಖಂಡರು ಮಾತನಾಡಿ, ನಮ್ಮ ಬೂತ್ ನಮ್ಮ ಜವಾಬ್ದಾರಿ. ಹೀಗಾಗಿ ನಮ್ಮ ಗ್ರಾಮಗಳಲ್ಲಿ ಕಾಂಗ್ರೆಸ್ ಪಕ್ಷದ ಪರ ಮತಯಾಚಿಸುವ ಮೂಲಕ ಧ್ರುವನಾರಾಯಣ್ ಹೆಸರು ಉಳಿಸುವ ನಿಟ್ಟಿನಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರನ್ನು 2 ಬಾರಿ ಶಾಸಕರನ್ನಾಗಿ ಮಾಡಲು ಶ್ರಮಿಸುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಸಭೆಯಲ್ಲಿ ಇತ್ತೀಚೆಗೆ ನಿಧನರಾದ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹಾಗೂ ಅವರ ಪತ್ನಿ ವೀಣಾ ಧ್ರುವನಾರಾಯಣ್ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು. ಸಭೆಯಲ್ಲಿ ಹಲವು ಬಿಜೆಪಿ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಸಭೆಯಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕು ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷ, ಮಾದಪ್ಪ, ಜಿಪಂ ಸದಸ್ಯ ಚಿಕ್ಕವೀರನಾಯಕ, ಮುಖಂಡರಾದ ಕಾವೇರ, ಹೆಚ್.ಸಿ.ಮಂಜುನಾಥ್, ಸತೀಶ್ ಗೌಡ, ಹೆಚ್.ಸಿ.ನರಸಿಂಹಮೂರ್ತಿ, ಬಾಲಯ್ಯ, ಪಿ.ನಾಗರಾಜು, ಸೋಮೇಶ್, ಈರೇಗೌಡ, ಮುದ್ದು ಮಲ್ಲಯ್ಯ, ಕೆಂಡಗಣ್ಣಸ್ವಾಮಿ, ಶ್ರೀನಿವಾಸ್, ಬಿ.ವಿ.ಬಸವರಾಜು, ಭಾಗ್ಯಲಕ್ಷ್ಮಿ, ಬಸವರಾಜಪ್ಪ ಪ್ರಭಾಕರ, ಇಬ್ರಾಹಿಂ, ಶಿವರಾಜು, ಆನಂದ್, ಮರಿದೇವಯ್ಯ, ಅಶೋಕ್, ಮಲ್ಲೇಶ್, ನಟರಾಜ್, ಬೈಪಾಸ್ ಮಂಜು, ನಯಾಸ್, ಗಣೇಶ್ ಆಚಾರ್, ಪ್ರದೀಪ್, ರಾಜ ನಾಯಕ, ರಾಜು, ಮರಳಿಗೌಡ, ಸುರೇಶ್, ಚಾಮರಾಜು, ವೆಂಕಟೇಶ್ ಸೇರಿದಂತೆ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ಏ.17ಕ್ಕೆ ನಾಮಪತ್ರ ಸಲ್ಲಿಕೆ

ಇದೇ ತಿಂಗಳ ಏ.17ರಂದು ಪಟ್ಟಣದ ಮೇಟಿಕುಪ್ಪೆ ರಸ್ತೆಯಲ್ಲಿರುವ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮೆರವಣಿಗೆ ಮೂಲಕ ಪಟ್ಟಣದ ತಾಲೂಕು ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಲಾಗುವುದು. ಹೀಗಾಗಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು.
–ಅನಿಲ್ ಚಿಕ್ಕಮಾದು, ಶಾಸಕ.













ಸತತ 5 ಸಿಕ್ಸರ್ ಸಿಡಿಸಿದ ರಿಂಕು ಸಿಂಗ್
ಕೆಕೆಆರ್‌ಗೆ ರೋಚಕ ಜಯ



ಅಹಮದಾಬಾದ್, ಏ.9– ವೆಂಕಟೇಶ್ ಅಯ್ಯರ್ ಅವರ ಸಿಡಿಲಬ್ಬರದ ಅರ್ಧಶತಕ ಹಾಗೂ ರಿಂಕು ಸಿಂಗ್ ಸಿಡಿಸಿದ ಸತತ 5 ಸಿಕ್ಸರ್‌ಗಳ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ವಿರುದ್ಧ 3 ವಿಕೆಟ್‌ಗಳ ರೋಚಕ ಜಯ ದಾಖಲಿಸಿತು.

ಕೊನೆ ಓವರ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಗೆಲ್ಲಲು 29 ರನ್‌ಗಳ ಅಗತ್ಯವಿತ್ತು. ರಿಂಕು ಸಿಂಗ್ ಕೊನೆ ಓವರ್‌ನಲ್ಲಿ ತಾವೆದುರಿಸಿದ 5 ಎಸೆತಗಳಲ್ಲೂ ಸಿಕ್ಸರ್ ಸಿಡಿಸುವ ಮೂಲಕ ತಂಡಕ್ಕೆ ರೋಚಕ ಗೆಲುವು ತಂದುಕೊಟ್ಟರು. ರಿಂಕು ಸಿಂಗ್ ಕೆಕೆಆರ್ ಪಾಲಿಗೆ ಹೀರೋ ಎನಿಸಿಕೊಂಡರೆ, ಎಡಗೈ ವೇಗಿ ಯಶ್ ದಯಾಳ್ ಗುಜರಾತ್ ಪಾಲಿಗೆ ವಿಲನ್ ಆಗಿ ಪರಿಣಮಿಸಿದರು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುಜರಾತ್ ಟೈಟಾನ್ಸ್ ನೀಡಿದ 205 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಮೊತ್ತ 28 ರನ್ ಆಗುವಷ್ಟರಲ್ಲಿ ಪ್ರಮುಖ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ಇಂಪ್ಯಾಕ್ಟ್ ಪ್ಲೇಯರ್ ವೆಂಕಟೇಶ್ ಅಯ್ಯರ್ ಹಾಗೂ ನಾಯಕ ನಿತೀಶ್ ರಾಣಾ ಸ್ಫೋಟಕ ಶತಕದ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಕೇವಲ 55 ಎಸೆತಗಳಲ್ಲಿ ಈ ಜೋಡಿ 100 ರನ್ ಜತೆಯಾಟವಾಡಿತು. ಸಮಯೋಚಿತ ಬ್ಯಾಟಿಂಗ್ ನಡೆಸಿದ ನಾಯಕ ನಿತೀಶ್ ರಾಣಾ 29 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 45 ರನ್ ಬಾರಿಸಿ ಅಲ್ಜರಿ ಜೋಸೆಫ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ಮತ್ತೊಂದು ತುದಿಯಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದ ವೆಂಕಟೇಶ್ ಅಯ್ಯರ್, ಕೆಕೆಆರ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಅಯ್ಯರ್ ಕೇವಲ 40 ಎಸೆತಗಳಲ್ಲಿ 8 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 83 ರನ್ ಬಾರಿಸಿ ಅಲ್ಜರಿ ಜೋಸೆಫ್‌ಗೆ ವಿಕೆಟ್ ಒಪ್ಪಿಸಿದರು. ಈ ವೇಳೆ 17ನೇ ಓವರ್‌ನಲ್ಲಿ ದಾಳಿಗಿಳಿದ ರಶೀದ್ ಖಾನ್ ಮೊದಲ ಮೂರು ಎಸೆತಗಳಲ್ಲಿ ಆಂಡ್ರೆ ರಸೆಲ್, ಸುನಿಲ್ ನರೈನ್ ಹಾಗೂ ಶಾರ್ದೂಲ್ ಠಾಕೂರ್ ವಿಕೆಟ್ ಕಬಳಿಸುವ ಮೂಲಕ ಟೂರ್ನಿಯಲ್ಲಿ ಮೊದಲ ಹ್ಯಾಟ್ರಿಕ್ ವಿಕೆಟ್ ಕಬಳಿಸಿ, ಪಂದ್ಯದ ದಿಕ್ಕನ್ನೇ ಬದಲಾಯಿಸಿದರು. ಆದರೆ ಕೊನೆ ಓವರ್‌ನಲ್ಲಿ ರಿಂಕು ಸಿಂಗ್, ಕೆಕೆಆರ್ ಪರ ಸತತ 5 ಸಿಕ್ಸರ್ ಸಿಡಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ರಿಂಕು ಸಿಂಗ್ ಕೇವಲ 21 ಎಸೆತಗಳಲ್ಲಿ 1 ಬೌಂಡರಿ ಹಾಗೂ 6 ಸಿಕ್ಸರ್ ಸಹಿತ ಅಜೇಯ 48 ರನ್ ಬಾರಿಸುವ ಮೂಲಕ ಕೆಕೆಆರ್ ತಂಡದ ಗೆಲುವಿನ ರೂವಾರಿಯಾದರು. ಅಂತಿಮವಾಗಿ ಕೆಕೆಆರ್ 7 ವಿಕೆಟ್ ನಷ್ಟಕ್ಕೆ 207ರನ್ ಗಳಿಸಿ ಗೆಲುವಿನ ನಗೆ ಬೀರಿತು. ಗುಜರಾತ್ ಟೈಟನ್ಸ್ ಪರ ರಶೀದ್ ಖಾನ್ 3, ಅಲ್ಜರಿ ಜೋಸೆಫ್ 2, ಜೋಶುವಾ ಲಿಟಲ್ ಹಾಗೂ ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 204ರನ್‌ಗಳ ಬೃಹತ್ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವೃದ್ಧಿಮಾನ್ ಸಾಹ 17 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಜೊತೆಗೂಡಿದ ಸಾಯಿ ಸುದರ್ಶನ್ ಹಾಗೂ ಶುಭ್‌ಮನ್ ಗಿಲ್ 67ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು ಶತಕದ ಗಡಿ ದಾಟಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಸಾಯಿ ಸುದರ್ಶನ್ 53 ಹಾಗೂ ಶುಭ್‌ಮನ್ ಗಿಲ್ 39ರನ್ ಗಳಿಸಿ ಔಟಾದರು. ಬಳಿಕ ಬಂದ ಅಭಿನವ್ ಮನೋಹರ್ ಬಿರುಸಿನ 3 ಬೌಂಡರಿ ಒಳಗೊಂಡ 14ರನ್ ಪೇರಿಸಿ ನಿರ್ಗಮಿಸಿದರು. ಆದರೆ ನಂತರ ಕ್ರೀಸ್‌ಗೆ ಆಗಮಿಸಿದ ವಿಜಯ ಶಂಕರ್ ಕೇವಲ 24ಎಸೆತಗಳಲ್ಲಿ 5 ಸಿಕ್ಸರ್, 4 ಬೌಂಡರಿ ಒಳಗೊಂಡ 63 ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಕೆಕೆಆರ್ ಪರ ಸುನೀಲ್ ನರೇನ್ 3, ಸಾಯುಷ್ ಶರ್ಮಾ 1 ವಿಕೆಟ್ ಉರುಳಿಸಿದರು. ರಿಂಕು ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	3	2	1	0	4
ಕೋಲ್ಕತ್ತಾ	3	2	1	0	4
ಲಕ್ನೋ	3	2	1	0	4
ಗುಜರಾತ್	3	2	1	0	4
ಸಿಎಸ್‌ಕೆ	3	2	1	0	4
ಪಂಜಾಬ್	3	2	1	0	4
ಆರ್‌ಸಿಬಿ	2	1	1	0	2
ಎಸ್‌ಆರ್‌ಹೆಚ್	3	1	2	0	2
ಮುಂಬೈ	2	0	2	0	0
ಡೆಲ್ಲಿ	3	0	3	0	0

ಗೆಲುವಿನ ಖಾತೆ ತೆರೆದ ಸನ್‌ರೈಸರ್ಸ್ ಹೈದರಾಬಾದ್



ಹೈದರಾಬಾದ್, ಏ.9– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಸನ್‌ರೈಸರ್ಸ್ ಹೈದರಾಬಾದ್ ಪಂಜಾಬ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ಗೆಲುವಿನ ಖಾತೆ ತೆರೆದಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 143 ರನ್‌ಗಳ ಸವಾಲಿನ ಮೊತ್ತ ದಾಖಲಿಸಿತು. ತಂಡದ ಪರ ನಾಯಕ ಶಿಖರ್ ಧವನ್ 66 ಎಸೆತಗಳಲ್ಲಿ 5 ಸಿಕ್ಸರ್, 12 ಬೌಂಡರಿ ಒಳಗೊಂಡ 99 ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ 1 ರನ್‌ನಿಂದ ಶತಕದಿಂದ ವಂಚಿತರಾದರು. ಇವರಿಗೆ ಉತ್ತಮ ಸಾಥ್ ನೀಡಿದ ಸ್ಯಾಮ್ ಕರ್ರನ್ 15 ಎಸೆತಗಳಲ್ಲಿ 1 ಸಿಕ್ಸರ್, 3ಬೌಂಡರಿ ಒಳಗೊಂಡ 22 ರನ್ ಗಳಿಸಿದ್ದು ಬಿಟ್ಟರೇ, ಉಳಿದವರಿಂದ ಎಡರಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಸನ್‌ರೈಸರ್ಸ್ ಹೈದರಾಬಾದ್ ಪರ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಮಯಾಂಕ್ ಮಾರ್ಕಂಡೆ 4, ಮಾರ್ಕೊ ಜಾನ್ಸೆನ್ 2, ಭುವನೇಶ್ವರ್ ಕುಮಾರ್ 1 ವಿಕೆಟ್ ಪಡೆದರು.

ಸವಾಲಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಆರಂಭದಲ್ಲೇ 13ರನ್ ಗಳಿಸಿದ್ದ ಹ್ಯಾರಿ ಬ್ರೂಕ್ ಹಾಗೂ 21 ರನ್ ಗಳಿಸಿದ್ದ ಮಯಾಂಕ್ ಅಗರ್ವಾಲ್ ವಿಕೆಟ್ ಒಪ್ಪಿಸಿದರು. 3ನೇ ವಿಕೆಟ್‌ಗೆ ಜೊತೆಯಾದ ರಾಹುಲ್ ತ್ರಿಪಾಠಿ ಹಾಗೂ ಏಯ್ಡನ್ ಮಾರ್ಕ್‌ಮ್ ಶತಕದ ಜತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ರಾಹುಲ್ ತ್ರಿಪಾಠಿ 48 ಎಸೆತಗಳಲ್ಲಿ 10 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 74 ರನ್ ಬಾರಿಸಿದರೆ, ನಾಯಕ ಏಯ್ಡನ್ ಮಾರ್ಕ್‌ಮ್ ಸಮಯೋಚಿತ 37 ರನ್ ಬಾರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಪಂಜಾಬ್ ಪರ ಅರ್ಷದೀಪ್ ಸಿಂಗ್, ರಾಹುಲ್ ಚಹಾರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ನಡೆಸಿದ ಪಂಜಾಬ್ ನಾಯಕ ಶಿಖರ್ ಶವನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



[ಏಪ್ರಿಲ್ 10]
ಬೆಂಗಳೂರು V/S ಲಕ್ನೋ
ಸ್ಥಳ: ಎಂ.ಚಿನ್ನಸ್ವಾಮಿ ಮೈದಾನ, ಬೆಂಗಳೂರು
ಸಮಯ: ಸಂಜೆ 7.30

ಕೊಡವ ಕುಟುಂಬಗಳ 'ಅಪ್ಪಚೆಟ್ಟೋಳಂಡ ಹಾಕಿ ಉತ್ಸವ'ಕ್ಕೆ ತೆರೆ

ಚಾಂಪಿಯನ್ ಪಟ್ಟ ಅಲಂಕರಿಸಿದ ಕುಪ್ಪಂಡ ತಂಡ

ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡ ಕುಲ್ಲೇಟಿರ ತಂಡ




'ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ' ಚಾಂಪಿಯನ್ ಕುಪ್ಪಂಡ ತಂಡದ ಸಂಭ್ರಮಾಚರಣೆ

ಮಡಿಕೇರಿ, ಏ.9– ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಕೊಡವ ಕುಟುಂಬಗಳ ನಡುವಿನ 23ನೇ ವರ್ಷದ ಪ್ರತಿಷ್ಠಿತ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆ'ಗೆ ತೆರೆಬಿದ್ದಿದ್ದು, ಈ ಬಾರಿಯ ಹಾಕಿ ಉತ್ಸವದಲ್ಲಿ ಕುಪ್ಪಂಡ(ಕೈಕೇರಿ) ತಂಡ ಚಾಂಪಿಯನ್ ಪಟ್ಟ ಅಲಂಕರಿಸುವ ಮೂಲಕ ಬಲಿಷ್ಟ ತಂಡವಾಗಿ ಹೊರಹೊಮ್ಮಿದೆ. ಎದುರಾಳಿ ತಂಡದ ವಿರುದ್ಧ ಸಮಬಲ ಪ್ರದರ್ಶನ ನೀಡಿದ್ದರೂ ಕೂಡ ಶೂಟ್‌ಔಟ್‌ನಲ್ಲಿ ಕೇವಲ 2 ಗೋಲು ದಾಖಲಿಸಿದ ಕುಲ್ಲೇಟಿರ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಇಂದು ನಡೆದ ಫೈನಲ್ ಪಂದ್ಯಾವಳಿಯನ್ನು ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಅವರು ಬೆಳ್ಳಿಯ ಹಾಕಿ ಸ್ಟಿಕ್‌ನಿಂದ ಬೆಳ್ಳಿಯ ಹಾಕಿ ಚೆಂಡನ್ನು ಹೊಡೆಯುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು.

ಬಳಿಕ ನಡೆದ ರೋಚಕ ಪಂದ್ಯದಲ್ಲಿ ಕುಪ್ಪಂಡ(ಕೈಕೇರಿ) ತಂಡ ಮೊದಲ ಕ್ವಾಟರ್‌ನಲ್ಲಿ 1 ಗೋಲು ಗಳಿಸಿ ಮುನ್ನಡೆ ಪಡೆಯಿತು. ಬಿರುಸಿನ ಆಟದ ಪ್ರದರ್ಶನ ನೀಡಿದ ಕುಲ್ಲೇಟಿರ ತಂಡ ದ್ವಿತೀಯಾರ್ಧದಲ್ಲಿ ಎದುರಾಳಿ ಕುಪ್ಪಂಡ(ಕೈಕೇರಿ) ವಿರುದ್ಧ 1 ಗೋಲು ದಾಖಲಿಸಿ ಸಮಬಲ ಸಾಧಿಸಿತು. ಆದರೆ ನಿಗಧಿತ ಅವಧಿಯಲ್ಲಿ ಉಭಯ ತಂಡಗಳಿಗೆ ಒಟ್ಟು 11 ಪೆನಾಲ್ಟಿ ಕಾರ್ನರ್ ಅವಕಾಶ ದೊರೆಯಿತಾದರೂ, ಯಾವುದೇ ಗೋಲು ದಾಖಲಿಸದ ಕಾರಣ ಪಂದ್ಯ ಡ್ರಾ ಆಯಿತು. ಈ ಹಿನ್ನೆಯಲ್ಲಿ ವಿಜೇತ ತಂಡವನ್ನು ನಿರ್ಧರಿಸಲು ಶೂಟ್‌ಔಟ್ ಅಳವಡಿಸಲಾಯಿತು. ಶೂಟ್‌ಔಟ್ ನಲ್ಲಿ ಕುಪ್ಪಂಡ(ಕೈಕೇರಿ) ತಂಡ ಒಟ್ಟು 4 ಗೋಲು ಬಾರಿಸಿದರೆ, ಕುಲ್ಲೇಟಿರ ತಂಡ ಕೇವಲ 2 ಗೋಲು ಗಳಿಸಿ ಸೋಲು ಕಂಡಿತು. ಆ ಮೂಲಕ ಕುಪ್ಪಂಡ (ಕೈಕೇರಿ) ತಂಡ 2023ರ ಬಲಿಷ್ಟ ತಂಡವಾಗಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿತು.



ಬಹುಮಾನ ವಿತರಣೆ: ಚಾಂಪಿಯನ್ ತಂಡಕ್ಕೆ 3 ಲಕ್ಷ ರೂ. ನಗದು ಹಾಗೂ ಟ್ರೋಫಿ, ರನ್ನರ್ಸ್ ತಂಡಕ್ಕೆ 2 ಲಕ್ಷ ರೂ. ನಗದು ಹಾಗೂ ಟ್ರೋಫಿಗಳನ್ನು ಗಣ್ಯರು ವಿತರಿಸಿ ಶುಭ ಕೋರಿದರು. ಕುಲ್ಲೇಟಿರ ತಂಡದ ಅವನೀಶ್ ಮಂದಪ್ಪ ಅವರು ಪಂದ್ಯ ಶ್ರೇಷ್ಟ ಹಾಗೂ ಕುಪ್ಪಂಡ(ಕೈಕೇರಿ) ಸೋಮಯ್ಯ ಅವರು ಸರಣಿ ಶ್ರೇಷ್ಟ ಪ್ರಶಸ್ತಿಗೆ ಬಾಜನರಾದರು. ಸೋಮಯ್ಯ ಅವರಿಗೆ 1 ಲಕ್ಷ ರೂ. ನಗದು ಹಾಗೂ ಟ್ರೋಫಿ ಹಾಗೂ ಅವನೀಶ್ ಮಂದಪ್ಪ ಅವರಿಗೆ 50 ಸಾವಿರ ರೂ. ನಗದು ಹಾಗೂ ಟ್ರೋಫಿ ನೀಡಿ ಗೌರವಿಸಲಾಯಿತು. ಚಾಂಪಿಯನ್ ಮತ್ತು ರನ್ನರ್ಸ್ ತಂಡದ ಆಟಗಾರರಿಗೆ ವೈಯಕ್ತಿಕ ಬಹುಮಾನಗಳನ್ನು ನೀಡಲಾಯಿತು.

ಸ್ಥಾನಕ್ಕಾಗಿ ಪೈಪೋಟಿ: ಮಾಜಿ ಚಾಂಪಿಯನ್ ನೆಲ್ಲಮಕ್ಕಡ ತಂಡ ಮತ್ತೊಂದು ಮಾಜಿ ಚಾಂಪಿಯನ್ ಪಳಂಗಂಡ ತಂಡವನ್ನು 1–0 ಗೋಲ್‌ನಿಂದ ಸೋಲಿಸುವ ಮೂಲಕ 3ನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು.

ಸೆಮಿ ಫೈನಲ್‌ನಲ್ಲಿ ಪರಾಭವಗೊಂಡ 2 ತಂಡಗಳ ನಡುವೆ ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ನಡೆದ ಪಂದ್ಯದ ಮೊದಲಾರ್ಧದಲ್ಲೇ ನೆಲ್ಲಮಕ್ಕಡ ತಂಡದ ಪ್ರತೀಕ್ ಪೊನ್ನಣ್ಣ ಗೋಲ್ ಬಾರಿಸುವ ಮೂಲಕ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಪಂದ್ಯಾವಳಿಯ ಕೊನೆಯ ವರೆಗೂ ಪ್ರಯತ್ನಿಸಿದ ಪಳಂಗಂಡ ತಂಡದಿಂದ ಒಂದೂ ಗೋಲು ದಾಖಲಾಗಲಿಲ್ಲ. ಪಂದ್ಯದಲ್ಲಿ ಜಯಗಳಿಸಿದ ನೆಲ್ಲಮಕ್ಕಡ ತಂಡ 3ನೇ ಬಹುಮಾನ ಪಡೆದರೆ ಪಳಂಗಂಡ ತಂಡ 4ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಮೂರನೇ ಸ್ಥಾನ ಪಡೆದ ನೆಲ್ಲಮಕ್ಕಡ ತಂಡಕ್ಕೆ 1ಲಕ್ಷ ನಗದು ಮತ್ತು ಟ್ರೋಫಿ ಹಾಗೂ ನಾಲ್ಕನೇ ಸ್ಥಾನವನ್ನು ಅಲಂಕರಿಸಿದ ಪಳಂಗಂಡ ತಂಡಕ್ಕೆ 50 ಸಾವಿರ ರೂ. ನಗದು, ಆಕರ್ಷಕ ಟ್ರೋಫಿ ನೀಡಿ ಗೌರವಿಸಲಾಯಿತು.



ರನ್ನರ್ ಅಪ್ ಕುಲ್ಲೇಟಿರ ತಂಡ